ಕನ್ನಡ ಕಟ್ಟಿದವರು ಮಾಲೆ

# ಕ.ವೆಂ. ರಾಘವಾಚಾರ್

ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರೀ

ಪ್ರಧಾನ ಸಂಪಾದಕರು

**ಡಾ. ಸಿದ್ಧಲಿಂಗಯ್ಯ**

ಸಂಪಾದಕರು

**ಡಾ. ಕರೀಗೌಡ ಬೀಚನಹಳ್ಳಿ**

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಬೆಂಗಳೂರು-೫೬೦ ೦೦೨

**K.V. RAGHAVACHAR** Written by H.R.Shrisha **(KANNADA KATTIDAVARU MAALE)** Published By **B.H Mallikarjun**, Administrative Officer, Kannada Pustaka Pradhikara, Kannada Bhavana, J.C.Road, Bengaluru -560002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - **ಕನ್ನಡ ಪುಸ್ತಕ ಪ್ರಾಧಿಕಾರ,** ಬೆಂಗಳೂರು

First Print : 2011

Pages : Xiv + 98

Copies:1000

Price : 60

ಮೊದಲ ಮುದ್ರಣ : ೨೦೧೧

ಪುಟಗಳು : ೧೪ + ೯೮

ಪ್ರತಿಗಳು : ೧೦೦೦

ಬೆಲೆ : ರೂ ೬೦

ಕರಡು ತಿದ್ದಿದವರು : ಲೇಖಕರು

**ಪ್ರಕಾಶಕರು:**

**ಬಿ.ಎಚ್.ಮಲ್ಲಿಕಾರ್ಜುನ**

ಆಡಳಿತಾಧಿಕಾರಿಗಳು

**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು-೫೬೦ ೦೦೨

ಮುದ್ರಕರು:

**ಮೆ|| ಪ್ರಿಂಟ್ ಪಾರ್ಕ್**

೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,

ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧

ದೂ : ೦೮೦-೨೩೪೨೨೮೩೮

<u>ಕನ್ನಡ ಕಟ್ಟಿದವರು ಮಾಲೆ</u>

ಪ್ರಧಾನ ಸಂಪಾದಕರು

ಡಾ. ಸಿದ್ದಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ ಮಂಡಳಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಹೊರೆಯಾಲ ದೊರೆಸ್ವಾಮಿ

ಪ್ರೊ. ಸುಕನ್ಯಾ ಮಾರುತಿ

ಡಾ. ಎಚ್. ಟಿ. ಪೋತೆ

ಶ್ರೀ ಪ್ರಕಾಶ್ ಕಂಬತ್ತಳ್ಳಿ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ "ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ, ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)

ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ ಸಂಪಾದಕ ಸಮಿತಿಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ-ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ-ಪ್ರಭಾವಗಳು, ಭಾಗವಹಿಸಿದ ಚಳುವಳಿಹೋರಾಟಗಳು, ಸಂಘಟನೆಗಳು, ನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ-ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ,

ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು-ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ- ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ

# ಲೇಖಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರ 'ಕನ್ನಡ ಕಟ್ಟಿದವರು' ಮಾಲಿಕೆಗೆ ನನ್ನಿಂದ ಕ.ವೆಂ. ರಾಘವಾಚಾರ್ ಅವರನ್ನು ಕುರಿತ ಬರಹವನ್ನು ಬಯಸಿತು. ಇದು ನನಗೆ ದೊರೆತ ವಿಶೇಷಭಾಗ್ಯವೆಂದು ನಾನು ತಿಳಿದಿದ್ದೇನೆ.

ಕ.ವೆಂ. ರಾಘವಾಚಾರ್ಯರು ನನ್ನ ಕಾಲೇಜು ವಿದ್ಯಾಭ್ಯಾಸ ಕಾಲದಲ್ಲಿ (೧೯೫೦-೫೪) ನನಗೆ, ಅಧ್ಯಾಪಕರಾಗಿದ್ದವರು. ಒಂದು ವರ್ಷ ಕಾಲ ವಾರಾನ್ನವಿಟ್ಟು ಪೋಷಿಸಿದವರು: ತಪ್ಪಿಹೋಗಿದ್ದ ಶುಲ್ಕವಿನಾಯಿತಿಯ ವಿಷಯವನ್ನು ತಾವಾಗಿಯೇ ತಿಳಿದುಕೊಂಡು ಮಹಾರಾಜ ಕಾಲೇಜು ಪ್ರಿನ್ಸಿಪಾಲರಲ್ಲಿ ಮಾತಾಡಿ ಆ ವಿನಾಯಿತಿಯನ್ನು ಮತ್ತೆ ಕೊಡಿಸಿದವರು ; ಸಿದ್ಧತೆ ಸಾಲದೆ ಎಂ.ಎ. ಪರೀಕ್ಷೆಗೆ ಕುಳಿತುಕೊಳ್ಳುವುದೇ ಬೇಡವೆ ಎಂಬ ಸಂದಿಗ್ಧ ಮನಃಸ್ಥಿತಿಯಲ್ಲಿದ್ದಾಗ, ತಿಳಿವಳಿಕೆ ಹೇಳಿ ಪರೀಕ್ಷೆ ತೆಗೆದುಕೊಳ್ಳುವಂತೆ ಮಾಡಿದವರು ; ಕೆಲಸಕ್ಕೆ ಸೇರಬೇಕೆಂದು ಪ್ರಯತ್ನಿಸಿದಾಗ ಇದ್ದ ಕಡೆಯಿಂದಲೇ ಯೋಗ್ಯತಾಪತ್ರವನ್ನು ಬರೆದು ಅಂಚೆಯಲ್ಲಿ ಕಳಿಸಿಕೊಟ್ಟು ಆಶೀರ್ವದಿಸಿದವರು.

ಈ ಉಪಾಕರಪರಂಪರೆಗೆ ಈ ಬರಹ ಸಾಟಿಯಲ್ಲ ಎಂದು ನಾನು ಬಲ್ಲೆ. ಆದರೆ ಸ್ವಲ್ಪವಾದರೂ ಋಣಸಂದಾಯಕ್ಕೆ ದೊರೆತ ಒಂದು ಒಳ್ಳೆಯ ಅವಕಾಶವೆಂದು ನನಗೆ ಸಮಾಧಾನವಿದೆ.

ಆಚಾರ್ಯರ ಆಪ್ತಮಿತ್ರರೂ ನನ್ನ ಇನ್ನೊಬ್ಬ ಗುರುಗಳೂ ಆಗಿದ್ದ ಡಿ.ಎಲ್. ನರಸಿಂಹಾಚಾರ್ಯರ ಸಂಯುಕ್ತಲೇಖನಸಂಪುಟ 'ಪೀಠಿಕೆಗಳು ಲೇಖನಗಳು' ೧೯೭೧ರಲ್ಲಿ ಪ್ರಕಟವಾದ ಮೇಲೆ ಇವರ ಪೀಠಿಕೆ-ಲೇಖನ-ಭಾಷಣಗಳ ಒಂದು ಸಂಯುಕ್ತಸಂಪುಟವೂ ಪ್ರಕಟವಾಗಲೆಂದು ನಾನು ಆಸೆಪಟ್ಟೆ. ಈ ವಿಷಯವನ್ನು ಅವರಲ್ಲಿ ಪ್ರಸ್ತಾವಿಸಿದೆ. ಮೊದಲು ಅವರು ಒಪ್ಪಲಿಲ್ಲ ; ಕಷ್ಟಪಟ್ಟು ಒಪ್ಪಿಸಿದೆ. ನಾನು ಸಿದ್ಧಪಡಿಸಿ ಸಂಕಲಿಸಿದ 'ನಂದಾನೆನಪು' ೧೯೭೩ರಲ್ಲಿ ಮೈಸೂರಿನ ಉಷಾಸಾಹಿತ್ಯಮಾಲೆಯ ಆರ್.ಎನ್.ಹಬ್ಬು ಅವರ ವಿಶ್ವಾಸದಿಂದ ಬೆಳಕುಕಂಡಿತು. ಇದು ನಿಮಿತ್ತವಾಗಿ, ಸಂಪುಟದ ಭಾಗವಾಗಿ ಆಚಾರ್ಯರು ಆತ್ಮವೃತ್ತವೂ ಸೇರುವಂತಾಯಿತು. ಆತ್ಮವೃತ್ತದೊಂದಿಗೆ ಕನ್ನಡ ಭಾಷೆಯ ಶಬ್ದಕೋಶಕ್ಕೆ 'ನಂದಾನೆನಪು' ಎಂಬುದೂ ಸೇರಿದಂತೆ ಅನೇಕ ಹೊಸ ಶಬ್ದಗಳು ಸೇರಿ ಅದು ವಿಸ್ತಾರಗೊಳ್ಳುವಂತಾಯಿತು.

ದಿಟವಾಗಿ, ೨೦೦೪ರಲ್ಲಿ ಆಚಾರ್ಯರು ನೂರರ ನೆನಪಿನ ಉತ್ಸವ ನಡೆಯಬೇಕಾಗಿತ್ತು. ಆಗ ನಮಗೆ ನೆನಪಾಗಲಿಲ್ಲ. ಮತ್ತೆ ಮಿತ್ರರೊಂದಿಗೆ ಸಮಾಲೋಚಿಸಿ, ಆಚಾರ್ಯರ ಪರಮಾಪ್ತಗುರುಗಳಾಗಿದ್ದ ಶ್ರೀಯವರ ಹೆಸರಿನ ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನದಲ್ಲಿ ನಾನು ಅಧ್ಯಕ್ಷನಾಗಿದ್ದಾಗ, ೨೦೦೬ರಲ್ಲಿ ಅದರ ಏರ್ಪಾಡು ಮಾಡುವುದು ನನಗೆ ಸಾಧ್ಯವಾಯಿತು. ಆಗಲೇ ಪ್ರತಿಷ್ಠಾನದಲ್ಲಿ ಒಂದು ವಾರ್ಷಿಕ ದತ್ತಿ ಉಪನ್ಯಾಸದ ವ್ಯವಸ್ಥೆಯೂ ಆಯಿತು. ಈಗ ಅದು ಅಲ್ಲಿ ನಡೆದುಕೊಂಡುಬರುತ್ತಿದೆ. ದೊಡ್ಡವರ ಹೆಸರು ನಂದಾನೆನಪಾಗಿ ಉಳಿಯುವುದರಲ್ಲಿ ನಮ್ಮ ಶ್ರೇಯಸ್ಸಿದೆ ಎಂದು ಎಲ್ಲರೂ ಬಲ್ಲರು.

ಈ ಪುಸ್ತಕಕ್ಕೆ ಹಾಗೆ ಅನುವು ಮಾಡಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ನಾನು ಅಭಿನಂದನೆ ಹೇಳುತ್ತೇನೆ, ಕೃತಜ್ಞತೆಯನ್ನೂ ಹೇಳುತ್ತೇನೆ, ಮಾಹಿತಿ ಸಂಗ್ರಹದಲ್ಲಿ ನನಗೆ ನೆರವಾದ ಬಿ.ಎಂ.ಶ್ರೀ.ಸ್ಮಾರಕಪ್ರತಿಷ್ಠಾನಕ್ಕೆ, ಕನ್ನಡ ಸಾಹಿತ್ಯ ಪರಿಷತ್ತಿಗೆ ಹಾಗೂ ತರುಣಮಿತ್ರ ಎಸ್,.ಕಾರ್ತಿಕ್ ಅವರಿಗೆ ಕೂಡ ನಾನೂ ಕೃತಜ್ಞ.

**ಟಿ.ವಿ.ವೆಂಕಟಾಚಲ ಶಾಸ್ತ್ರೀ**

# ಪರಿವಿಡಿ

ಲೇಖಕರ ಮಾತು

೧. ಬಾಲ್ಯ, ವಿದ್ಯಾಭ್ಯಾಸ

೨. ವೃತ್ತಿ ಪ್ರವೃತ್ತಿಗಳ ಚಕ್ರತೀರ್ಥದಲ್ಲಿ

೩. ಸಂಶೋಧನಾತ್ಮಕ ಮತ್ತು ವಿಮರ್ಶಾತ್ಮಕ ಬಿಡಿಬರಹಗಳು

೪. ನಂದಾನೆನಪು

೫. ಗೀಕ್‌ನಾಟಕಗಳ ಕನ್ನಡ ಭಾಷಾಂತರಗಳು

೬. ಅರಿಸ್ಟಾಟಲಿನ (ಅರಿಸ್ತೊತಲೇಸಿನ)

೭. ಕಾವ್ಯಮೀಮಾಂಸೆಯ ಕನ್ನಡ ಭಾಷಾಂತರ

೮. ಯಶೋಧರಚರಿತೆ

೮. ಇತರ ಸಾಹಿತ್ಯ ಚಟುವಟಿಕೆಗಳು

೯. ವ್ಯಕ್ತಿತ್ವ

ಅನುಬಂಧಗಳು

# ೧. ಬಾಲ್ಯ, ವಿದ್ಯಾಭ್ಯಾಸ

ಕ.ವೆಂ. ರಾಘವಾಚಾರ್ಯರು (೧೯೦೪-೧೯೭೭) ಕನ್ನಡ ಭಾಷೆ ಸಾಹಿತ್ಯಗಳ ಗ್ರಂಥಸಂಪಾದನೆ, ಭಾಷಾವಿಜ್ಞಾನ ಮತ್ತು ಭಾಷಾಂತರಗಳ ಕ್ಷೇತ್ರಗಳಲ್ಲಿ ವಿಶೇಷವಾಗಿ ಕೃಷಿ ಮಾಡಿ ಖ್ಯಾತರಾದವರು. ಕನ್ನಡ ಸಾಹಿತ್ಯಲೋಕ ಅವರನ್ನು ಸಾಮಾನ್ಯವಾಗಿ ನೆನೆಯುವುದು ಅವರ ಗ್ರೀಕ್ ಭಾಷೆಯ ಪರಿಚಯ ಪರಿಶ್ರಮಗಳಿಗಾಗಿ, ಆ ಭಾಷೆಯಿಂದ ನೇರವಾಗಿ ಕನ್ನಡಕ್ಕೆ ಭಾಷಾಂತರಿಸಿದ ಕೆಲವು ಪ್ರಾಚೀನ ನಾಟಕಗಳ ಹಾಗೂ ಸಾಹಿತ್ಯಭಾಗಗಳ ಕಾರಣದಿಂದಾಗಿ. ಅವರು ದಕ್ಷತೆಯಿಂದ ಸಂಪಾದಿಸಿದ ಜನ್ನಕವಿಯ 'ಯಶೋಧರ ಚರಿತೆ'ಯ ಪೀಠಿಕೆ ಮತ್ತು ಕೃತಿಸಂಗ್ರಹಕೌಶಲ ಅವರ ವೈದುಷ್ಯ ಪ್ರತಿಭೆಗಳನ್ನು ಮನಗಾಣಿಸಿರುವ ಉತ್ಕೃಷ್ಟ ಸಾಕ್ಷ್ಯಗಳಾಗಿವೆಯೆಂದು ಎಂದಿನಿಂದಲೂ ವಿದ್ವಜ್ಜನರು ಗುರುತಿಸುತ್ತ ಬಂದಿದ್ದಾರೆ. ಅವರ ಭಾಷೆ ಸಾಹಿತ್ಯಗಳ ಸೇವೆ ನಾಲ್ಕು ದಶಕಗಳನ್ನೂ ಮೀರಿ ಸಾಗಿತು. ಅವರು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಬರೆದು, ವಿದ್ವತ್ ಪತ್ರಿಕೆಗಳಲ್ಲಿ ಗ್ರಂಥಗಳಲ್ಲಿ ಪ್ರಕಟಿಸಿದ ಹಾಗೂ ವಿದ್ವತ್ ಗೋಷ್ಠಿಗಳಲ್ಲಿ ಮಂಡಿಸಿದ ಸಂಶೋಧನಾತ್ಮಕ ವಿಮರ್ಶನಾತ್ಮಕ ಲೇಖನಗಳಿಂದಲೂ ನಾಟಕನಾನುವಾದಗಳಿಂದಲೂ ಪ್ರಾಚೀನ ಕವಿಕೃತಿಯ ಸಂಪಾದನಕಾರ್ಯದಿಂದಲೂ ಅದರ ವ್ಯಾಪ್ತಿ ನಮಗೆ ತಿಳಿಯುವಂತಿದೆ.

ರಾಘವಾಚಾರ್ಯರ ಮುಖ್ಯವಾದ ಕಾರ್ಯಕ್ಷೇತ್ರ ಕನ್ನಡ ಭಾಷೆ ಸಾಹಿತ್ಯಗಳ ಅಧ್ಯಯನ ಅಧ್ಯಾಪನಗಳಿಗೆ ಸೇರಿದ್ದಾದರೂ, ಅವರು ಸಂಸ್ಕೃತ, ತಮಿಳು ಮತ್ತು ಗ್ರೀಕ್ ಭಾಷೆಗಳಲ್ಲಿ ತಾವು ಗಳಿಸಿದ್ದ ಪರಿಣತಿಯ ಬಲದಿಂದ ಅದನ್ನು ಇನ್ನಷ್ಟು ಫಲವತ್ತಾಗಿ ಮಾಡಿದರು. ಅವರು ಈಯೆಲ್ಲ ಭಾಷೆಗಳ ಪ್ರಾಚೀನ ಸಾಹಿತ್ಯಸಂಪತ್ತಿನಲ್ಲಿ ಮಿಗಿಲಾದ ಅಭಿರುಚಿ ಆಸಕ್ತಿಗಳನ್ನು ಬೆಳಸಿಕೊಂಡಿದ್ದರು. ದೊಡ್ಡ ಪ್ರಮಾಣದಲ್ಲಿ ಅವರು ಸಾಹಿತ್ಯರಚನೆ ಮಾಡಿಲ್ಲವೆಂಬುದು ನಿಜ. ಆದರೆ ಪ್ರಾಚೀನ ಕನ್ನಡ ಕವಿಕೃತಿಯ ಸಮರ್ಥ ಸಂಪಾದಕರೆನ್ನಿಸಿದರು; ಮೂಲದಿಂದಲೇ ಗ್ರೀಕ್ ನಾಟಕಗಳನ್ನು ಕನ್ನಡಿಸಿದ ಅನನ್ಯ ಸಾಹಸಿಗಳೆನ್ನಿಸಿದರು. ಹೊಸಗನ್ನಡ ನವೋದಯ ಕಾಲದಲ್ಲಿ ಕನ್ನಡ ಮಾತು ತಲೆಯೆತ್ತುವಂತೆ ಮಾಡಿ 'ಕನ್ನಡದ ಕಣ್ವ' ರೆಂದು ಕೀರ್ತಿಶಾಲಿಗಳಾದ ಆಚಾರ ಬಿ.ಎಂ. ಶ್ರೀಕಂಠಯ್ಯನವರ ಅಚ್ಚುಮೆಚ್ಚಿನ ಶಿಷ್ಯರೆನ್ನಿಸಿದ್ದನ್ನೂ ನಾಡಿನ ಸ್ವಾತಂತ್ರ್ಯಯೋಧರಲ್ಲಿ ನಾಯಕಮಣಿಗಳೆಂಬವರ ಸಾಮೀಪ್ಯದರ್ಶನದ ಹಾಗೂ ಸೇವೆ ಶುಶ್ರೂಷೆಗಳ ಅಪೂರ್ವ ಅವಕಾಶದ ಅದೃಷ್ಟಶಾಲಿಗಳಾದ್ದನ್ನೂ ನೆನೆದಾಗ ಅವರ ವ್ಯಕ್ತಿತ್ವದ ಮಹತಿ ನಮಗೆ ಕಣ್ಣಿಗೆ ಕಟ್ಟಿದಂತಾಗುತ್ತದೆ.

ಕ.ವೆಂ. ರಾಘವಾಚಾರ್ಯರು ಶ್ರೀವೈಷ್ಣವಪಂಥದ ಸ್ವಯಮಾಚಾರ್ಯ ಸಂಪ್ರದಾಯದ ಆಗಮಿಕ ಮನೆತನದಲ್ಲಿ ಹುಟ್ಟಿದವರು. ಈ ಮನೆತನದವರು ಹಳೆಯ ಮೈಸೂರು ಸಂಸ್ಥಾನದ ಮೂರು ಪ್ರಸಿದ್ಧ ಶ್ರೀವೈಷ್ಣವ ಕ್ಷೇತ್ರಗಳಾದ ಮೇಲುಕೋಟೆ ಶ್ರೀರಂಗಪಟ್ಟಣ ಬೇಲೂರು ದೇವಾಲಯಗಳ ಅರ್ಚಕವೃತ್ತಿಯಲ್ಲಿ ಈಗಲೂ ಇರುತ್ತಿದ್ದಾರೆ. ಇಂಥ ಒಂದು ಮನೆತನಕ್ಕೆ ಸೇರಿದವರು ಆಚಾರ್ಯರ ತಾತ ಕಡಬದ ಶ್ರೀನಿವಾಸಭಟ್ಟರು. ತಾವು ಬಲು ಹಿಂದೆಯೇ

ಅರ್ಚಕವೃತ್ತಿಯಿಂದ ಬಿಡುಗಡೆ ಪಡೆದುಕೊಂಡವರೇ ಆಗಿದ್ದರೂ ಈ ಮನೆಯವರನ್ನು ಗುರುತಿಸುವುದು ಗುಡಿಮನೆಯವರೆಂದೇ. ಇವರು ದೊಡ್ಡವಿದ್ವಾಂಸರು, ಶಾಸ್ತ್ರವೇತ್ತರು, ಆಚಾರನಿಷ್ಠರು. ಮೂಲತಃ ವಡಗಲೆ ಸಂಪ್ರದಾಯದವರಾಗಿದ್ದರೂ, ತೆಂಗಲೆ ಸಂಪ್ರದಾಯದ ತಮ್ಮ ಸೋದರ ಮಾವಂದಿರಿಂದ ಸಮಾಶ್ರಯಣವಾದ ಬಳಿಕ ತಾವು ಕೂಡ ಆ ಸಂಪ್ರದಾಯದಲ್ಲಿಯೇ ಸಾಗಿ ಶಿಷ್ಯನಿಷ್ಠೆಯನ್ನು ಮೆರೆದರು. ಅರ್ಚಕವೃತ್ತಿಯನ್ನು ಬಿಟ್ಟುಕೊಟ್ಟರೂ ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನ, ನಿತ್ಯರಾಮಾಯಣಪಾರಾಯಣ ಎಲ್ಲಾ ಯಥಾಕ್ರಮದಲ್ಲಿ ಮುಂದುವರಿದುವು. ಸಂಪಿಗೆಯ ಅವರ ಅಣ್ಣಂದಿರ ಮಕ್ಕಳು ಕೂಡಿ ತಮ್ಮ ಚಿಕ್ಕಪ್ಪ ಸಾಗಿದ ಸಂಪ್ರದಾಯದಲ್ಲಿಯೇ ತಾವು ಕೂಡ ಸಾಗಿದರು, ತೆಂಗಲೆಯವರಾದರು.

ಶ್ರೀನಿವಾಸಭಟ್ಟರ ಸಂತತಿಯಲ್ಲಿ ಕೆಲವರು ಹೆಣ್ಣುಮಕ್ಕಳ ಬಳಿಕ ಒಂದು ಗಂಡುಮಗುವಾಯಿತು. ಇವರೇ ವೆಂಕಟಾಚಾರ್ಯರು, ರಾಘವಾಚಾರ್ಯರ ತಂದೆಯವರು. ವೆಂಕಟಾಚಾರ್ಯರ ಅನಂತರದಲ್ಲಿ ಹುಟ್ಟಿದವರು ಶ್ರೀನಿವಾಸಯ್ಯಂಗಾರರು, ರಂಗಸ್ವಾಮಯ್ಯಂಗಾರರು. ಮೊದಲನೆಯವರು ಕಡಬದಲ್ಲೇ ಇದ್ದುಕೊಂಡು ಪಿತ್ರಾರ್ಜಿತವಾದ ಆಸ್ತಿಯನ್ನು ನೋಡಿಕೊಳ್ಳುತ್ತಿದ್ದರು; ಎರಡನೆಯವರು ಬೆಂಗಳೂರಿನಲ್ಲಿ ಸರ್ಕಾರಿ ಉದ್ಯೋಗ ಹಿಡಿದು, ಅಲ್ಲಿಯೇ ನೆಲೆಯಾದರು. ಹಿರಿಯರಾದ ವೆಂಕಟಾಚಾರ್ಯರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ವರೆಗೆ ವ್ಯಾಸಂಗಮಾಡಿ, ಲಾಯರ್ ಪರೀಕ್ಷೆ ಮಾಡಿಕೊಂಡು ತುಮಕೂರು ಸೇರಿ, ಅಲ್ಲಿ ವಕೀಲಿವೃತ್ತಿಯನ್ನು ನಡಸತೊಡಗಿದರು. ಅವರಿಗೆ ಆಗ್ಗೆ ವೃತ್ತಿಯಲ್ಲಿ ಪ್ರಸಿದ್ಧರಾಗಿದ್ದ ಆಜಿ ಶ್ರೀನಿವಾಸಯ್ಯಂಗಾರರ ಮಾರ್ಗದರ್ಶನ ದೊರೆಯಿತು.

ವೆಂಕಟಾಚಾರ್ಯರು ಮತ್ತು ಪತ್ನಿ ತಿರುಮಲಮ್ಮ ಈ ದಂಪತಿಗಳಿಗೆ ರಾಮಸ್ವಾಮಿ, ರಾಘವಾಚಾರ್ಯ ಗಂಡುಮಕ್ಕಳು. ರಾಘವಾಚಾರ್ಯರು ಇನ್ನೂ ಮೂರು ವರ್ಷದ ಕೂಸಾಗಿದ್ದಾಗ ತಾಯಿ ತೀರಿಕೊಂಡರು; ಐದು ವರ್ಷವಿದ್ದಾಗ ಅಣ್ಣ ರಾಮಸ್ವಾಮಿ ಸಹ ತೀರಿಕೊಂಡನು. ಈಗ ಆಚಾರ್ಯರೂ ಅವರ ತಂಗಿಯೂ ತಾತ ತಂದೆಯರ ಆರೈಕೆಗೆ ಬಂದರು. ಆರನೆಯ ವಯಸ್ಸಿಗೆ ಕಾಲಿಡುತ್ತಿದ್ದಂತೆಯೇ ವಾತ್ಸಲ್ಯಮಯಿಯಾದ ತಾತ ತೀರಿಕೊಂಡು ಈಗ ಇವರ ಪೋಷಣೆಯ ಜವಾಬ್ದಾರಿ ತಂದೆ ಚಿಕ್ಕಮ್ಮ (ಮಲತಾಯಿ)ನವರನ್ನೂ ಕಡಬದ ಚಿಕ್ಕಪ್ಪನನ್ನೂ ಸೇರಿತು. ಮನೆಯ ಕಷ್ಟಸುಖಗಳಲ್ಲಿ ನೆರವಾದ ಸ್ಮಾರ್ತರ ದೊಡ್ಡಿಯೆಂಬ ಅಡ್ಡ ಹೆಸರಿನ ಮುದುಕಿಯ ಸಹಾಯವನ್ನೂ ಆಚಾರ್ಯರು ಆದರಭಾವದಿಂದ ನೆನೆಯುತ್ತಾರೆ.

ಆಚಾರ್ಯರು ಎಳವೆಯಲ್ಲಿ ಕಡಬ ಸಂಪಿಗೆ ಬೇಲೂರು ಬೆಂಗಳೂರು ಮೇಲುಕೋಟೆ ಎಂದು ಊರೂರು ಅಲೆಯುತ್ತಿದ್ದ ಕಾರಣ, ಅವರ ಶಾಲಾ ಶಿಕ್ಷಣ ತೊಡಗಿದ್ದು ಅವರು ಎಂಟನೆಯ ವಯಸ್ಸಿಗೆ ಬಂದಾಗ. ಆ ಮೊದಲು ಅವರು ನಂಟರಿಷ್ಟರ ಮನೆಗಳಲ್ಲಿ ತಿಂಗಳುಗಟ್ಟಲೆ ಇದ್ದು ಬಿಡುತ್ತಿದ್ದರು. ತುಮಕೂರಿನಲ್ಲಿ ಪ್ರಾಥಮಿಕ ಶಿಕ್ಷಣ ಮೂರು ವರ್ಷ, ಮಾಧ್ಯಮಿಕ ಶಿಕ್ಷಣ (ಎ.ವಿ. ಸ್ಕೂಲ್) ಐದು ವರ್ಷ, ಕೊಲಿಜಿಯೇಟ್ ಹೈಸ್ಕೂಲ್ ನಾಲ್ಕನೆಯ ಫಾರಂ ಶಿಕ್ಷಣ ಒಂದು ವರ್ಷ - ಹೀಗೆ ಒಂಬತ್ತು ವರ್ಷ ಸಾಂಗವಾಗಿ ಸಾಗಿತು. ಲಕ್ಷ್ಮೀಪತಯ್ಯ, ಕೆಂಪಣ್ಣ, ಬಿ.ವೆಂಕಟನಾರಣಪ್ಪ

(ಪ್ರಸಿದ್ಧರಾದ ಬೆಳ್ಳಾವೆ ವೆಂಕಟನಾರಣಪ್ಪನವರ ಬಂಧುಗಳು). ಅವರ ಶಿಕ್ಷಕವರ್ಗದಲ್ಲಿ ಕೆಲವರು. ತರಗತಿಗಳ ಪರೀಕ್ಷೆಗಳನ್ನು ಉತ್ತಮ ರೀತಿಯಲ್ಲಿ ದಾಟಿ ಮುನ್ನಡೆಯುತ್ತಿದ್ದ ಪ್ರತಿಭಾವಂತ ವಿದ್ಯಾರ್ಥಿಯಾಗಿ ಶಿಕ್ಷಕರ ಲಕ್ಷ್ಯವನ್ನು ಸೆಳೆದಿದ್ದ ಆಚಾರ್ಯರು ತುಂಟತನದಲ್ಲಿಯೂ ಮುಂದಿದ್ದರು.

೧೯೧೪ರಲ್ಲಿ, ಆಚಾರ್ಯರು ತುಮಕೂರಿನಲ್ಲಿ ಓದುತ್ತಿದ್ದ ಕಾಲದಲ್ಲಿ, ಅಲ್ಲಿ ಪ್ಲೇಗ್ ಸಾಂಕ್ರಾಮಿಕ ಕಾಣಿಸಿತು. ತಂದೆ ಸಂಸಾರವನ್ನು ಬೆಂಗಳೂರಿಗೆ ಸಾಗಿಸಿದರು. ಕೋಟೆ ಎ.ವಿ. ಸ್ಕೂಲನ್ನು (ಕೋಟೆ ಹೈಸ್ಕೂಲು) ಇಂಗ್ಲಿಷ್ ಒಂದನೆಯ ತರಗತಿಯ ವಿದ್ಯಾರ್ಥಿಯಾಗಿ ಸೇರಿಕೊಂಡರು. ಅಲ್ಲಿಯ ಶಿಕ್ಷಕವರ್ಗದಲ್ಲಿ ಕನ್ನಡದ ಪ್ರಸಿದ್ಧ ಪತ್ತೇದಾರಿ ಕಾದಂಬರಿಕಾರರಾಗಿದ್ದ ಬಾಲಸರಸ್ವತಿಯವರು ಅವರ ಡ್ರಾಯಿಂಗ್ ಮಾಸ್ಟರ್ ಆಗಿದ್ದರು. ।

ಆಚಾರ್ಯರು ಬಾಲ್ಯಕಾಲದಲ್ಲಿ ತಮ್ಮ ಗೆಳೆಯರ ಗುಂಪಿನಲ್ಲಿ ತುಂಟಾಟಗಳಿಗೆ ಹೆಸರಾಗಿದ್ದರೂ ಕಲೆಯ ಸಂಸ್ಕಾರ ಬೆಳೆಯುವ ಸಂದರ್ಭಗಳೂ ಅವರ ಸುದೈವದಿಂದ ಅವರಿಗೆ ಒದಗಿಬಂತು. ೧೯೧೫ರ ಮೇ ತಿಂಗಳು ಅವರ ಉಪನಯನವಾಯಿತು. ತಂದೆಯವರು ಮಹಾರಾಜ ಕಾಲೇಜಿನಲ್ಲಿ ಓದುತ್ತಿದ್ದ ಕಾಲದಿಂದಲೂ ಸಂಗೀತ ನಾಟಕಗಳ ಗೀಳು ಹಚ್ಚಿಸಿಕೊಂಡಿದ್ದವರು. ಅವರು ತುಮಕೂರಿನಲ್ಲಿ ವಕೀಲರಾಗಿದ್ದಾಗ, ಅಲ್ಲಿಗೆ ಯಾವ ಸಂಗೀತಗಾರರು ಬಂದರೂ ಅವರನ್ನು ಕಾಣದೆ ಹೋಗುತ್ತಿರಲಿಲ್ಲ. ಹಾಗೆ ಬಂದವರಲ್ಲಿ ವಿಲಕ್ಷಣಪ್ರತಿಭೆಯ ಸಂಗೀತಗಾರ ಕೆಂಪೇಗೌಡರೂ ಒಬ್ಬರು. “ಅಮ್ಮ, ಇಂದ ಕೊಳಂಬೈ ಪತ್ತಿ ಒರು ಪಾಟ್ಟು ಪಾಡುವೆ, ಎಟ್ಟಾಣ ಇರುಂದಾ ಕುಡು” ಎಂದು ಹೇಳಿ, ಯಾವುದೋ ಹಾಡು ಹಾಡಿ ಎಂಟಾಣೆ ಪಡೆದು ಹೋದರು.

ತಂದೆ ವೆಂಕಟಾಚಾರ್ಯರು ತಾವು ಹೋಗುತ್ತಿದ್ದ ನಾಟಕಗಳಿಗೆ ಮಗ ರಾಘವಾಚಾರ್ಯರನ್ನೂ ಜೊತೆಗೆ ಕರೆದುಕೊಂಡು ಹೋಗುತ್ತಿದ್ದರು. ಹೀಗಾಗಿ ವಯಸ್ಸು ೧೦-೧೧ ತುಂಬುವುದರೊಳಗೆ ಎ.ವಿ. ವರದಾಚಾರ್, ಗೋವಿಂದಸ್ವಾಮಿ ನಾಯಕ, ಕೋಮಲನ್, ಶಿರಹಟ್ಟಿ, ಗುಬ್ಬಿ ಮೊದಲಾದ ಕಂಪನಿಗಳ ಹಲವಾರು ನಾಟಕಗಳನ್ನು ನೋಡುವ ಅವಕಾಶವನ್ನು ಪಡೆದರು. ಇವುಗಳಲ್ಲಿ ರತ್ನಾವಳಿ, ಶಾಕುಂತಲಾ, ರಾಮವರ್ಮ - ಲೀಲಾವತಿ, ಲಂಕಾದಹನ, ಕಣ್ಣಗಿ, ಸದಾರಮೆ, ಯುವತೀವಿಜಯ, ಸಾರಂಗಧರ, ಭೋಜಪ್ರಬಂಧ, ಕಾಳಿದಾಸ, ಪ್ರಹ್ಲಾದಚರಿತ, ರುಕ್ಮಿಣೀಕಲ್ಯಾಣ, ಸತ್ಯಭಾಮಾವಿಜಯ, ಸಂಪೂರ್ಣ ರಾಮಾಯಣ, ಪಾಂಡವ ವಿಜಯ ಇವೆಲ್ಲಾ ಸೇರಿದ್ದುವು. ರಂಗಸ್ಥಲದಲ್ಲಿ ನಾಟಕಗಳನ್ನು ನೋಡಿಬಂದ ಮೇಲೆ ಜೊತೆಯ ಮಕ್ಕಳನ್ನು ಸೇರಿಸಿಕೊಂಡು ಮನೆಯಲ್ಲಿ ಅವುಗಳ ಅನುಕರಣೆಯನ್ನೂ ಮಾಡುತ್ತಿದ್ದರು. ಕೆ.ವಿ.ಆರ್.ಸಿ. ಎಂದು ಈ ಮಿತ್ರಮೇಳಕ್ಕೆ ಹೆಸರನ್ನೂ ಇಟ್ಟುಕೊಂಡಿದ್ದರು. ಎ.ವಿ. ಸ್ಕೂಲಿನಲ್ಲಿ ಲೋಯರ್ ಸೆಕೆಂಡರಿ ತರಗತಿಯಲ್ಲಿದ್ದಾಗ, ಅವರಿಗೆ ಡಿ.ಎಸ್. ಕೃಷ್ಣಮೂರ್ತಿಗಳು, ಪಂಡಿತ ವೆಂಕಟನಾರಾಯಣ ಜೋಯಿಸರು, ಮತ್ತು ಎಂಥ ಕ್ಲಿಷ್ಟಪದ್ಯಗಳಿಗೂ ಅರ್ಥ ಹೇಳುತ್ತಿದ್ದ ಮುನಿಷಿ ಹಿರಣ್ಯಪ್ಪ ಎಂಬ ಕನ್ನಡ ಪಂಡಿತರು ಅಧ್ಯಾಪಕರಾಗಿದ್ದರು.

೧೯೧೯ರಲ್ಲಿ ಆಚಾರ್ಯರು ತುಮಕೂರು ಕೊಲಿಜಿಯೇಟ್ ಹೈಸ್ಕೂಲಿನ ವಿದ್ಯಾರ್ಥಿ. ಅವರಿಗೆ ಅಲ್ಲಿ ಕೆ.ಎ. ಕೃಷ್ಣಸ್ವಾಮಿ ಅಯ್ಯರ್ ಮುಖ್ಯೋಪಾಧ್ಯಾಯರು. ಇವರು ತಮ್ಮ ಕಾಲದಲ್ಲಿ ತಮ್ಮ ವೇದಾಂತವಿಚಾರದ

ಪರಿಣತಿಗಾಗಿ, ಸಂಗೀತಪ್ರೇಮಕ್ಕಾಗಿ, ಇಂಗ್ಲಿಷ್ ಸಾಹಿತ್ಯದ ಪಾಂಡಿತ್ಯಕ್ಕಾಗಿ ಪ್ರಸಿದ್ಧರಾಗಿದ್ದರು. ಜಿ. ವೀರರಾಘವಾಚಾರ್ಯರು ಇಂಗ್ಲಿಷ್ ಅಧ್ಯಾಪಕರು. ಈ ಇಬ್ಬರೂ ಸೇರಿ ಆ ವರ್ಷ ಅಲ್ಲಿ ಕರ್ಣಾಟಕ ಸಂಘ ಸ್ಥಾಪಿಸಿದರು. ಅಲ್ಲಿ ಮದರಾಸು ಪ್ರಾಂತದ ಕೆ.ಎಸ್. ರಾಮಸ್ವಾಮಿ ಶಾಸ್ತ್ರಿಗಳು, ಎಲ್.ಎ. ಗೋವಿಂದರಾಘವ ಅಯ್ಯರ್ ಮೊದಲಾದ ಗಣ್ಯರು ಆಹ್ವಾನಿತರಾಗಿ ಉಪನ್ಯಾಸ ಮಾಡುತ್ತಿದ್ದರು. ಇವು ಇಂಗ್ಲಿಷ್ ಭಾಷೆಯಲ್ಲಿರುತ್ತಿದ್ದರೂ ವಿದ್ಯಾರ್ಥಿಗಳು ಅವನ್ನು ಗ್ರಹಿಸಬಲ್ಲವರಾಗಿದ್ದರು. ಶಾಲೆಯ ವತಿಯಿಂದ ಸ್ಕೂಲ್ ಫೋಕ್ ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಅನಂತರದಲ್ಲಿ ಖ್ಯಾತನಾಮರಾದ ತೀ.ನಂ. ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್ಯ ಮೊದಲಾದವರ ಆರಂಭದ ಬರಹಗಳು ಬೆಳಕುಕಂಡದ್ದು ಇಲ್ಲಿಯೇ ಎಂಬುದನ್ನು ನೆನೆಯಬೇಕು. ಇಂಥ ವಾತಾವರಣ ರಾಘವಾಚಾರ್ಯರನ್ನು ಸಾಹಿತ್ಯಾಸಕ್ತಿಯತ್ತ ತಿರುಗಿಸಿದ್ದು ಸ್ವಾಭಾವಿಕವೇ ಆಗಿದೆ.

೧೯೧೦ರಲ್ಲಿ ರಾಘವಾಚಾರ್ಯರ ತಂದೆ ವೆಂಕಟಾಚಾರ್ಯರು ಬೆಂಗಳೂರಿನಲ್ಲಿ ತೀರಿಕೊಂಡರು. ಆಗ್ಗೆ ಮಗನಿಗೆ ವಯಸ್ಸು ೧೬. ಹೈಸ್ಕೂಲು ನಾಲ್ಕನೆಯ ಫಾರಂ ಪರೀಕ್ಷೆ ಆಗಿತ್ತು. ತುಮಕೂರಿನಲ್ಲಿ ಸ್ವಂತ ಮನೆಯಿದ್ದುದರಿಂದ ಇರುವ ಆಸ್ತಿಯನ್ನೇ ರೂಢಿಸಿಕೊಂಡು, ಓದು ಮುಂದುವರಿಸಿ ತಂದೆಯಂತೆಯೇ ವಕೀಲಿ ವೃತ್ತಿಯನ್ನು ಹಿಡಿಯಬೇಕೆಂಬುದು ಆಚಾರ್ಯರ ಮೊದಲ ಆಲೋಚನೆಯಾಗಿತ್ತು. ಆದರೆ ಅವರ ಬೆಂಗಳೂರಿನ ಚಿಕ್ಕಪ್ಪಂದಿರು ಅವರನ್ನು ತಮ್ಮ ಮನೆಯಲ್ಲಿಯೇ ಇಟ್ಟುಕೊಂಡು ಮುಂದಿನ ವ್ಯಾಸಂಗಕ್ಕೆ ಸಹಾಯವಾದರು. ಅದೇ ತಾನೆ ಬೆಂಗಳೂರಿನಲ್ಲಿ ನ್ಯಾಷನಲ್ ಹೈಸ್ಕೂಲು ಆರಂಭವಾಗಿತ್ತು, ಅಲ್ಲಿಗೆ ಸೇರಬೇಕೆನ್ನುವುದು ಆಚಾರ್ಯರ ಆಸೆ. ಆದರೆ ನೆರೆಮನೆಯಲ್ಲಿದ್ದ ವೆಸ್ಲಿಯನ್ ಮಿಷನ್ ಹೈಸ್ಕೂಲು ಉಪಾಧ್ಯಾಯರ ಸಲಹೆಯಿಂದಾಗಿ ಅಲ್ಲಿಗೇ ಅವರು ಸೇರಿಕೊಂಡರು. ಇಲ್ಲಿ ಅವರ ಮೇಲೆ ಎಸ್. ವೆಂಕಟರಾಮನ್ ಎಂಬ ಗಾಂಧೀಮಾರ್ಗದ ದೇಶಪ್ರೇಮಿ ಅಧ್ಯಾಪಕರ ಪ್ರಭಾವ ಮಿಗಿಲಾಗಿ ಆಯಿತು. ತಮ್ಮಲ್ಲಿಯೂ ಆ ಭಾವನೆಗೆ ಇಂಬುಕೊಟ್ಟರು. ಆ ಭಾವನೆ ಬರುಬರುತ್ತ ಉತ್ಕಟವಾಗುತ್ತ, ಅದರ ಜೀವನದೃಷ್ಟಿಯ ಮೇಲೆ ಅದು ತನ್ನ ಪರಿಣಾಮ ಬೀರಿತು.

ಬೆಂಗಳೂರು ನಗರದ ವಾಸ, ವೆಸ್ಲಿಯನ್ ಹೈಸ್ಕೂಲು ಶಿಕ್ಷಣ ಆಚಾರ್ಯರ ಬದುಕಿನಲ್ಲಿ ಅನೇಕ ಬದಲಾವಣೆಗಳನ್ನು ತಂದುವು. ಹೈಸ್ಕೂಲಿನಲ್ಲಿ ಆಗ ವೃದ್ಧರಾದ ಆರ್ಕಾಟು ಶೇಷಗಿರಿರಾಯರು ಮುಖ್ಯೋಪಾಧ್ಯಾಯರು, ಪಾದ್ರಿ ಎ.ಆರ್. ಫುಲ್ಲರ್ ಪ್ರಿನ್ಸಿಪಾಲರು, ಕೃಷ್ಣಪ್ಪ ಎಂಬವರು ಕನ್ನಡ ಪಂಡಿತರು, ಆಚಾರ್ಯರು ತರಗತಿಯಲ್ಲಿ ಎಂದಿನಂತೆ ಚುರುಕಾಗಿದ್ದರು. ಆತ್ಮವಿಶ್ವಾಸದಿಂದ ಅಧ್ಯಾಪಕರ ಪ್ರಶ್ನೆಗಳಿಗೆ ಉತ್ತರಿಸುವ, ತಾವೇ ಧೈರ್ಯದಿಂದ ಅಧ್ಯಾಪಕರನ್ನು ಪ್ರಶ್ನಿಸುವ ಧೋರಣೆ ಅವರಲ್ಲಿ ಚಿಕ್ಕಂದಿನಿಂದಲೂ ಬೆಳೆದುಬಂದಿತ್ತು; ಇಲ್ಲಿಯೂ ಮುಂದುವರಿಯಿತು. ಇಲ್ಲಿಂದಲೇ ಅವರು ಗಾಂಧೀಮಾರ್ಗದಲ್ಲಿ ಗಟ್ಟಿಯಾಗಿ ಹೆಜ್ಜೆಯಿಡತೊಡಗಿದರು. ಪ್ರಿನ್ಸಿಪಾಲ್ ಪಾದ್ರಿ ಫುಲ್ಲರ್ ಅವರಿಗೆ ಅಹಿತವಾದರೂ ತರಗತಿಗೆಲ್ಲ ಒಬ್ಬರೇ ಖಾದಿ ತೊಟ್ಟವರಾದರು.

ತಂದೆಯವರು ತೀರಿಕೊಂಡ ಮೇಲೆ, ತಮ್ಮ ತಂದೆ ಮಗಳ ಮದುವೆಗಾಗಿ ಮಾಡಿದ್ದ ಸಾಲದ ವಿಲೇವಾರಿಯೂ ಸೇರಿದಂತೆ ತುಮಕೂರು ಮನೆಯ ಹಾಗೂ ಹೊಲಗದ್ದೆಗಳ ವ್ಯವಹಾರಗಳನ್ನೆಲ್ಲ ತಾವೇ ನಿಭಾಯಿಸಬೇಕಾಯಿತು. ಈ ಸಂದರ್ಭದಲ್ಲಿ ಕೆಲವು ಬಿಕ್ಕಟ್ಟಿನ ಸನ್ನಿವೇಶಗಳಿಗೆ ಅವರು ಎದೆಗೊಡಬೇಕಾಗಿ ಬಂದು, ಅವರು ಅವನ್ನೆಲ್ಲ ಎದುರಿಸಿದರು. ಉಂಡ ಮನೆಗೆ ಕನ್ನವಿಕ್ಕಿದವರ ಕೃತಘ್ನತೆ ನಂಬಿಕೆದ್ರೋಹಗಳನ್ನು ನುಂಗಿಕೊಂಡರು; ಋಜುಮಾರ್ಗದಲ್ಲಿ ಪ್ರಾಮಾಣಿಕತೆಯಿಂದ ನಡೆಯುವುದು ತಮ್ಮ ಕರ್ತವ್ಯವೆಂದು ಭಾವಿಸಿದರು.

ಬೆಂಗಳೂರಿನಲ್ಲಿ ಆಚಾರ್ಯರ ಚಿಕ್ಕಪ್ಪ ರಂಗಸ್ವಾಮಿ ಅಯ್ಯಂಗಾರರ ಮನೆಯಿದ್ದುದು ಗವಿಪುರಂ ಬಡಾವಣೆಯಲ್ಲಿ. ಅಲ್ಲಿ ಶ್ರೀ ರಾಮಕೃಷ್ಣಾಶ್ರಮಕ್ಕೆ ಹೊಂದಿಕೊಂಡಂತೆ ಒಂದು ದೊಡ್ಡ ಮೈದಾನವಿದೆ. ಆಚಾರ್ಯರು ತಮ್ಮ ಜೊತೆಯ ಹುಡುಗರನ್ನು ಸೇರಿಸಿಕೊಂಡು, ತಾವೇ ಮುಂದಾಳಾಗಿ ನಿಂತು 'ಕೋಹಿನೂರು ಸಂಘ' ಎಂಬ ವಿದ್ಯಾರ್ಥಿಸಂಘವನ್ನು ಕಟ್ಟಿ, ತಾವೇ ಅದರ ಸ್ಥಾಪಕ ಕಾರ್ಯದರ್ಶಿಗಳಾದರು. ಇಲ್ಲಿ ವಿವಿಧ ಕ್ರೀಡೆಗಳು, ಚರ್ಚೆ ಉಪನ್ಯಾಸಗಳು, ಭಜನೆ ಸ್ತೋತ್ರಗಳು ಮೊದಲಾದ ಚಟುವಟಿಕೆಗಳು ಶಿಸ್ತಿನಿಂದ ನಡೆಯುತ್ತಿದ್ದುವು. ಅಂದು ಅವುಗಳಲ್ಲಿ ಭಾಗವಹಿಸಿದ್ದವರು. ತಮ್ಮ ಮುಂದಿನ ಜೀವನದಲ್ಲಿ ಐ.ಸಿ.ಎಸ್. ಅಧಿಕಾರಿಗಳು, ಸರ್ಕಾರದ ಕಾರ್ಯದರ್ಶಿಗಳು, ಪ್ರಾಧ್ಯಾಪಕರು ಹೀಗೆ ಉನ್ನತಪದವಿಗೇರಿದ ಪ್ರತಿಭಾವಂತರಾಗಿ ಗಣ್ಯಸಾಮಾಜಿಕರೆನ್ನಿಸಿದರು ಎಂಬುದಾಗಿ ಆಚಾರ್ಯರು ತಮ್ಮ ಸ್ಮೃತಿಮಾಲಿಕೆಯಲ್ಲಿ ನೆನಪುಮಾಡಿಕೊಂಡಿದ್ದಾರೆ. ಈ ಸಂಘವನ್ನು ಅವರು, ತಾವು ಬಿ.ಎ. ಪದವಿ ಮುಗಿಸಿ ಮುಂದಿನ ಓದಿಗೆ ಮೈಸೂರಿಗೆ ಹೋಗುವವರೆಗೆ ಎಂಟು ವರ್ಷ ಕಾಲ ನಿರಂತರವಾಗಿ ದಕ್ಷತೆಯಿಂದ ನಡೆಸಿದರು; ತಮ್ಮ ಸಂಘಟನೆಯ ಸಾಮರ್ಥ್ಯವನ್ನು ಮೆರೆದರು.

ಮೇ ೧೯೨೪ರಲ್ಲಿ, ಆಚಾರ್ಯರ ೨೦ನೆಯ ವಯಸ್ಸಿನಲ್ಲಿ, ಅವರ ಮದುವೆ ಅವರ ಸೋದರತ್ತೆಯ ಮಗಳು ರಂಗನಾಯಕಮ್ಮನವರೊಂದಿಗೆ ಜರುಗಿತು. ಆದರೆ ಅವರು ಸರಿಯಾಗಿ ಸಂಸಾರ ಹೂಡಿದ್ದು ತಡವಾಗಿ, ಎಂ.ಎ., ಬಿ.ಟಿ., ಪದವಿಗಳನ್ನು ಪಡೆದ ಮೇಲೆ. ಮದುವೆ ಸರಳವಾಗಿ, ಖಾದಿ ವಸ್ತ್ರಗಳ ವರೋಪಚಾರದೊಂದಿಗೆ, ನಡೆಯಿತು. ಗಾಂಧೀ ಚಳವಳಿಯ ಸುಳಿಯಲ್ಲಿ ಸುತ್ತುತ್ತಿದ್ದ ಕಾರಣದಿಂದಾಗಿ, ಆ ವರ್ಷ ಅವರು ಕುಳಿತಿದ್ದ ಎಂಟ್ರೆನ್ಸ್ ಪರೀಕ್ಷೆಯಲ್ಲಿ, ಸರಿಯಾಗಿ ಓದದೆ ಅನುತ್ತೀರ್ಣರಾದರು.

ಅದೇ ವರ್ಷ ಡಿಸೆಂಬರ್ ತಿಂಗಳಲ್ಲಿ ಬೆಳಗಾವಿಯಲ್ಲಿ, ಮೊದಲ ಸಲ ಕರ್ನಾಟಕ ಪ್ರಾಂತದಲ್ಲಿ, ಅಖಿಲಭಾರತ ಕಾಂಗ್ರೆಸ್ ಮಹಾಧಿವೇಶನ ಜರುಗಲಿತ್ತು. ಸ್ವಯಂಸೇವಕರ ವ್ಯವಸ್ಥೆಗಾಗಿ ನಾ.ಸು. ಹರ್ಡಿಕರ್ ಅವರು 'ಹಿಂದೂಸ್ತಾನಿ ಸೇವಾದಳ'ವನ್ನು ಸ್ಥಾಪಿಸಿ, ಅದರ ಮೈಸೂರು ರಾಜ್ಯದ ಶಾಖೆಯನ್ನು ಬೆಂಗಳೂರಿನಲ್ಲಿ ನೆಲೆಗೊಳಿಸಿ ಅದರ ಮೇಲ್ವಿಚಾರಣೆಯನ್ನು ನ್ಯಾಷನಲ್ ಹೈಸ್ಕೂಲಿನ ಕೆ. ಸಂಪದ್ಗಿರಿರಾಯರಿಗೂ ಎಚ್. ರಾಮರಾಯರಿಗೂ ವಹಿಸಿದ್ದರು. 'ಬೆಂಗಳೂರು ಸೇವಾದಳ'ದ ಸ್ವಯಂಸೇವಕರ ತಂಡದಲ್ಲಿ ರಾಘವಾಚಾರ್ಯರೂ ಅವಕಾಶ ಪಡೆದರು. ನಿರ್ಮಲೀಕರಣದ 'ಭಂಗಿದಸ್ತಾ' ವಿಭಾಗದ ಕೆಲಸ ವಹಿಸಿಕೊಂಡು, ಬೆಳಗಾವಿ ಅಧಿವೇಶನದಲ್ಲಿ

ಶ್ರಮಿಸಿದರು; ಗಾಂಧೀಜಿಯವರ ದರ್ಶನ, ಭಾಷಣ ಶ್ರವಣಗಳ ಯೋಗ ಅವರಿಗೆ ಸಿಕ್ಕಿತು. ಆಗ್ಗೆ ಹಾರ್ಡಿಕರರಿಗೆ ಸರ್ದಾರ್ ವೆಂಕಟರಾಮಯ್ಯನವರು, ಜೀವಣ್ಣ ರಾಯರು ಸಹವರ್ತಿಗಳಾಗಿದ್ದರು.

ಗಾಂಧೀಜಿಯವರ ಸಮೀಪದರ್ಶನ, ಸೇವಾಸೌಭಾಗ್ಯ ಅವರಿಗೆ ೧೯೨೭ರಲ್ಲಿ ಮತ್ತೆ ದೊರೆಯಿತು. ಮಹಾತ್ಮರಿಗೆ ದೇಹಾಲಸ್ಯವಾಗಿ, ವಿಶ್ರಾಂತಿಗೆಂದು ಅವರು ದಿವಾನ್ ಮಿರ್ಜಾ ಅವರ ಆಹ್ವಾನದಂತೆ ಮೈಸೂರು ರಾಜ್ಯಕ್ಕೆ ಬಂದರು. ಆಗ್ಗೆ ಸ್ವಲ್ಪಕಾಲ ನಂದಿಬೆಟ್ಟದಲ್ಲಿಯೂ, ಸ್ವಲ್ಪಕಾಲ ಬೆಂಗಳೂರಿನ ಕುಮಾರಪಾರ್ಕ್ ಬಂಗಲೆಯಲ್ಲಿಯೂ ಇಳಿದುಕೊಂಡಿದ್ದರು. ನಂದಿಬೆಟ್ಟದಲ್ಲಿದ್ದಾಗ ಸೇವಾದಳದ ಮಿತ್ರರೆಲ್ಲಾ ಅಲ್ಲಿಗೆ ಹೋಗಿ ಗಾಂಧೀಜಿಯವರ ಸಂದರ್ಶನ ಪಡೆದುಬಂದರು; ಕುಮಾರಪಾರ್ಕ್ ಬಂಗಲೆಯಲ್ಲಿದ್ದಾಗ, ಆಚಾರ್ಯರಿಗೆ ಅವರ ಸಮೀಪಸೇವೆಯ ಅಪೂರ್ವ ಅವಕಾಶವೇ ಒದಗಿತು. ಈ ಸಂದರ್ಭದಲ್ಲಿಯೇ ಅವರಿಗೆ ಸಿ. ರಾಜಗೋಪಾಲಾಚಾರ್, ಮೋತೀಲಾಲ್ ನೆಹರು, ಮದನಮೋಹನ ಮಾಲವಿಯ, ಮಹದೇವ ದೇಸಾಯಿ ಮೊದಲಾದ ಗಣ್ಯರ ದರ್ಶನಸಂಭಾಷಣಯೋಗವೂ ಒದಗಿದ್ದು ಒಂದು ವಿಶೇಷವಾದ ಪ್ರಾಪ್ತಿಯೇ ಸರಿ. ಆಗ ನಡೆದ ಕೆಲವು ಸ್ವಾರಸ್ಯಕರ ಪ್ರಸಂಗಗಳು ಅವರ ಸ್ಮೃತಿಮಾಲಿಕೆಯಲ್ಲಿ ಸೊಗಸಾಗಿ ಕಥನಗೊಂಡಿವೆ; ಅವು ಆ ಹಿರಿಯರ ಸ್ವಭಾವಚಿತ್ರಗಳನ್ನು ತೋರಿಸುವಂತಿವೆ. ಆಚಾರ್ಯರು ೧೯೨೭ರ ಡಿಸೆಂಬರ್ ಕೊನೆಯ ವಾರದಲ್ಲಿ ಮದರಾಸಿನಲ್ಲಿ ನೆರೆದ ಕಾಂಗ್ರೆಸ್ ಮಹಾಧಿವೇಶನದ ಸ್ವಯಂಸೇವಕರ ತಂಡದಲ್ಲಿಯೂ ಬೆಂಗಳೂರು ಸೇವಾದಳದ ಒಬ್ಬ ಕಾರಕರ್ತರಾಗಿ ಸೇರಿದ್ದರು.

೧೯೨೫ ರಿಂದ ೨೮ ರವರೆಗೆ ರಾಘವಾಚಾರ್ಯರು ಬೆಂಗಳೂರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿ ವ್ಯಾಸಂಗಮಾಡಿದರು. ವಿಶೇಷವಿಷಯಗಳಾಗಿ ಗಣಿತ ಭೌತವಿಜ್ಞಾನಗಳನ್ನು ಆಯ್ಕೆ ಮಾಡಿಕೊಂಡು, ೧೯೨೮ರಲ್ಲಿ ಬಿ.ಎ. ಪದವಿ ಪಡೆದರು. ಎಂದಿನಿಂದಲೂ ರಸಾಯನವಿಜ್ಞಾನದಲ್ಲಿ ಅವರಿಗೆ ಅನಾಸಕ್ತಿಯಿದ್ದುದು ಕಾರಣವಾಗಿ ಮೊದಲ ವರ್ಷಕ್ಕೆ ಅದನ್ನು ಕೈಬಿಟ್ಟಿದ್ದರು. ಆದರೆ ಮುಂದೆ ಲಾಯರ್ ಪರೀಕ್ಷೆಗೆ ಅನುಕೂಲವಾಗಬಹುದೆಂದು ಚಿಕ್ಕಪ್ಪನ ಒತ್ತಾಯಕ್ಕೆ ಮೊದಲ ವರ್ಷದ ಬಿ.ಎ. ತರಗತಿ ಪರೀಕ್ಷೆಯ ಜೊತೆಗೆ ಸರ್ಟಿಫಿಕೇಟ್ ಪರೀಕ್ಷೆಯನ್ನೂ ಮಾಡಿಕೊಂಡಿದ್ದರಾದರೂ, ಓದು ಮುಂದುವರಿಯಿತು; ಲಾಯರ್ ಪರೀಕ್ಷೆಯ ಪ್ರಸಕ್ತಿ ಬೀಳಲಿಲ್ಲ.

ಆಗ್ಗೆ ಸೆಂಟ್ರಲ್ ಕಾಲೇಜಿನಲ್ಲಿ ಆಚಾರ್ಯರ ಅಧ್ಯಾಪಕವರ್ಗದಲ್ಲಿದ್ದವರೆಂದರೆ: ಡಾ. ಇ.ಪಿ. ಮೆಟ್ಕಾಫ್ (ಭೌತವಿಜ್ಞಾನ ಪ್ರಾಧ್ಯಾಪಕರು, ಪ್ರಿನ್ಸಿಪಾಲರು), ಎಫ್. ಆರ್. ಸೆಲ್, ಇ.ಜಿ. ಮೆಕಲ್ವೈನ್, ಎನ್.ಎಸ್. ಸತ್ಯನಾರಾಯಣರಾವ್, ಕೆ. ಅನಂತರಾಮಯ್ಯ (ಇಂಗ್ಲಿಷ್ ಪ್ರಾಧ್ಯಾಪಕರು, ಅಧ್ಯಾಪಕರು), ಎ. ವೆಂಕಟರಾವ್ ತೆಲಂಗ್, ಬಿ. ವೆಂಕಟೇಶಾಚಾರ್ಯ (ಭೌತವಿಜ್ಞಾನ ಪ್ರಾಧ್ಯಾಪಕರು), ಕೆ.ಎಸ್. ಕುಪ್ಪುಸ್ವಾಮಯ್ಯಂಗಾರ್, ಬಿ.ಎಸ್. ಮಾಧವರಾವ್, ಸಿ.ಎನ್. ಶ್ರೀನಿವಾಸಯ್ಯಂಗಾರ್, ಭೀಮಸೇನರಾವ್ (ಗಣಿತವಿಭಾಗದ ಪ್ರಾಧ್ಯಾಪಕರು, ಅಧ್ಯಾಪಕರು), ಟಿ.ಎಸ್. ವೆಂಕಣ್ಣಯ್ಯ (ಕನ್ನಡ ಅಧ್ಯಾಪಕರು), ಇವರಲ್ಲಿ ತೆಲಂಗರೂ ವೆಂಕಣ್ಣಯ್ಯನವರೂ ಆಚಾರ್ಯರ ಶೀಲ ಚಾರಿತ್ರಗಳ ಮೇಲೆ ವಿಶೇಷಪ್ರಭಾವ ಬೀರಿದರು. ಸಿ.ವಿ. ರಾಮನ್ ಅವರು ಬೆಳಕಿನ ವಿಕಿರಣ ಕುರಿತು ಮಾಡಿದ ಉಪನ್ಯಾಸದಲ್ಲಿ ಪ್ರಾಸಂಗಿಕವಾಗಿ ಪ್ಲಾಸ್ಟಿಕ್ ಮೂಲಸತ್ವದ ವಿಷಯವನ್ನು ಪ್ರಸ್ತಾವಿಸಿ, ಅದಕ್ಕೆ ಮುಂದೆ ಕೈಗಾರಿಕೆಯಲ್ಲಿ ಇರುವ ಉತ್ತಮಭವಿಷ್ಯವನ್ನು ನುಡಿದದ್ದು

ಒಂದು ವಿಶೇಷವೆಂದು ಆಚಾರ್ಯರು ನೆನೆದಿದ್ದಾರೆ; ಅಲ್ಲದೆ ತರಗತಿಯಲ್ಲಿ ತಾವು ಬರೆದ 'ಸೈಲಸ್ ಮಾರ್ನರ್' ಕುರಿತ ಪ್ರಬಂಧ ಇಂಗ್ಲಿಷ್ ಅಧ್ಯಾಪಕರ ಪ್ರಶಂಸೆಗೆ ಪಾತ್ರವಾದುದನ್ನು ಕೂಡ ನೆನಪು ಮಾಡಿಕೊಂಡಿದ್ದಾರೆ.

ಬಿ.ಎ. ಪರೀಕ್ಷೆಯೇನೋ ಆಯಿತು. ಮುಂದೇನು? ಅವರ ಚಿಕ್ಕಪ್ಪನವರ ಪ್ರಯತ್ನದಿಂದ ರೆವಿನ್ಯೂ ಕಮೀಷನರ್ ಅವರ ಕಚೇರಿಯಲ್ಲಿ ಒಂದು ಗುಮಾಸ್ತೆ ಕೆಲಸ ಸಿಕ್ಕುವ ಸಾಧ್ಯತೆಯೇನೋ ಇತ್ತು. ಆದರೆ ಆಚಾರ್ಯರಿಗೆ ಮೈಸೂರಿಗೆ ಹೋಗಿ ಎಂ.ಎ. ಮಾಡಬೇಕೆಂದು ಆಸೆ. ಅದುವರೆಗೆ ತಮ್ಮನ್ನು ಕಷ್ಟಪಟ್ಟು ಓದಿಸಿದ ಚಿಕ್ಕಪ್ಪನವರಿಗೆ ಹೊರೆಯಾಗಬಾರದು ಎಂದು ಯೋಚಿಸಿ, ಕಡಬದಲ್ಲಿ ತಮ್ಮ ಪಾಲಿಗೆ ಬಂದಿದ್ದ ಒಂದೂವರೆ ಎಕರೆ ಗದ್ದೆಯನ್ನು ದೂರದ ನಂಟರೊಬ್ಬರಿಗೆ ೨೫೦ ರೂಪಾಯಿಗಳಿಗೆ ಆಧಾರಮಾಡಿ, ಆ ಹಣದೊಂದಿಗೆ ಮೈಸೂರಿಗೆ ಬಂದರು. ಕಳೆದ ವರ್ಷವಷ್ಟೇ (೧೯೨೭) ಕನ್ನಡ ಎಂ.ಎ., ಹೊಸದಾಗಿ ಆರಂಭವಾಗಿತ್ತು. ಬಿ.ಎ. ಪರೀಕ್ಷೆಯಲ್ಲಿ ಇಂಗ್ಲಿಷ್ ವಿಷಯದಲ್ಲಿ ನೂರಕ್ಕೆ ೮೫ ಅಂಕಗಳು ಬಂದು ಪ್ರಿನ್ಸಿಪಾಲರ ಶಹಬಾಸುಗಿರಿ ಸಂಪಾದಿಸಿದ್ದ ಆಚಾರ್ಯರಿಗೆ ಮೊದಲ ಆಯ್ಕೆಯಿದ್ದುದು ಇಂಗ್ಲಿಷ್ ಎಂ.ಎ.ಗೆ ಸೇರಬೇಕು ಎಂದು. ಆದರೆ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರ ವಿದ್ಯಾರ್ಥಿಯಾಗಿ ಕಲಿಯಬೇಕೆಂಬ ಅಪೇಕ್ಷೆಯಿಂದ ಅವರು ೧೯೨೮ರಲ್ಲಿ ಕನ್ನಡ ಎಂ.ಎ. ಗೆ ಸೇರಿಕೊಂಡರು.

ಮೈಸೂರು ಮಹಾರಾಜ ಕಾಲೇಜಿನಲ್ಲಿ ಆಗ್ಗೆ ಅವರ ಅಧ್ಯಾಪಕವರ್ಗದಲ್ಲಿದ್ದವರು ಎಂದರೆ: ಬಿ.ಎಂ. ಶ್ರೀಕಂಠಯ್ಯನವರು (ಗೌರವ ಪ್ರಾಧ್ಯಾಪಕರು), ಟಿ.ಎಸ್. ವೆಂಕಣ್ಣಯ್ಯನವರು (ಕನ್ನಡ ಪ್ರಾಧ್ಯಾಪಕರು), ಟಿ.ಎನ್. ಸುಬ್ಬರಾಯ ಶಾಸ್ತ್ರಿಗಳು, (ಕನ್ನಡ ಪಂಡಿತರು), ಡಿ. ಶ್ರೀನಿವಾಸಾಚಾರರು, ಸಿ.ಆರ್. ನರಸಿಂಹಶಾಸ್ತ್ರಿಗಳು (ಸಂಸ್ಕೃತ), ರಾಳ್ಳಪಲ್ಲಿ ಅನಂತಕೃಷ್ಣಶರ್ಮರು (ತೆಲುಗು ಪಂಡಿತರು), ಉಪಭಾಷೆಯಾಗಿ ಮೊದಲು ತಮಿಳನ್ನು ಆಯ್ಕೆ ಮಾಡಿಕೊಂಡಿದ್ದವರು ಶರ್ಮರ ವ್ಯಕ್ತಿತ್ವದ ಆಕರ್ಷಣೆಯಿಂದಾಗಿ ತೆಲುಗಿಗೆ ಆಯ್ಕೆಯನ್ನು ಬದಲಿಸಿಕೊಂಡರು.

ವಿಶ್ವವಿದ್ಯಾನಿಲಯದ ಧನಸಹಾಯದಿಂದ ಉತ್ತರ ಕರ್ನಾಟಕದ ಕಡೆ ಇತರ ವಿದ್ಯಾರ್ಥಿಗಳೊಂದಿಗೆ ಶೈಕ್ಷಣಿಕ ಪ್ರವಾಸಕ್ಕೆ ಹೋಗಿ ಬಂದ ಮೇಲೆ ಆಚಾರ್ಯರು ಮಲೇರಿಯಾಜ್ವರಕ್ಕೆ ಸಿಕ್ಕು ಮೂರು ತಿಂಗಳ ಕಾಲ ನರಳಿದರು. ೧೯೩೦ರಲ್ಲಿ ಅವರು ಎಂ.ಎ. ಪರೀಕ್ಷೆ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಮುಂದಿನ ವರ್ಷ (೧೯೩೧) ತೀ.ನಂ.ಶ್ರೀಕಂಠಯ್ಯ, ಜಿ.ಪಿ. ರಾಜರತ್ನಂ ಅವರೊಂದಿಗೆ ಪರೀಕ್ಷೆಗೆ ಕುಳಿತು ಕನ್ನಡ ಎಂ.ಎ. ಪದವಿಯನ್ನು ದ್ವಿತೀಯ ದರ್ಜೆಯಲ್ಲಿ ಪಡೆದುಕೊಂಡರು.

ಎಂ.ಎ. ಪದವಿ ದೊರೆಯಿತು. ಆದರೆ ಕೆಲಸ ಸಿಕ್ಕಲಿಲ್ಲ. ಸುಮ್ಮನೆ ಕುಳಿತು ಮಾಡುವುದೇನು ಎಂದು ಮೈಸೂರಿನಲ್ಲಿಯೇ ಬಿ.ಟಿ. ಓದಬೇಕೆಂದು ನಿರ್ಧರಿಸಿದರು. ಸಹಾಯಕ್ಕೆ ಬೆಂಗಳೂರಿನ ಡಾ. ಸಿ.ಬಿ. ರಾಮರಾಯರನ್ನು ಕೋರಿದರು. ಅವರು ದೊರಕಿಸಿದ ಉದಾರವಾದ ಧನಸಹಾಯದಿಂದ ೧೯೩೨ರಲ್ಲಿ ಬಿ.ಟಿ. ಪದವೀಧರರಾದರು. ಅಲ್ಲಿಗೆ ವೃತ್ತಿಗಾಗಿ, ವಿದ್ಯೆಯ ಸಂಸ್ಕಾರಕ್ಕಾಗಿ ಹಾಗೂ ಘನತೆಗಾಗಿ ಅವರು ಹಠದಿಂದಾಗಿಯೇ ತಮ್ಮ ಪಾಲಿನ ಆಸ್ತಿಯ ಭಾಗವನ್ನು ಆಧಾರಮಾಡಿದರು; ಎರಡು ವರ್ಷಗಳೂ ಮೊದಲರ್ಧ ಬಾಡಿಗೆ ಕೊಠಡಿ-ಸ್ವಯಂಪಾಕ, ಆ ಮೇಲಿನ ಅರ್ಧಭಾಗ ಮಹಾರಾಜ ಕಾಲೇಜು ಹಾಸ್ಟೆಲು; ಹೀಗೆ ವ್ಯವಸ್ಥೆ ಮಾಡಿಕೊಂಡು ವ್ಯಾಸಂಗ ಮಾಡಿದರು. ನಡುವೆ ಆರೋಗ್ಯ ಕೆಟ್ಟರೂ ಹತಾಶರಾಗದೆ ಹಿಡಿದ ಹಠವನ್ನು ಸಾಧಿಸಿದರು.

## ೨. ವೃತ್ತಿ ಪ್ರವೃತ್ತಿಗಳ ಚಕ್ರತೀರ್ಥದಲ್ಲಿ

ಅರ್ಚಕಮನೆತನದ ಸಾಮಾನ್ಯ ಹುಡುಗನೊಬ್ಬ, ೨೦ನೆಯ ಶತಮಾನದ ಆರಂಭದ ದಶಕದಲ್ಲಿ ತೀರ ವಿರಳವಾಗಿದ್ದ, ಕಠಿನವಾದ ಪರಿಶ್ರಮವಿಲ್ಲದೆ ಸಾಧ್ಯವಾಗದಿದ್ದ, ಆಧುನಿಕ ಕಾಲದ ಆಂಗ್ಲಶಿಕ್ಷಣವನ್ನು ಸ್ನಾತಕೋತ್ತರಪದವಿಯವರೆಗೆ ವ್ಯಾಸಂಗಮಾಡಿ ಪಡೆದುಕೊಂಡನೆಂಬುದು ಒಂದು ಸೋಜಿಗವೇ ಸರಿ. ಹಾಗೆ ಪಡೆದುಕೊಂಡರೂ ಸರ್ಕಾರದಲ್ಲಿ ಉದ್ಯೋಗ ದೊರೆಯುವುದು ಕಷ್ಟ ಎನ್ನುವಂಥ, ಅವಕಾಶಗಳೇ ಕಡಮೆ ಎನ್ನುವಂಥ ಬರಗಾಲವದು.

ಈ ಸ್ಥಿತಿಯಲ್ಲಿ ಕ.ವೆಂ. ರಾಘವಾಚಾರ್ಯರು ಉದ್ಯೋಗಕ್ಕಾಗಿ ಪರದಾಡಿದ್ದು ಸ್ವಾಭಾವಿಕವೇ. ಮೊದಲಿಗೆ ಅವರಿಗೆ ಸಿಕ್ಕಿದ್ದು ಒಂದು ಬದಲಿ ಕೆಲಸ; ಬೆಂಗಳೂರಿನ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಮಾಹೆಯಾನ ೪೦ ರೂ. ಸಂಬಳದ ಕೆಲಸ, ಅದು ಕೂಡ ಒಂದು ತಿಂಗಳಷ್ಟೇ. ಆಮೇಲೆ ಬೆಂಗಳೂರು ಜಿಲ್ಲಾ ನಾರ್ಮಲ್ ಸ್ಕೂಲಿನಲ್ಲಿ ಮಾಹೆಯಾನ ೫೦ ರೂ. ಸಂಬಳದ ಮೇಲೆ ಮೂರು ತಿಂಗಳ ಕಾಲ ಬದಲಿ ಕೆಲಸ ಮಾಡಿದರು. ತಮಗೆ ಓದುವ ಕಾಲದಲ್ಲಿ ಸಹಾಯಮಾಡಿದ ಡಾ. ಸಿ.ಬಿ. ರಾಮರಾಯರ ಮೊಮ್ಮಗಳಿಗೆ ಇಂಗ್ಲಿಷ್ ಗಣಿತಗಳ ಮನೆಪಾಠ ಮಾಡಿ ಸ್ವಲ್ಪ ಸಂಪಾದಿಸಿದರು.

ಒಂದು ನೆಲೆಯಾದ ಕೆಲಸ ಸಿಕ್ಕಲು ಆಚಾರ್ಯರು ೧೯೩೩ರವರೆಗೆ ಕಾಯಬೇಕಾಯಿತು. ದೊರೆತ ಬಿಡುವನ್ನು ಸದುಪಯೋಗಪಡಿಸಿಕೊಳ್ಳಲು ಬೆಂಗಳೂರಿನಲ್ಲಿಯೇ ಮಲ್ಲೇಶ್ವರದಲ್ಲಿದ್ದ ತಮಿಳು ವಿದ್ವಾಂಸ ಶ್ರೀ.ಎಂ. ಸೋಮಸುಂದರಂ ಅವರಲ್ಲಿ ತಮಿಳು ಕಾವ್ಯಗಳನ್ನು ಅಭ್ಯಾಸ ಮಾಡಿದರು. ಕನ್ನಡದೊಂದಿಗೆ ಸೋದರ ದ್ರಾವಿಡಭಾಷೆಯಾದ ತಮಿಳನ್ನು ಕೂಡ ಹೀಗೆ ಅಭ್ಯಾಸಮಾಡಿದ್ದು, ಮುಂದೆ ಅವರು ದ್ರಾವಿಡ ಭಾಷಾವಿಜ್ಞಾನಿಯಾಗಿ ಬೆಳೆಯಲು ಸಹಾಯ ಮಾಡಿತೆನ್ನಬೇಕು. ಕಳೆದ ಶತಮಾನದ ಐವತ್ತರ ದಶಕದಲ್ಲಿ ಅವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ತೌಲನಿಕ ದ್ರಾವಿಡ ಭಾಷಾವಿಜ್ಞಾನದ ಬೋಧನೆಯನ್ನು ಸಮರ್ಥವಾಗಿ ನಿರ್ವಹಿಸಿದ್ದು ಅದರ ಬಲದಿಂದಲೇ. ತಮ್ಮ ಆಪ್ತಗುರುಗಳಾದ ಶ್ರೀಯವರು "ಗ್ರೀಕ್ ಕಲಿಯಲಿಲ್ಲವಲ್ಲಾ ಎಂಬ ಕೊರಗು ನನ್ನನ್ನು ಈಗಲೂ ಬಾಧಿಸುತ್ತಿದೆ" ಎಂದು ಉಪನ್ಯಾಸವೊಂದರಲ್ಲಿ ಪ್ರಾಸ್ತಾವಿಕವಾಗಿ ಆಡಿದ ಮಾತನ್ನು ನೆನೆದು, ತಾವೇಕೆ ಪ್ರಯತ್ನಿಸಬಾರದು ಎಂದು ಯೋಚಿಸಿ, ದಂಡಿನ ಯುನೈಟೆಡ್ ತಿಯೊಲಾಜಿಕಲ್ ಕಾಲೇಜಿನ ಮೌಲ್ಟನ್ ಅವರನ್ನು ಆಶ್ರಯಿಸಿ ಗ್ರೀಕ್ ಭಾಷೆಯ ಅಭ್ಯಾಸಕ್ಕೆ ತೊಡಗಿದರು. ಆಚಾರ್ಯರ ಗ್ರೀಕ್ ಕಲಿಕೆ ಮುಂದೆ ಅವರ ಕೀರ್ತಿ ಪ್ರತಿಷ್ಠೆಗಳನ್ನು ಬೆಳಸಿದ್ದಲ್ಲದೆ ಗ್ರೀಕ್ ಮೂಲದಿಂದಲೇ ಕನ್ನಡಿಸಿದ ಗ್ರೀಕ್ ನಾಟಕಗಳಿಂದಾಗಿ ಕನ್ನಡ ಸಾಹಿತ್ಯವೂ ಸಂಪದ್ಯುಕ್ತವಾಗುವಂತೆ ಮಾಡಿತು.

೧೯೩೩ರಲ್ಲಿ ಮೈಸೂರು ಸರ್ಕಾರ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಇಂಗ್ಲಿಷ್-ಕನ್ನಡ ನಿಘಂಟುವನ್ನು ಸಿದ್ಧಮಾಡುವ ಒಂದು ಯೋಜನೆಯನ್ನು ಹಾಕಿತು. ಬೆಳ್ಳಾವೆ ವೆಂಕಟನಾರಣಪ್ಪನವರ ಪ್ರಧಾನ

ಸಂಪಾದಕತ್ವದಲ್ಲಿ ಡಿ.ವಿ. ಗುಂಡಪ್ಪನವರು, ಬಿ.ಎಂ.ಶ್ರೀಕಂಠಯ್ಯನವರು ಮೊದಲಾದ ಗಣ್ಯರ ಸಂಪಾದಕಮಂಡಲಿ ಏರ್ಪಟ್ಟಿತು. ಇಲ್ಲಿ ಆಚಾರ್ಯರಿಗೆ ಮಾಹೆಯಾನ ೬೦ರೂ. ಸಂಬಳದ ಸಾಹಿತ್ಯಸಹಾಯಕಹುದ್ದೆ (Literary assistant) ದೊರೆಯಿತು. ಈ ಹುದ್ದೆಗೆ ಆಯ್ಕೆಗೊಳ್ಳುವಾಗ, ಅವರ ಬಿ.ಎ. ಪದವಿಯ ಗಣಿತ ಭೌತವಿಜ್ಞಾನಗಳ ವ್ಯಾಸಂಗ, ಇಂಗ್ಲಿಷ್ ಭಾಷಾಸಾಹಿತ್ಯಗಳ ತಿಳಿವಳಿಕೆಯ ಬಗ್ಗೆ ಅವರ ಪ್ರಾಧ್ಯಾಪಕರಿಂದ ದೊರೆತಿದ್ದ ಯೋಗ್ಯತಾಪತ್ರ, ಗ್ರೀಕ್ ಭಾಷಾಜ್ಞಾನದ ವಿಶೇಷತೆ ಎಲ್ಲವೂ ಸಹಾಯಕ್ಕೆ ಬಂದುವು. ಬಿ.ಎಂ. ಶ್ರೀಕಂಠಯ್ಯನವರು, ಬೆಳ್ಳಾವೆ ವೆಂಕಟನಾರಣಪ್ಪನವರು ಹಾಗೂ ಡಾ. ಸಿ.ಬಿ. ರಾಮರಾಯರು ಅವರ ವಿಷಯದಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿದ್ದು ಕೂಡ ಕೆಲಸಕ್ಕೆ ಒದಗಿತು.

ಕಟ್ಟುನಿಟ್ಟಿನ ಮನುಷ್ಯರಾಗಿದ್ದ ಬೆಳ್ಳಾವೆಯವರನ್ನು ಕೂಡ ಆಚಾರ್ಯರು ತಮ್ಮ ಪ್ರಾಮಾಣಿಕತೆ, ಕಾವ್ಯಶ್ರದ್ಧೆ, ಸಮಯನಿಷ್ಠೆ, ಅಚ್ಚುಕಟ್ಟು ಈ ಕೆಲವು ಗುಣಗಳಿಂದ ಮೆಚ್ಚುವಂತೆ ಮಾಡಿದರು. ತಮಗೆ ಒಪ್ಪಿಸಿದ್ದ ಕೆಲಸವನ್ನು ತುಂಬ ಸಮರ್ಪಕವಾಗಿ ನಿರ್ವಹಿಸಿದರು. ಯುನೈಟೆಡ್ ತಿಯೊಲಾಜಿಕಲ್ ಕಾಲೇಜಿನಲ್ಲಿ ಗ್ರೀಕ್‌ಪಾಠಕ್ಕೆ ತಾವು ಹೋಗುತ್ತಿದ್ದಾಗಲೇ, ಮೌಲ್ಟನ್ ಅವರ ಕೋರಿಕೆಯಂತೆ ಅಲ್ಲಿಯ ಒಬ್ಬನೇ ವಿದ್ಯಾರ್ಥಿಗೆ ವಾರಕ್ಕೆ ಎರಡು ಗಂಟೆ ಕನ್ನಡಪಾಠ ಹೇಳಿ ತಿಂಗಳಿಗೆ ೧೫ ರೂ. ಹೆಚ್ಚಿನ ಆದಾಯಕ್ಕೆ ಕೂಡ ಅವಕಾಶ ಮಾಡಿಕೊಂಡರು. ವಿಶ್ವವಿದ್ಯಾನಿಲಯ ಇದಕ್ಕೆ ಸಮ್ಮತಿಸಿತ್ತು.

ಬೆಂಗಳೂರು ಇಂಗ್ಲಿಷ್-ಕನ್ನಡ ನಿಘಂಟು ಕಚೇರಿಯಲ್ಲಿ ತಿಂಗಳಿಗೆ ೬೦ ರೂ. ಸಂಬಳದ ಮೇಲೆ ಆಚಾರ್ಯರು ೯ ವರ್ಷ ಕೆಲಸ ಮಾಡಿದರು (೧೯೩೩ - ೧೯೪೧) ನಡುವೆ ೫-೬ ವರ್ಷಗಳ ಮೇಲೆ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ ಪಂಡಿತರ ಕೆಲಸಕ್ಕೆ ನೇಮಕವಾಯಿತಾದರೂ, ಕೆಲಸವೇನೋ ಬೆಂಗಳೂರಿನ ನಿಘಂಟು ಕಛೇರಿಯಲ್ಲಿಯೇ ಎಂದಿನಂತೆ ಸಾಗಿತ್ತು. ಆದರೆ ಒಂದು ಘಟ್ಟದಲ್ಲಿ ಈ ನಿಘಂಟುಕೆಲಸ ಸಾಕೆನ್ನಿಸಿ, ಬೆಳ್ಳಾವೆಯವರಿಂದ ಬಿಡುಗಡೆ ಪಡೆದು ೧೯೪೧ರಲ್ಲಿ ಮೈಸೂರು ಮಹಾರಾಜ ಕಾಲೇಜಿಗೆ ವಾಪಸಾದರು. ಆಗ ಅವರ ಸ್ಥಾನದಲ್ಲಿ ಅಲ್ಲಿ ಜಿ. ವೆಂಕಟಸುಬ್ಬಯ್ಯನವರು ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದು, ಅವರು ತಮ್ಮ ಸ್ಥಾನವನ್ನು ತೆರವು ಮಾಡಬೇಕಾಗಿ ಬಂದಿತು.

೧೯೪೩ರ ಆಗಸ್ಟ್ ತಿಂಗಳಲ್ಲಿ ಇಂಗ್ಲಿಷ್-ಕನ್ನಡ ನಿಘಂಟುವಿನ ಪ್ರಧಾನ ಸಂಪಾದಕರಾಗಿದ್ದ ಬೆಳ್ಳಾವೆ ವೆಂಕಟನಾರಣಪ್ಪನವರು ತೀರಿಕೊಂಡರು. ಆ ಸ್ಥಾನಕ್ಕೆ ಎಂ.ಆರ್. ಶ್ರೀನಿವಾಸಮೂರ್ತಿಗಳನ್ನು ಬಿ.ಎಂ. ಶ್ರೀಕಂಠಯ್ಯನವರು ಒಪ್ಪಿಸಿದರು. ಅವರು ರಾಘವಾಚಾರ್ಯರ ಕಾವ್ಯದಕ್ಷತೆಯನ್ನು ಬಲ್ಲವರಾಗಿದ್ದ ಕಾರಣ, ತಮ್ಮ ಕಾರ್ಯ ಸುಸೂತ್ರವಾಗಿ ಸಾಗಲು ಅವರ ಸೇವೆ ಅವಶ್ಯವೆಂದು ಮನಗಂಡರು; ಶ್ರೀಯವರ ಮೂಲಕ ಅವರಿಗೆ ಹೇಳಿಸಿ ಮತ್ತೆ ನಿಘಂಟು ಕಛೇರಿಗೆ ಅವರನ್ನು ಕರಸಿಕೊಂಡರು. ಆಚಾರ್ಯರಿಗಾದರೂ ಶ್ರೀಯವರ ಮಾತನ್ನು ತೆಗೆದು ಹಾಕುವುದು ಸಾಧ್ಯವಿರಲಿಲ್ಲ. ಮತ್ತೆ ಮೂರು-ನಾಲ್ಕು ವರ್ಷ ಕೆಲಸ ನಡೆದು, ನಿಘಂಟು ಪ್ರಕಟವಾದ ಮೇಲೆ (೧೯೪೬), ೧೯೪೭ರಲ್ಲಿ ಮೈಸೂರು ಮಹಾರಾಜ ಕಾಲೇಜಿಗೆ ಅಧ್ಯಾಪಕರಾಗಿ ಬಂದರು.

ಇಲ್ಲಿಂದ ಮುಂದೆ ಆಚಾರ್ಯರ ಬದುಕಿನಲ್ಲಿ ಹೊಸ ತಿರುವು ಬಂತು. ಅವರು ಈಗ ಪೂರ್ಣಾವಧಿ ಅಧ್ಯಾಪಕರಾದರು. ಅಧ್ಯಯನ ಅಧ್ಯಾಪನಗಳಲ್ಲಿ, ವಿದ್ಯಾರ್ಥಿ ಸಮುದಾಯದ ಕ್ಷೇಮಚಿಂತನೆಯಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡರು. ಹಾಗೆ ನೋಡಿದರೆ, ಆಚಾರ್ಯರ ಕಾಲೇಜು ಅಧ್ಯಾಪನದ ಸೇವಾವಧಿ ತುಂಬ ಕಡಿಮೆ ಅವಧಿಯದು; ಕೇವಲ ೧೨ ವರ್ಷಗಳ ಅವಧಿಯದು (೧೯೪೭ - ೧೯೫೯), ಈ ಅವಧಿಯಲ್ಲಿ ಅವರ ವಿದ್ಯಾರ್ಥಿಗಳಾಗಿ ಓದಿದವರು ಅದೃಷ್ಟವಂತರು. ಅವರಲ್ಲಿ ಹಲವರು ಮುಂದೆ ಖ್ಯಾತನಾಮರಾಗಿ ತಾವು ಕಲಿತ ಮೈಸೂರು ವಿಶ್ವವಿದ್ಯಾನಿಲಯಕ್ಕೂ ರಾಜ್ಯಕ್ಕೂ ಹೆಸರು ತಂದರು. ಆಚಾರ್ಯರು ಪ್ರಾಚೀನ ಕವಿಕೃತಿಗಳನ್ನು, ತಮ್ಮದೇ 'ಅಂತಿಗೊನೆ' ನಾಟಕವನ್ನು ಸರಸವಾಗಿ, ಆಕರ್ಷಕವಾಗಿ ಪಾಠ ಹೇಳಿದರು. ಆದರೆ ಅವರು ವಿದ್ಯಾರ್ಥಿಗಳಿಗೆ ಹೆಚ್ಚಾಗಿ ಪಾಠಮಾಡಿದ್ದು ತೌಲನಿಕ ದ್ರಾವಿಡ ಭಾಷಾವಿಜ್ಞಾನವೆಂಬ ಶಾಸ್ತ್ರಪಾಠವನ್ನು. ಆ ಮೊದಲು ಈ ವಿಷಯವನ್ನು ಮಹಾರಾಜ ಕಾಲೇಜಿನಲ್ಲಿ ತಮ್ಮ ಕಾಲದ ಖ್ಯಾತ ಭಾಷಾವಿಜ್ಞಾನಿಯಾಗಿದ್ದ ಡಾ. ಎ.ಎನ್. ನರಸಿಂಹಯ್ಯನವರು ಕಲಿಸುತ್ತಿದ್ದರು. ಆಚಾರ್ಯರು ಭಾಷಾವಿಜ್ಞಾನದಂತಹ ನೀರಸವಿಷಯವನ್ನು ಸಹ ತಮ್ಮ ವಿದ್ಯಾರ್ಥಿಗಳಿಗೆ ಕಥೆ ಹೇಳುವಂತೆ ಸರಸವಾಗಿ, ಆಕರ್ಷಕವಾಗಿ ಹೇಳುತ್ತಿದ್ದರು ಎನ್ನವುದೊಂದು ವಿಶೇಷ. ಅವರಿಗೆ ಒಳ್ಳೆಯ ಸಂಸ್ಕೃತಭಾಷೆಯ ಹಿನ್ನೆಲೆಯಿತ್ತು; ತಮಿಳು ತೆಲುಗು ಕನ್ನಡಗಳಲ್ಲಿ ನಿಕಟವಾದ ಪರಿಚಯ ಪ್ರವೇಶಗಳಿದ್ದುವು. ಆವರೆಗೆ ಇಂಗ್ಲಿಷ್ ಭಾಷೆಯಲ್ಲಿ ಬಂದಿದ್ದ ಈ ಕ್ಷೇತ್ರದ ಕೃತಿಗಳನ್ನೂ ಬಹುಪಾಲು ಲೇಖನಗಳನ್ನೂ ಅವರು ಓದಿಕೊಂಡು ಟಿಪ್ಪಣಿಗಳನ್ನು ಸಿದ್ಧಮಾಡಿಕೊಂಡಿದ್ದರು. ಇವುಗಳಲ್ಲಿ ರಾಬರ್ಟ್ ಕಾಲ್ಡ್ವೆಲ್, ಚಿಲಕೂರಿ ನಾರಾಯಣರಾವ್, ಗ್ರಿಯರ್ಸನ್ ಮೊದಲಾದವರ ರಚನೆಗಳೆಲ್ಲ ಸೇರಿದ್ದುವು. ಪುಷ್ಕಳವಾದ ಪೂರ್ವಸಿದ್ಧತೆಯೊಂದಿಗೆ ಅವರು ತರಗತಿಗಳಿಗೆ ಬರುತ್ತಿದ್ದರು. ವಿಷಯಗಳನ್ನು ಹಲವು ವಿಭಾಗಗಳಲ್ಲಿ ಅಚ್ಚುಕಟ್ಟಾಗಿ ವಿಭಜನೆ ಮಾಡಿಕೊಂಡು ಕ್ರಮವಾಗಿ ಸಂಗತಿಗಳನ್ನು ವಿವರಿಸಿ, ಜೊತೆಗೇ ಟಿಪ್ಪಣಿಗಳನ್ನು ಕೂಡ ಬರಸುತ್ತಿದ್ದರು. ಈ ಟಿಪ್ಪಣಿಗಳನ್ನು ಈಗ ಮುದ್ರಿಸುವುದಾದರೆ, ಸುಮಾರು ೨೦೦-೨೫೦ ಪುಟಗಳ ಒಂದು ಕೈಪಿಡಿಯಾಗಬಹುದೆಂದು ತೋರುತ್ತದೆ. ಈ ಕಾಲಘಟ್ಟದಲ್ಲಿಯೇ ಗುರುವರ್ಯ ಶ್ರೀ ಅವರ ಕೃತಿಗಳನ್ನೆಲ್ಲ "ವಿಶ್ವಸಾಹಿತ್ಯಮಾಲೆ'ಯಲ್ಲಿ 'ಶ್ರೀಕಂಠಮಾಲೆ' ಎಂಬ ಅಂಕಿತದಲ್ಲಿ ಪ್ರತ್ಯೇಕವಾಗಿ ಪ್ರಕಟಿಸಲು ಸಂಕಲ್ಪಿಸಿದಾಗ, ತಾವೇ ಅದರ ಸಂಪಾದಕರಾಗಿ ಶ್ರಮಿಸಿದರು. ಇಂಗ್ಲಿಷ್ ಗೀತಗಳು (೧೯೫೩), ಹೊಂಗನಸುಗಳು (೧೯೪೮) ಮತ್ತು ಪಾರಸಿಕರು (೧೯೪೯) ಆ ಮಾಲೆಯಲ್ಲಿ ಉತ್ಕೃಷ್ಟ ಸಹಾಯಕಸಾಹಿತ್ಯದೊಂದಿಗೆ ಪ್ರಕಟವಾದವು.

ಈ ನಡುವೆ ವಿದ್ಯಾರ್ಥಿಗಳ ಪರೀಕ್ಷೆಗಳ ನಿರ್ವಹಣೆ, ವೇಳಾಪಟ್ಟಿಯ ಸಿದ್ಧತೆ ಮೊದಲಾದ ವ್ಯಾವಹಾರಿಕವಿಷಯಗಳಲ್ಲಿ ಆಚಾರ್ಯರು ಇಲಾಖೆಯ ಮುಖ್ಯರಿಗೆ ಸಲಹೆ ಸಹಕಾರಗಳನ್ನು ನೀಡುತ್ತಿದ್ದರು. ಸಾಂಘಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಎಸ್.ವಿ. ರಂಗಣ್ಣನವರಿಗೆ ಅರ್ಪಿಸಿದ (೨೭-೧-೧೯೫೪) 'ಬಾಗಿನ' ಎಂಬ ಸಂಭಾವನ ಗ್ರಂಥದ ಸಿದ್ಧತೆಯಲ್ಲಿ ಆಗ ಆನರ್ಸ್ ವಿದ್ಯಾರ್ಥಿಗಳಾಗಿದ್ದು, ಮುಂದೆ ಪ್ರಸಿದ್ಧರಾದ ಕೆ.ವಿ. ಸುಬ್ಬಣ್ಣನವರೂ, ಹಾ.ಮಾ. ನಾಯಕರೂ ಅವರನ್ನೂ ಎಸ್.ವಿ. ಪರಮೇಶ್ವರ ಭಟ್ಟರನ್ನೂ ಸಲಹೆಗಾರರಾಗಿಟ್ಟುಕೊಂಡು ತಮ್ಮ ಯೋಜನೆಯನ್ನು ಯಶಸ್ವಿಯಾಗಿ ಪೂರೈಸಿದರು. ಆಚಾರ್ಯರು

ಕೋಶಾಧಿಕಾರಿಗಳಾಗಿಯೂ ಇದ್ದು ಸಹಾಯಮಾಡಿದರು. ತಮ್ಮ ವೈಯಕ್ತಿಕ ನೆಲೆಯಲ್ಲಿ ಶಿಷ್ಯರಿಗೆ ವ್ಯಾಸಂಗಕ್ಕೆ ನೆರವಾಗುವುದೂ ಪರೀಕ್ಷೆಯಲ್ಲಿ ತೇರ್ಗಡೆಯಾದ ಮೇಲೆ ಕೆಲಸ ದೊರಕಿಸುವಲ್ಲಿ ಪ್ರಯತ್ನಿಸುವುದೂ ಇವೆಲ್ಲ ಅವರಿಗೆ ಇಷ್ಟವಾದ ವಿದ್ಯಮಾನಗಳಾಗಿದ್ದುವು. ಶಿಸ್ತಿನ ಸಿಪಾಯಿಯಂತಿದ್ದ ಆಚಾರ್ಯರ ನ್ಯಾಯನಿಷ್ಠುರವಾದ ಕಟ್ಟುನಿಟ್ಟಿನ ವರ್ತನೆಗೆ, ಗಾಂಭೀರ್ಯಕ್ಕೆ, ಸಮಯನಿಷ್ಠೆಗೆ ವಿದ್ಯಾರ್ಥಿಗಳು ಹೆದರುತ್ತಿದ್ದರು. ವಿದ್ಯಾರ್ಥಿಗಳಿರಲಿ, ವಿದ್ಯಾರ್ಥಿನಿಯರಿರಲಿ ತರಗತಿಗಳಿಗೆ ತಡವಾಗಿ ಬಂದರೆ, ಅವರನ್ನು ಸೇರಿಸುತ್ತಿರಲಿಲ್ಲ. ಒಂದು ಗಂಟೆ ಪಾಠವೆಂದರೆ, ಪೂರ್ತಿಯಾಗಿ ಒಂದು ಗಂಟೆ ಪಾಠವಲ್ಲದೆ ಬೇರೆ ಯಾವುದೇ ಪ್ರಸಂಗವಿಲ್ಲ. ಅಷ್ಟು ಮಾತ್ರವಲ್ಲ, ಸಹ ಅಧ್ಯಾಪಕರೂ ಬೆಚ್ಚುತ್ತಿದ್ದರು, ಎಚ್ಚರದಿಂದಿರುತ್ತಿದ್ದರು. ಅವರ ಅಧ್ಯಾಪಕತ್ವದ ಅವಧಿಯಲ್ಲಿಯೇ, ೧೯೫೧ರಲ್ಲಿ ಮೈಸೂರು ಮಹಾರಾಜ ಕಾಲೇಜಿನ ಶತಮಾನೋತ್ಸವವೂ ೧೯೫೫ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವೂ ಜರುಗಿ, ಇವುಗಳ ಯಶಸ್ವಿ ನಿರ್ವಹಣೆಯಲ್ಲಿ ಅವರ ಪಾತ್ರವೂ ವಿಶೇಷವಾಗಿದ್ದಿತು. ೧೯೫೯ರಲ್ಲಿ ಆಚಾರ್ಯರು, ತಮ್ಮ ೫೫ನೆಯ ವಯಸ್ಸಿಗೆ ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತರಾದರು.

೧೯೫೯ರ ಶೈಕ್ಷಣಿಕವರ್ಷದಿಂದ ದಕ್ಷಿಣ ಭಾಷಾಸಾಹಿತ್ಯಗಳ ವ್ಯಾಸಂಗಕ್ಕೆ ಹೊಸದಾಗಿ ವ್ಯವಸ್ಥೆಯನ್ನು ಕಲ್ಪಿಸಲು ದೆಹಲಿ ವಿಶ್ವವಿದ್ಯಾನಿಲಯ ನಿರ್ಧರಿಸಿತು; ಅರ್ಜಿಗಳನ್ನು ಆಹ್ವಾನಿಸಿ ಪ್ರಕಟನೆಯನ್ನೂ ಹೊರಡಿಸಿತು. ಆಗ ಅಲ್ಲಿ ಕುಲಪತಿಗಳಾಗಿದ್ದವರು ಡಾ. ವಿ. ಕೆ. ಆರ್. ವಿ. ರಾವ್ ಅವರು, ತಮ್ಮ ನಿವೃತ್ತಿ ಇನ್ನೇನು ೧-೨ ತಿಂಗಳಿವೆ ಎನ್ನುವಾಗ ಆಚಾರ್ಯರು ಕನ್ನಡ ಅಧ್ಯಾಪಕಹುದ್ದೆಗೆ ತಮ್ಮ ಅರ್ಜಿಯನ್ನು ಹಾಕಿದರು. ಆಯ್ಕೆಸಮಿತಿ ಸಂದರ್ಶನವಿಲ್ಲದೆಯೇ, ಅವರು ಹಾಕಿದ್ದ ಷರತ್ತುಗಳನ್ನು ಒಪ್ಪಿಯೇ, ಹುದ್ದೆಗೆ ಅವರನ್ನು ಆಯ್ಕೆ ಮಾಡಿತು. ಸಮಿತಿಯಲ್ಲಿ ಮೈಸೂರಿಂದ ತೀ.ನಂ. ಶ್ರೀಕಂಠಯ್ಯನವರೂ ಇದ್ದರು.

೧೯೫೯ರ ಜುಲೈ ೧೭ರಂದು ಕ.ವೆಂ. ರಾಘವಾಚಾರ್ಯರು ದೆಹಲಿ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಅಧ್ಯಾಪಕರಾದರು. ಕೆಲವು ದಿನಗಳಲ್ಲಿಯೇ ಮೈಸೂರಿನಲ್ಲಿ ಅವರ ಪತ್ನಿ ತೀರಿಕೊಂಡ ಸುದ್ದಿ ಬಂದಿತು. ಈ ಸ್ಥಿತಿಯಲ್ಲಿ ದೆಹಲಿಯಲ್ಲಿ ಮುಂದುವರಿಯುವುದು ಅನಿಶ್ಚಿತವೆನ್ನುವಂತಾಯಿತು. ಆಗ್ಗೆ ಕುಲಪತಿಗಳು ಸಾಂತ್ವನ ಹೇಳಿ, ಕೆಲಸಕ್ಕೆ ರಾಜೀನಾಮೆ ನೀಡದ ಹಾಗೆ ತಿಳಿಯ ಹೇಳಿದರು. ಅಲ್ಲದೆ ವಿಶ್ವವಿದ್ಯಾನಿಲಯದ ಆಡಳಿತ ಅವರಿಗೆ ಅನನುಕೂಲವಾಗದ ಹಾಗೆ ಅಸಾಮಾನ್ಯ ರಜೆ ನೀಡಿ ಸಹಕರಿಸಿತು. ಹೀಗಾಗಿ ಆಚಾರ್ಯರು ತಮ್ಮ ಹುದ್ದೆಯಲ್ಲಿ ಮುಂದುವರಿದರು. ತಮ್ಮ ೬೫ನೆಯ ವಯಸ್ಸಿನವರೆಗೆ ಅವರು ಸೇವೆ ಸಲ್ಲಿಸಿ ೧೯೬೯ರಲ್ಲಿ ನಿವೃತ್ತರಾದರು.

ದೆಹಲಿಯಲ್ಲಿ ಇದ್ದಷ್ಟು ಕಾಲ ರಾವ್ ಅವರ ಅನಂತರ ಕುಲಪತಿಗಳಾಗಿ ಬಂದ ಸಿ.ಡಿ. ದೇಶಮುಖ್ ಅವರೂ ಎನ್.ಕೆ. ಸಿದ್ಧಾಂತ ಅವರೂ ಭಾಷಾಧ್ಯಯನ ವಿಭಾಗಗಳ ಇತರ ಅಧ್ಯಾಪಕ ಪ್ರಾಧ್ಯಾಪಕರೂ ಅವರನ್ನು ಚೆನ್ನಾಗಿ ನಡೆಸಿಕೊಂಡರು, ಗೌರವಾದರಗಳಿಂದ ನೋಡಿಕೊಂಡರು. ಹಿಂದೀ ವಿಭಾಗದ ಪ್ರಾಧ್ಯಾಪಕರಾದ ಡಾ. ನರೇಂದ್ರ ಅವರ ಸಲಹೆಯಂತೆ ಆಚಾರ್ಯರ ಸಾಕುಮಗಳು ಎಸ್. ವಿನೋದ ಅವರು ಹೆಚ್ಚಿನ ಒಂದು ಅಧ್ಯಾಪಕಸ್ಥಾನಕ್ಕೆ ಆಯ್ಕೆಯಾಗುವ ಅವಕಾಶ ದೊರೆತ ಮೇಲೆ (೧೯೬೧) ಆಚಾರ್ಯರ ವಾಸ್ತವ್ಯದಲ್ಲಿ ನೆಮ್ಮದಿ ಹೆಚ್ಚಿತು.

ರಾಘವಾಚಾರ್ಯರು ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಪಡೆದ ಮಾನಸಮ್ಮಾನಗಳಿಗೆ ಅವರ ವಯಸ್ಸು ಒಂದೇ ಕಾರಣವಾಗಿರಲಿಲ್ಲ. ಸೋದರ ದ್ರಾವಿಡಭಾಷೆಗಳಲ್ಲಿದ್ದ ಪರಿಚಯ ಪ್ರಭುತ್ವಗಳು, ಇಂಗ್ಲಿಷ್ ಭಾಷಾಸಾಹಿತ್ಯಗಳ ಪಾಂಡಿತ್ಯ ವಾಗ್ಮಿತೆಗಳು, ವಿಶೇಷವಾಗಿ ಅವರಿಗಿದ್ದ ಗ್ರೀಕ್ ಭಾಷಾಸಾಹಿತ್ಯಗಳ ತಜ್ಞತೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅವರ ಪಾಠಕ್ರಮ ಪ್ರಾಮಾಣಿಕತೆ ಶಿಸ್ತುಪಾಲನೆಗಳು ಹೀಗೆ ಹಲವು ಕಾರಣಗಳಿದ್ದುವು. ಅವರು ಇಂಗ್ಲಿಷಿನಲ್ಲಿ ನಿರರ್ಗಳವಾಗಿ ಉಪನ್ಯಾಸ ನೀಡಬಲ್ಲವರಾಗಿದ್ದರು, ಗೋಷ್ಠಿಗಳಲ್ಲಿ ಪ್ರಬಂಧಗಳನ್ನು ಸಿದ್ಧಪಡಿಸಿ ಮಂಡಿಸ ಬಲ್ಲರಾಗಿದ್ದರು. ಅಂತಹ ಕೆಲವು ಉಪನ್ಯಾಸಗಳೂ ಪ್ರಬಂಧಗಳೂ ಅವರ ಸ್ಮೃತಿ ಮಾಲಿಕೆಯ ಬರಹದ ಅನಂತರದ ಇಂಗ್ಲಿಷ್ ವಿಭಾಗದಲ್ಲಿ ಸಂಕಲಿತವಾಗಿದ್ದು, ಅವನ್ನು ಓದಿದವರಿಗೆ ಆಚಾರ್ಯರ ಶಕ್ತಿ ಕೆಲಮಟ್ಟಿಗಾದರೂ ಮನವರಿಕೆಯಾಗುವುದು ಸಾಧ್ಯವಿದೆ. ದೆಹಲಿಯ ವಾಸ್ತವ್ಯದ ವೇಳೆ ವಿಶ್ವವಿದ್ಯಾನಿಲಯದ ಅಧ್ಯಾಪಕರಲ್ಲಿ ಕೆಲವರು ನಡಸುತ್ತಿದ್ದ 'ವೇದಾಂತಸಮಿತಿ'ಯ ಕಲಾಪಗಳಲ್ಲಿಯೂ ಆಚಾರ್ಯರು ಭಾಗವಹಿಸುತ್ತಿದ್ದರು. ಶ್ರೀರಾಮಕೃಷ್ಣಾಶ್ರಮದ ಸ್ವಾಮಿ ರಂಗನಾಥಾನಂದರ ಭಾನುವಾರದ ಉಪನ್ಯಾಸಗಳಲ್ಲಿ ತಪ್ಪದೆ ಹಾಜರಾಗುತ್ತ ತಾವು ಪಡೆದ ಧನ್ಯತೆಯನ್ನೂ ಆಚಾರ್ಯರು ದಾಖಲಿಸಿದ್ದಾರೆ.

ಆಚಾರ್ಯರೇ ತಮ್ಮ ದೆಹಲಿಯ ಅಧ್ಯಾಪಕವೃತ್ತಿಯ ಬಗ್ಗೆ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ: "ನಾನು ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಕಳೆದ ಹತ್ತು ವರ್ಷಗಳು ನನ್ನ ಸೇವಾಕಾಲದ ಅತ್ಯುತ್ತಮ ಭಾಗವೆಂದು ಭಾವಿಸಿದ್ದೇನೆ. ಅಲ್ಲಿ ನಾನು ಅನುಭವಿಸಿದ ಮೇಲಧಿಕಾರಿಗಳ ಗೌರವ ಮರ್ಯಾದೆ, ಸಹೋದ್ಯೋಗಿಗಳ ಮೈತ್ರಿ ವಿಶ್ವಾಸ, ಶಿಷ್ಯವಾತ್ಸಲ್ಯಾಭಿಮಾನ, ಹೊರಗಡೆ ಪಡೆದ ಪ್ರತಿಷ್ಠೆ ಇವನ್ನು ನೆನದಾಗಲೆಲ್ಲ ನನ್ನ ಜೀವನ ಸಾರ್ಥಕವಾಯಿತೆಂದುಕೊಳ್ಳುತ್ತೇನೆ".

ನಿವೃತ್ತಿಯ ಬಳಿಕ (೧೯೬೯) ದೆಹಲಿಯಲ್ಲೇ ಇದ್ದು ತಮ್ಮ ಗ್ರೀಕ್ ಭಾಷಾ ವ್ಯಾಸಂಗವನ್ನು ಮುಂದುವರಿಸಬೇಕೆನ್ನುವುದು ಅವರ ಅಪೇಕ್ಷೆಯಾಗಿತ್ತು. ಆದರೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡನಿಘಂಟುಯೋಜನೆಯಲ್ಲಿ ಅದರ ಆರಂಭಕಾಲದಿಂದಲೂ ಸಂಪಾದಕಸಮಿತಿಯ ಸದಸ್ಯರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದ ಆಚಾರ್ಯರು ಈಗ ಮೈಸೂರಿಗೆ ತೆರಳಿ ಸಮಿತಿಯ ಅಧ್ಯಕ್ಷರೂ ಪ್ರಧಾನಸಂಪಾದಕರೂ ಆಗಿದ್ದ ಡಿ.ಎಲ್. ನರಸಿಂಹಾಚಾರ್ಯರಿಗೆ ಮುಂದಿನ ಕೆಲಸದಲ್ಲಿ ನೆರವಾಗಬೇಕೆಂದು ಯೋಚಿಸಿದರು. ಪರಸ್ಪರರಲ್ಲಿದ್ದ ಗಾಢವಾದ ಮೈತ್ರಿ ವಿಶ್ವಾಸಗಳೂ ಇದಕ್ಕೆ ಹೆಚ್ಚಿನ ಕಾರಣವಾಗಿತ್ತು. ಎರಡು ವರ್ಷಗಳ ಕಾಲ (೧೯೬೯ - ೭೧) ತಮ್ಮ ಶಕ್ತಿಮೀರಿ ಶ್ರದ್ಧೆ ಉತ್ಸಾಹಗಳಿಂದ ಅವರಿಗೆ ಸಹಾಯವಾದರು (ಈ ಇಬ್ಬರ ಮೈತ್ರಿ, ದುಡಿಮೆಯ ರೀತಿಗಳಿಗೆ ಕನ್ನಡ ನುಡಿಯ ಆಗಸ್ಟ್ ೧೯೭೧ರ ಸಂಚಿಕೆಯಲ್ಲಿ ಆಚಾರ್ಯರೇ ಬರೆದ ಒಂದು ಲೇಖನವುಂಟು). ಹೀಗೆ ಕೆಲಸ ಸಾಗುತ್ತಿರುವಾಗಲೇ, ಡಿ.ಎಲ್. ನರಸಿಂಹಾಚಾರ್ಯರು ಹಠಾತ್ತನೆ ತೀರಿಕೊಂಡರು (೭-೫-೧೯೭೧). ಇದು ರಾಘವಾಚಾರ್ಯರ ಮನಸ್ಸಿಗೆ ದೊಡ್ಡ ಆಘಾತವನ್ನೇ ಉಂಟುಮಾಡಿತು. ಆದರೆ ಕೆಲಸ ನಿಲ್ಲುವಂತಿರಲಿಲ್ಲ. ಈಗ ಜವಾಬ್ದಾರಿಯನ್ನು ತಾವೇ ಹೊರಬೇಕಾಯಿತು. ತಾವೇ ಸಂಪಾದಕ ಸಮಿತಿಯ ಅಧ್ಯಕ್ಷರೂ ಪ್ರಧಾನ

ಸಂಪಾದಕರೂ ಆಗಿ ಜವಾಬ್ದಾರಿ ವಹಿಸಿಕೊಂಡರು. ತಮ್ಮ ಕೆಲಸದಲ್ಲಿ ಹೆಚ್ಚು ಉತ್ಸಾಹದಿಂದ, ವೇಗದಿಂದ ಮುನ್ನಡೆದರು. ಆದರೆ ವ್ಯಾವಹಾರಿಕ ವಿಷಯಗಳಿಗೆ ಸಂಬಂಧಿಸಿದಂತೆ ಅವರಿಗೂ ಆಡಳಿತವರ್ಗದವರಿಗೂ ಅಹಿತವಾದ ವಾತಾವರಣವೇರ್ಪಟ್ಟು, ಅವರು ತಮ್ಮ ಎಲ್ಲ ಜವಾಬ್ದಾರಿಗಳಿಂದಲೂ ಬಿಡುಗಡೆಯನ್ನು ಪಡೆದುಕೊಂಡರು. ಇದಕ್ಕೆ ಕಾರಣವಾದ ಸಂದರ್ಭಗಳನ್ನು ಅವರು ತಮ್ಮ 'ನಂದಾನೆನಪು' ಸಂಕಲನದ ಆತ್ಮವೃತ್ತದಲ್ಲಿ ನಿರೂಪಿಸಿದ್ದಾರೆ (ಪು. ೪೨೯-೩೭).

ಮುಂದೆ ನಿವೃತ್ತಿಜೀವನವನ್ನು ಅನುಭವಿಸುತ್ತ, ಮಕ್ಕಳೊಂದಿಗೆ ದೆಹಲಿಯಲ್ಲಿರುವಾಗ್ಗೆ, ಸ್ವಲ್ಪ ಕಾಲದ ಅನಾರೋಗ್ಯದಿಂದಾಗಿ ១೭-೮-೧೯೭೭ ರಲ್ಲಿ ತೀರಿಕೊಂಡರು. ಇಲ್ಲಿಗೆ ಹಿರಿಯ ಧ್ಯೇಯಾದರ್ಶಗಳ ಒಂದು ಪ್ರಾಮಾಣಿಕವೂ ನಿಷ್ಠಾವಂತವೂ, ಧೈರ್ಯಶಾಲಿಯೂ, ಕ್ರಿಯಾಶಾಲಿಯೂ ಆದ ಬಹುಭಾಷಾ ವಿದ್ವಾಂಸರೊಬ್ಬರ ಬದುಕು ಕೊನೆಗೊಂಡಿತು; ಆದರೆ ಅವರ ಬದುಕು ಬೆಳೆಯುವವರಿಗೆ ಒಂದು ನಂದಾದೀಪ; ಅವರ ನೆನಪು ಒಂದು ನಂದಾನೆನಪು.

## ೩. ಸಂಶೋಧನಾತ್ಮಕ ಮತ್ತು ವಿಮರ್ಶಾತ್ಮಕ ಬಿಡಿಬರಹಗಳು

ಕ.ವೆಂ. ರಾಘವಾಚಾರ್ಯರು ಬರೆದು ಪ್ರಕಟಿಸಿದ ಬಿಡಿಬರಹಗಳು ಸಂಖ್ಯೆಯಲ್ಲಿ ಹೆಚ್ಚಾಗಿಲ್ಲ. ಸ್ವತಂತ್ರವಾದವು ಸುಮಾರು ೩೦, ಅನುವಾದಿತ ಹಾಗೂ ಸಂಪಾದಿತ ಗ್ರಂಥಗಳಿಗೆ ಬರೆದ ಪೀಠಿಕೆಗಳು ಸುಮಾರು ೧೦, ಇಂಗ್ಲಿಷ್ ಭಾಷೆಯಲ್ಲಿರುವ ಬರಹಗಳೂ ಭಾಷಣಗಳು ೧೦. ಎಲ್ಲವೂ ಸೇರಿ ೫೦ರ ಮೊತ್ತವನ್ನು ಬಹುಶಃ ಮೀರುವುದಿಲ್ಲ. ಹೆಚ್ಚಿನ ಬರಹಗಳೂ ಭಾಷಣಗಳೂ ಸಾಂದರ್ಭಿಕ ಒತ್ತಡಗಳಿಂದ ಸಿದ್ಧವಾದವು ಎನ್ನಬಹುದು. ಇವೆಲ್ಲ ಬಲುಮಟ್ಟಿಗೆ 'ನಂದಾನೆನಪು' ಎಂಬ ಸಂಪುಟದಲ್ಲಿ (ಮೈಸೂರು, ೧೯೭೩) ಸೇರಿದ್ದು, ಒಂದೇ ಕಡೆ ನೋಡಲು ದೊರೆಯುತ್ತವೆ. ಭಾಷಾವಿಷಯಕವಾದ ಸಾಮಾನ್ಯ ಮತ್ತು ವಿಶಿಷ್ಟ ಲೇಖನಗಳು, 'ಯಶೋಧರಚರಿತೆ'ಯ ಪೀಠಿಕೆ, ಗ್ರೀಕ್ ನಾಟಕಾನುವಾದಗಳಿಗೆ ಬರೆದ ಪೀಠಿಕೆಗಳು ಮತ್ತು ಸಹಾಯಕಸಾಹಿತ್ಯ ಇವು ಆಚಾರ್ಯರ ಬಿಡಿಬರಹಗಳ ಮುಖ್ಯಭಾಗ, ಅವರ ಬರಹದ ಮೊತ್ತ ಕಡಮೆಯೇ ಇರಬಹುದು; ಆದರೆ ಒಂದೊಂದರಲ್ಲಿಯೂ ಅವರ ಪರಿಶ್ರಮ ಶ್ರದ್ಧೆ ಪರಿಷ್ಕಾರಗುಣ ಎದ್ದು ತೋರುತ್ತವೆ; ದಟ್ಟವಾದ ವಿಚಾರಾಂಶಗಳು ವಿಪುಲವಾಗಿ ಸೇರಿರುತ್ತವೆ. ಬರೆವಣಿಗೆಯನ್ನು ಎಂದೂ ಅವರು ನಿತ್ಯನಿರಂತರ ವೃತ್ತಿಯೆಂಬಂತೆ ಭಾವಿಸಲಿಲ್ಲ; ಅದು ಎಂದೂ ಅವರಿಗೆ ಒಂದು ಚಟವಾಗಲಿಲ್ಲ. ಈಚಿನ ವರ್ಷಗಳಲ್ಲಿ ಅವರು ಹಟಹಿಡಿದು ಕುಳಿತು ಕೆಲಸಮಾಡಿದ್ದು ಎಂದರೆ, ಕೆಲವು ಗ್ರೀಕ್ ನಾಟಕಗಳನ್ನು ಕನ್ನಡಿಸುವುದು. ಅವರು ಬರೆದುದಷ್ಟೂ ಗಟ್ಟಿ ಬರಹ, ಗಟ್ಟಿ ವರಹ, ಗದ್ಯವೋ ಪದ್ಯವೋ ಒಂದೊಂದೂ ಹೇರಾಳ ದೇಸಿಯನ್ನು ಉತ್ತು ಬಿತ್ತಿದ ಸಾಲುಸಾಲು ಬದುವಿನ ಹೊಲಗದ್ದೆ, ಕನ್ನಡತನದ ಅಬ್ಬರವಿಲ್ಲದ ಹಬ್ಬ.

**ಭಾಷಾವಿಷಯಕ ಲೇಖನಗಳು :**

ಈ ಸಂಬಂಧವಾಗಿ ಆಚಾರ್ಯರು ಕನ್ನಡದಲ್ಲಿ ಬರೆದ ಬರಹಗಳು ನಮ್ಮ ಭಾಷೆಯಲ್ಲಿ ನಡೆದ ಮೊದಮೊದಲ ಪ್ರಯತ್ನಗಳಲ್ಲಿ ಸೇರತಕ್ಕವು. ಆಗ್ಗೆ ಅವರ ಅಭ್ಯಾಸಕಾಲದಲ್ಲಿ ಪ್ರಚಲಿತವಿದ್ದ ತೌಲನಿಕ ಮತ್ತು ಚಾರಿತ್ರಿಕ ಭಾಷಾವಿಜ್ಞಾನತತ್ವಗಳ ಅನ್ವಯ ಬರೆದವು. ಈ ಶಾಸ್ತ್ರಭಾಗವನ್ನು ಅವರು ಎಂದಿನಿಂದಲೂ ಮೈಸೂರು ಮಹಾರಾಜ ಕಾಲೇಜು ವಿದ್ಯಾರ್ಥಿಗಳಿಗೆ, ವಿಶೇಷವಾಗಿ ಸ್ನಾತಕೋತ್ತರಪದವಿಯ ಕನ್ನಡ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದುದರಿಂದ, ಇದೇ ಅವರ ಆಸಕ್ತಿಯ ವಿಶಿಷ್ಟ ಕ್ಷೇತ್ರವಾಗಿತ್ತು ಎಂದು ಹೇಳಬಹುದಾಗಿದೆ; ಆದರೆ ಅವರ ಮನಸ್ಸನ್ನು ವಿಶೇಷವಾಗಿ ಆವರಿಸಿದ್ದು, ಆಳಿದ್ದು ಗ್ರೀಕ್‌ಭಾಷೆಯ ನಾಟಕಗಳ ಅಭ್ಯಾಸ ಮತ್ತು ಆ ನಾಟಕಗಳ ಭಾಷಾಂತರ ಎನ್ನುವುದನ್ನೂ ನಾವು ಮರೆಯುವಂತಿಲ್ಲ.

ಕೆಲವು ಬರಹಗಳ ವಿಚಾರವನ್ನಿಟ್ಟು ನೋಡೋಣ : 'ನುಡಿನಂಟು' ಎಂಬುದರಲ್ಲಿ ಭಾಷೆಗೂ ಮಾನವನ ಇತರ ವ್ಯಾಪಾರಗಳಿಗೂ ಇರುವ ಸಂಬಂಧವನ್ನೂ ಭಾಷೆಯಿಂದಾಗಿ ವ್ಯಕ್ತಿವ್ಯಕ್ತಿಗೂ ಏರ್ಪಡುವ ಸಂಬಂಧವನ್ನೂ ಮಾತೃಭಾಷೆಯ ಬಗೆಗಿನ ಭಾವನಾತ್ಮಕ ಸಂಬಂಧದ ವಿಮರ್ಶೆಯನ್ನೂ ಕೆಲಮಟ್ಟಿಗೆ ಕುರಿತಿದೆ. 'ಭಾಷಾಶುದ್ಧಿ' ಎಂಬುದರಲ್ಲಿ ಭಾಷಾಶಾಸ್ತ್ರ, ವ್ಯುತ್ಪತ್ತಿಶಾಸ್ತ್ರ, ವ್ಯಾಕರಣ ಇವೇ ಮೊದಲಾದವುಗಳ ದೃಷ್ಟಿಯಿಂದ ಭಾಷಾಶುದ್ಧಿಯ ವಿಷಯವಾಗಿ ಏಳಬಹುದಾದ ಸಮಸ್ಯೆಗಳಲ್ಲಿ ಕೆಲವನ್ನು ಶಬ್ದಕೋಶ ಮತ್ತು ವಾಕ್ಯರಚನೆಗಳ ಉದಾಹರಣೆಗಳ ಮೂಲಕ ವಿಮರ್ಶಿಸಿದೆ. ಇನ್ನೊಂದು ಬರಹ 'ನುಡಿಮೋಸ' ಎಂಬುದು. ಇಲ್ಲಿ ಕನ್ನಡದ ಬರವಣಿಗೆಯಲ್ಲಿ ಕನ್ನಡ ಮಾತು ವಾಕ್ಯಗಳಿಗೆ ಮೇಲೆ ಸಲ್ಲಬೇಕು, ಸಂಸ್ಕೃತ ಇಂಗ್ಲಿಷ್ ಉದ್ಧತಿಗಳನ್ನು ತುಂಬುವ ಪಾಂಡಿತ್ಯದ ವಿಜೃಂಭಣೆಗೆ ಹೋಗಬಾರದು ಎಂದು ಸಲಹೆ ಮಾಡಿರುವುದು ಸೂಕ್ತವಾಗಿಯೇ ಇದೆ. ಬೇರೊಂದು ಪ್ರಬಂಧದ ವಿಷಯ ಆ.ನ. ಶ್ರೀನಿವಾಸಯ್ಯಂಗಾರರ ಬರಹಕ್ಕೆ (ತಮಿಳ್ ಗೀತೆಗಳು) ವ್ಯಕ್ತವಾದ ಪ್ರತಿಕ್ರಿಯೆ. ಅವರ ಪ್ರಬಂಧದ ಕೊನೆಗೆ ಕಾಣಿಸಿರುವ ತಮಿಳು ಪದಗಳ ರೂಪ ಮಾರ್ಪಾಡುಗಳ ನ್ಯೂನಾತಿರೇಕಗಳನ್ನು ಇಲ್ಲಿ ತೋರಿಸಿದೆ. ಆಚಾರ್ಯರ ತಮಿಳು ಭಾಷಾಜ್ಞಾನದ ನಿಖರತೆ ಅವರ ಉಭಯಭಾಷಾಪಾಂಡಿತ್ಯವನ್ನು ತೆರೆದು ತೋರುತ್ತದೆ. ಈ ಪಾಂಡಿತ್ಯದ ಸ್ವರೂಪವನ್ನು ಕೆಲವು ಕನ್ನಡ ಮಾತುಗಳ ಅರ್ಥನಿರ್ಣಯದಲ್ಲಿ ತಮಿಳಿನ ನೆರವು' ಎಂಬ ಪ್ರಬಂಧದಿಂದಲೂ ನಾವು ತಿಳಿಯಬಹುದಾಗಿದೆ. ಪ್ರಾಚೀನ ಕನ್ನಡ ಕೃತಿಗಳ ನಾಡೆ, ಸೆರಪು, ಪಟೇಲ್, ಮಗುಟ್, ಎಸಗು, ಸೊಂಪುಲೆ, ಇಳಿದು, ಇರ್ಪು, ತಿರ್ದು, ಇಳಿಲೆ ಇಂಥ ಕೆಲವು ಶಬ್ದಗಳ ಸರಿಯಾದ ಅರ್ಥಗಳನ್ನು ತಮಿಳು ಭಾಷೆಯ ಸಹಾಯದಿಂದ ನಿರ್ಧರಿಸಬಹುದಾಗಿದೆ ಎಂದು ಅವರು ಸಾಧಾರವಾಗಿ ತೋರಿಸಿದ್ದಾರೆ. ಈ ಕೃತಿಗಳಲ್ಲಿ ಈ ಶಬ್ದಗಳು ಅಪಾರ್ಥದಿಂದಲೋ ಅರ್ಥಸಂದಿಗ್ಧತೆಯಿಂದಲೋ ಕೂಡಿರುವುದನ್ನು ಮೊದಲು ಗುರುತಿಸಿದ್ದು ಶ್ಲಾಘ್ಯವಾದ ವಿಚಾರ; ಬಹುಶಃ ಪರಿಷತ್ತಿನ ಕನ್ನಡ ನಿಘಂಟುವಿನ ಸಿದ್ಧತೆಯ ವೇಳೆಯೂ ಅದನ್ನು ಗುರುತಿಸಿರಬಹುದು. ಅವರ ಸಲಹೆಗಳು ತೃಪ್ತಿಕರವಾಗಿರುವುದು ಕೂಡ ಮೆಚ್ಚಬೇಕಾದ್ದು.

ಬಿ.ಎಂ. ಶ್ರೀಕಂಠಯ್ಯನವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಅವಧಿಯಲ್ಲಿ (೧೯೩೮-೪೨) ಕನ್ನಡ ನುಡಿ ಪತ್ರಿಕೆಯಲ್ಲಿ ಕೆಲವು ಬರಹಗಳನ್ನು ಆಗಿಂದಾಗ್ಗೆ ಬರೆಯುತ್ತಿದ್ದರು. ಕನ್ನಡ ಮಾತುಗಳ ಬರುವಳಿ' ಎಂಬ ಶೀರ್ಷಿಕೆಯ ಅಡಿಯಲ್ಲಿ 'ಕನ್ನಡದಲ್ಲಿ ಷಕಾರ', 'ಹಾಗೆ ಹೀಗೆ ಹೇಗೆ', 'ತದ್ಭವಗಳು', 'ಕೆಲವು ಕನ್ನಡ ಮಾತುಗಳ ಅರ್ಥನಿರ್ಣಯದಲ್ಲಿ ತಮಿಳಿನ ನೆರವು' ಎಂಬವು ಹಾಗೆ ಬರೆದ ಲೇಖನಗಳು. ಇವನ್ನು ಅವರು 'ಮಾತಿನ ಮರುಳ' ಎಂಬ ಮರೆ ಹೆಸರಿನಲ್ಲಿ ಬರೆದಿದ್ದಾರೆ. ಇವುಗಳಲ್ಲಿ ಮೊದಲ ಮೂರು ವರ್ಣನಾತ್ಮಕ ಭಾಷಾ ವಿಶ್ಲೇಷಣೆಯಲ್ಲಿರುವುದನ್ನು ನಾವು ಗುರುತಿಸಬಹುದು. ಅಲ್ಲದೆ ತಮ್ಮ ತಮಿಳು ತೆಲುಗು ಭಾಷೆಗಳ ತಿಳಿವಳಿಕೆಯನ್ನು ಅವರು ಚೆನ್ನಾಗಿ ಬಳಸಿಕೊಳ್ಳುತ್ತಾರೆ. ಅವರ ವಿವೇಚನೆಗಳು ತೃಪ್ತಿಕರವಾಗಿ ತೋರುತ್ತವೆ.

೧೯೫೬ರಲ್ಲಿ ಸಾಧ್ಯವಾದ ಕರ್ನಾಟಕ ಏಕೀಕರಣದ ಸ್ಮರಣೆಗೆಂದು ಬರೆದಿರುವ ಲೇಖನ 'ಕನ್ನಡ ನುಡಿ' ಎಂಬುದರಲ್ಲಿ ಕನ್ನಡ ಭಾಷೆ-ಭಾಷಿಕರು, ಸ್ವಂತಿಕೆ-ಸ್ವೀಕೃತಿ, ಪಾರಿಭಾಷಿಕತೆ-ಪ್ರಾದೇಶಿಕತೆ ಈ ಕೆಲವು ಸಂಗತಿಗಳನ್ನು ಒಟ್ಟುನೋಟದಲ್ಲಿ ವಿಶದಪಡಿಸಿರುವುದು ಇಲ್ಲಿ ಕಾಣುತ್ತದೆ. ಆದರೆ ಹೆಚ್ಚು ಗಮನಾರ್ಹವಾದ ಲೇಖನವೆಂದರೆ, 'ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಭಾಷಾಸಮಸ್ಯೆ' ಎಂಬುದು. ಇಲ್ಲಿ ಕುರಿತಿರುವ ಸಮಸ್ಯೆ ಇನ್ನೂ ಪರಿಹಾರ ಕಂಡಿಲ್ಲದ ಸಮಸ್ಯೆಯೇ ಆಗಿದೆ. ನಮ್ಮ ದೇಶದ ಭಾಷಾವೈವಿಧ್ಯದ ದೃಷ್ಟಿಯಿಂದ ಸಂಸ್ಕೃತ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಸ್ಥಾನಮಾನಗಳನ್ನು ಮೊದಲು ಚರ್ಚಿಸಿ, ಬಳಿಕ ವಿಶ್ವವಿದ್ಯಾನಿಲಯಗಳಲ್ಲಿ ಭಾಷೆಗಳ ಸ್ಥಾನ ಏನಿರಬೇಕೆಂದು ತುಂಬ ವಿಶದವಾಗಿ ಚರ್ಚಿಸಿ, ತಮ್ಮ ನಿಲವನ್ನೂ ಸ್ಪಷ್ಟಪಡಿಸಿದ್ದಾರೆ. ಪ್ರಾಂತಭಾಷೆ ಪ್ರಥಮಭಾಷೆಯಾಗಿ, ಇಂಟರ್ ಮತ್ತು ಡಿಗ್ರಿ ತರಗತಿಗಳಲ್ಲಿ ಕಡ್ಡಾಯವಾಗಿ ವ್ಯಾಸಂಗ ಮಾಡುವುದಾಗಬೇಕು, ಇಂಗ್ಲಿಷ್ ಭಾಷೆಯನ್ನು ದ್ವಿತೀಯಭಾಷೆಯಾಗಿ ಕಲಿಯಬೇಕು ಎಂದು ಮೊದಲು ಸ್ಪಷ್ಟವಾಗಿ ತಮ್ಮ ನಿಲವನ್ನು ಸ್ಥಾಪಿಸುತ್ತಾರೆ; ಬಳಿಕ ಭಾಷೆ ಸಾಹಿತ್ಯಗಳ ವಿಶೇಷ ಅಧ್ಯಯನಕ್ಕಾಗಿ ಆಧುನಿಕ ಭಾರತೀಯ ಭಾಷೆಗಳು, ವಿದೇಶದ ಭಾಷೆಗಳು ಹಾಗೂ ಪ್ರಾಚೀನ ಪ್ರೌಢ ಸಾಹಿತ್ಯಭಾಷೆಗಳು ಅವಕಾಶ ಪಡೆಯಬಹುದಾಗಿದೆ ಎಂದು ಅವರು ಸಲಹೆಮಾಡಿದ್ದಾರೆ. ಇದು ಸೂಕ್ತವಾಗಿಯೇ ಇದೆ.

ಈ ಎಲ್ಲ ಭಾಷಾಸಂಬಂಧವಾದ ಪ್ರಬಂಧಗಳಲ್ಲಿ ಬಹಳ ದೊಡ್ಡ ಸಂಶೋಧನ ಮೌಲ್ಯ ಕಾಣದಿರಬಹುದು; ಆದರೆ ಕನ್ನಡತನದ ಹಿರಿಮೆ ಗರಿಮೆಗಳನ್ನು ಮುನ್ನಡೆಗೆ ತರುವ, ಹೇರಾಳ ದೇಸಿಯ ಹೆಗ್ಗಳಿಕೆಯನ್ನು ಮೆರೆಯಿಸುವ ಉತ್ಕಟತೆ ಮೈದುಂಬಿ ಲಾಸ್ಯವಾಡಿದೆ; ಬೋಧಕ ಪ್ರಸಾರಕ ದೃಷ್ಟಿ ಉದ್ದಕ್ಕೆ ಕೆಲಸಮಾಡಿದೆ. ಆದರೆ ಎಲ್ಲಿಯೂ ಭಾವಾವೇಶ ಅಂಧಾಭಿಮಾನಗಳು ಕಾಣಿಸುವುದಿಲ್ಲ. ವಿಷಯ ನಿರೂಪಣೆಯಲ್ಲಿ ಸ್ಪಷ್ಟತೆ ನಿರ್ದುಷ್ಟತೆ ನಿರರ್ಗಳತೆಗಳೂ ವಿಷಯಾಂತರವಾಗದ ಹಾಗೆ ವಸ್ತುವನ್ನು ನಿರ್ವಹಿಸುವ ಒಂದು ಕೌಶಲವೂ ಶೈಲಿಯಲ್ಲಿ ಹೊಸ ಹೊಸ ಮಾತುಗಳನ್ನೂ ಮಾತಿನ ಕಟ್ಟುಗಳನ್ನೂ ಅನಾಯಾಸವಾಗಿ ಎಂಬಂತೆ ನಿರ್ಮಿಸುವ ಜಾಣ್ಮೆಯೂ ದೇಸಿಯ ಬಳಕೆಗೆ ಮೊದಲ ಮನ್ನಣೆಯೂ ಉದ್ದಕ್ಕೆ ಕಂಡಿವೆ. ಇತರ ಬರಹಗಳಲ್ಲೂ ಇವೇ ಸಾಮಾನ್ಯಲಕ್ಷಣಗಳಾಗಿವೆ.

ಭಾಷಾಸಂಬಂಧವಾದ ಇತರ ಕೆಲವು ಬರಹಗಳನ್ನು ಕೂಡ ಇಲ್ಲಿಯೇ ಪ್ರಸ್ತಾವಿಸಬಹುದಾಗಿದೆ. ಒಂದು ಬರಹ ಆರ್.ಪಿ. ಸೇತುಪಿಳ್ಳೈ ಅವರು ಬರೆದ ರೆವೆರೆಂಡ್ ರಾಬರ್ಟ್ ಕಾಲ್‌ವೆಲ್ ಅವರ ಜೀವನಚರಿತ್ರೆಯ ವಿಮರ್ಶೆಯಾಗಿದ್ದು, ಈ ವಿಮರ್ಶೆಯನ್ನು ಆಚಾರ್ಯರು ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಗಾಗಿ ಮಾಡಿದ್ದಾರೆ. ಇಲ್ಲಿ ಕಾಲ್‌ವೆಲ್ ಕ್ರೈಸ್ತಲೋಕಕ್ಕೆ ಸಲ್ಲಿಸಿದ ಸೇವೆಗೆ ಹೆಚ್ಚಿನ ಸ್ಥಾನ ದೊರೆತಿರುವುದು ಸರಿಯಲ್ಲವೆಂದೂ ಅವರ ಭಾಷಾಕ್ಷೇತ್ರದ ಸೇವೆಯನ್ನು ಹೆಚ್ಚಾಗಿ ವಿವರಿಸಬೇಕಾಗಿತೆಂದೂ ಭಾವಿಸಿರುವುದು ನ್ಯಾಯವಾಗಿಯೇ ಇದೆ..

ಮುಂದಿನ ಎರಡು ಬರಹಗಳು ದಿಟವಾಗಿ ಕುತೂಹಲಕರವಾದವು : ೧. ಕೆಲವು ಗಾದೆಗಳು, ೨.ಪುಳ್ಳಂಗಾಯುಂಡೆ. ಮೊದಲನೆಯದರಲ್ಲಿ ನಾಲ್ಕು ಪ್ರಚಲಿತವಾದ ಕನ್ನಡ ಗಾದೆಗಳನ್ನು ಎತ್ತಿಕೊಂಡು, ಅವುಗಳ ಮೂಲ ಆಶಯವನ್ನೂ ನಿಜರೂಪವನ್ನೂ ಹೃದಯಂಗಮವಾಗಿ ವಿವರಿಸಿದ್ದಾರೆ. ಪಂಜೆ ಮಂಗೇಶರಾಯರಿಗೆ ಇಂಥ ಶಬ್ದಾರ್ಥವಿಚಾರಗಳಲ್ಲಿ ತುಂಬ ಆಸಕ್ತಿಯಿದ್ದುದರಿಂದ, ಅವರ ನೆನಪಿನಲ್ಲಿ ಪ್ರಕಟವಾದ ಗ್ರಂಥಕ್ಕೆ (೧೯೫೨) ಈ ನುಡಿಕಾಣಿಕೆಯನ್ನು ಸಲ್ಲಿಸಿದ್ದು ಸೂಕ್ತವಾಗಿಯೇ ಇದೆ. ಇನ್ನು ಎರಡನೆಯ ಬರಹ ಒಂದು ಬಗೆಯ ಸಿಹಿತಿಂಡಿಗೆ ಸಂಬಂಧಿಸಿದ್ದಾಗಿದ್ದು, ತಮ್ಮ ತಮಿಳು ಭಾಷೆಯ ತಿಳಿವಳಿಕೆಯಿಂದ ಈ ಶಬ್ದದ ರಚನೆಯನ್ನು ಅವರು ತೃಪ್ತಿಕರವಾಗಿ ವಿವರಿಸಿದ್ದಾರೆ. ಈ ಬರಹದ ಆರಂಭದಲ್ಲಿ ಕನ್ನಡದಲ್ಲಿ ಬಳಕೆಯಲ್ಲಿರುವ ಕೆಲವು ರೂಢನಾಮ ಅಂಕಿತನಾಮಗಳ ಔಚಿತ್ಯವಿಚಾರವನ್ನು ಚರ್ಚಿಸಿದ್ದಾರೆ. ಈ ಚರ್ಚೆಯ ಭೂಮಿಕೆ ಈ ಬರಹಕ್ಕೆ ಅನಿವಾರ್ಯವಾಗಿ ಏನೂ ಇರಲಿಲ್ಲ. ಆದರೆ ಇನ್ನೊಂದು ತಮಿಳು ಹೆಸರಿನ ಭಕ್ಷ್ಯ ತೇಂಗೊಳಲು ಎಂಬುದರ ವಿಚಾರ ಇಲ್ಲಿ ಬಂದಿರುವುದೇನೋ ಸರಿ. ಇಂಥ ವಿಷಯಗಳ ಆಯ್ಕೆ ನಿರ್ವಹಣೆಗಳಿಗೆ ಆಚಾರ್ಯರಿಗಿಂತ ಹೆಚ್ಚು ಸಮರ್ಥರನ್ನು ತರುವುದು ಕಷ್ಟವೇ.

ಈಯೆಲ್ಲ ಲೇಖನಗಳಲ್ಲಿಯೂ ಭಾಷಾಶುದ್ಧಿಯ ಕಳಕಳಿ, ಶಬ್ದಾರ್ಥಚಿಂತನ, ದೇಸಿಯ ಮೇಲ್ಮೆಗೆ ಪಟ್ಟ ಕಟ್ಟುವುದು ಚಿರಂತನೋತ್ಸಾಹದ ವಿದ್ಯಮಾನಗಳಾಗಿ ಮೈದೋರುತ್ತವೆ. ತಮಿಳು ಭಾಷೆ ಸಾಹಿತ್ಯದ ದೇಸಿಗುಣವನ್ನು ಕನ್ನಡದಲ್ಲಿಯೂ ಕಂಡು, ಕಾಣಿಸಿ ಹಿಗ್ಗುವ ಪರಿ ಇದು.

## ಸಾಹಿತ್ಯವಿಷಯಕ ಲೇಖನಗಳು :

ಆಚಾರ್ಯರಿಗೆ 'ವಾಲ್ಮೀಕಿರಾಮಾಯಣ' ಪೂಜ್ಯವೂ ಪ್ರಿಯವೂ ಆದ ಕೃತಿ. ಅದು ಅವರಿಗೆ ಪಾರಾಯಣದ ಪುಸ್ತಕ ಕೂಡ. ಅದನ್ನು ಆಧರಿಸಿದ ಕೆಲವು ಲೇಖನಗಳೆಂದರೆ: ೧. ರಾಮಾಯಣದಲ್ಲಿ ರಾಜ್ಯಶುಲ್ಕ ೨. ಕುಂಭಕರ್ಣನ ಕರುಳು. ರಾಮಾಯಣದ ಪಾತ್ರಗಳೂ ಪ್ರಸಂಗಗಳೂ ಅವರ ಬದುಕಿನ ಉದ್ದಕ್ಕೆ ಅವರನ್ನು ಆವರಿಸಿ, ಅವರ ಮೇಲೆ ಪ್ರಭಾವ ಬೀರಿ, ಅವರ ಬದುಕಿನ ಭಾಗಗಳೇ ಆಗಿರುವುದರಿಂದ ಈ ಸಂಬಂಧವಾದ ಅವರ ಬರಹಗಳಲ್ಲಿ ಒಂದು ಆದ್ರತೆ, ಆವೇಶ ಮೈದೋರಿ ನಿಂತಿದೆ. 'ರಾಮಾಯಣದಲ್ಲಿ ರಾಜ್ಯಶುಲ್ಕ' ಎಂಬ ಮೊದಲ ಬರಹದಲ್ಲಿ ದಶರಥರಾಜನು ಕೈಕೆಯನ್ನು ವರಿಸುವಾಗ ಅವಳ ತಂದೆಗೆ ವಾಗ್ದಾನಮಾಡಿದ ರಾಜ್ಯಶುಲ್ಕದ ಸಮಸ್ಯೆಯ ವಿಮರ್ಶೆ ವಿಷಯವಾಗಿ ಉಳ್ಳಂಥದು. ಇದೊಂದು ಧರ್ಮಸೂಕ್ಷ್ಮದ ಪ್ರಶ್ನೆ. ಈ ಪ್ರಶ್ನೆಯ ಎಲ್ಲ

ಸೂಕ್ಷ್ಮತೆಗಳನ್ನೂ ಎಳೆಯೆಳೆಯಾಗಿ ಬಿಡಿಸಿ ಆಚಾರ್ಯರು ವಾಚಕರ ಎದುರಿನಲ್ಲಿಟ್ಟಿದ್ದಾರೆ. ಈ ಬರಹವನ್ನು ಓದುವವರು ಈ ಪ್ರಶ್ನೆಗೆ ಇಷ್ಟೊಂದು ಸಿಕ್ಕುಗಳಿವೆಯೇ ಎಂದು ತಿಳಿದಾಗ ಆಶ್ಚರ್ಯಪಡುತ್ತಾರೆ. ಆಚಾರ್ಯರ ಸಹೃದಯತೆ, ವಿಮರ್ಶ, ವಿಚಕ್ಷಣತೆ ಎರಡೂ ಇಲ್ಲಿ ಗರಿಗೆದರಿ, ಅವರೊಬ್ಬ ಶುಷ್ಕವೈಯಾಕರಣರಲ್ಲ, ಒಳ್ಳೆಯ ರಸಜ್ಞರು ಎಂಬುದನ್ನು ಮನವರಿಕೆಮಾಡಿಕೊಳ್ಳುವ ಅವಕಾಶ ಒದಗುತ್ತದೆ. ಎರಡನೆಯ ಬರಹದಲ್ಲಿ, ಕುಂಭಕರ್ಣನ ಮೃದುಹೃದಯ, ಸೋದರವಾತ್ಸಲ್ಯಗಳನ್ನು ಯುದ್ಧಸನ್ನಿವೇಶದ ವ್ಯಗ್ರತೆಯ ನಡುವೆಯೇ ಪ್ರಕ್ಷುಬ್ಧಸಾಗರದ ನಡುವೆ ಕಾಣುವ ಪ್ರಶಾಂತದೀಪದಂತೆ ನಾವು ಕಾಣಬಹುದು ಎಂದು ಆಚಾರ್ಯರು ನಮಗೆ ಮನದಟ್ಟುಮಾಡಿದ್ದಾರೆ. ಇಲ್ಲಿ ಮೂಲವನ್ನೂ ಅದರ ಕನ್ನಡ ತಾತ್ಪರವನ್ನೂ ಮಾತ್ರ ಕೊಟ್ಟಿದ್ದು, ಆರಂಭದಲ್ಲಿಯೇ "ಇದಕ್ಕೆ ವ್ಯಾಖ್ಯಾನ ಅನಾವಶ್ಯಕವಷ್ಟೇ ಅಲ್ಲ; ವ್ಯಾಖ್ಯಾನ ಬರೆಯಹೋಗುವುದು ತಿಳಿನೀರನ್ನು ಕಲಕಿದಂತೆ" ಎಂದು ಷರಾ ಬರೆದು ಉಳಿದೆಲ್ಲವನ್ನೂ ನಮ್ಮ ಕಲ್ಪನೆಗೆ ಬಿಟ್ಟಿದ್ದಾರೆ. ಆಚಾರ್ಯರು ವಾಲ್ಮೀಕಿ ರಾಮಾಯಣದಲ್ಲಿ ಹೇಗೆ ರಸಸ್ಥಾನಗಳನ್ನು ಗುರುತಿಸುತ್ತಿದ್ದರು ಎಂದು ಇದರಿಂದ ತಿಳಿಯಬಹುದಾಗಿದೆ.

ಪಂಪಭಾರತವೆಂಬ ಕನ್ನಡ ಚಂಪೂಕಾವ್ಯದ ಪರಿಚಯವಿರುವವರೆಲ್ಲರಿಗೂ ಅಲ್ಲಿಯ ಬಹುಚರ್ಚಿತವಾದ, ಸಂದಿಗ್ಧಾರ್ಥಕ್ಲೇಶದ "ನೆತ್ತಮನಾಡಿ ಭಾನುಮತಿ ಸೋಲ್ತೊಡೆ' ಎಂಬ ಪದ್ಯವೂ ಪರಿಚಿತವೇ ಇರುತ್ತದೆ. ಆಚಾರ್ಯರು "ನೆತ್ತಮನಾಡಿದರಾರು (ಉತ್ತರಕ್ಕೆ ತಮಿಳು ಭಾರತದ ನೆರವು)' ಎಂಬ ಶೀರ್ಷಿಕೆ ಕೊಟ್ಟು ತಾವು ಕೂಡ ಒಂದು ಲೇಖನವನ್ನು ಬರೆದಿದ್ದಾರೆ (೧೯೩೯). ಈ ವಿಷಯದಲ್ಲಿ ಆ ಮೊದಲೂ ಅದರ ಅನಂತರವೂ ಹುಟ್ಟಿ ಬಂದಿರುವ ಸಾಹಿತ್ಯವನ್ನೆಲ್ಲ ಒಗ್ಗೂಡಿಸಿದರೆ, ಅದು ೩೦೦-೪೦೦ ಪುಟಗಳ ಒಂದು ಪುಸ್ತಕವೇ ಆಗುತ್ತದೆ. ಈ ಪದ್ಯದ ಅರ್ಥ ವಿವರಣೆಯ ಪ್ರಯತ್ನ ಉಂಟುಮಾಡಿದ ಕೋಲಾಹಲವನ್ನು ಆಚಾರ್ಯರು ಆರಂಭದ ಮಾತುಗಳಲ್ಲಿ ಚೆನ್ನಾಗಿಯೇ ವಿವರಿಸಿದ್ದಾರೆ. ಅವರು ತಮ್ಮಮಟ್ಟಿಗೆ ಪದ್ಯಾರ್ಥದ ವಿಶದತೆಗೆ ಬಳಸಿದ್ದು ಉತ್ತರಕಾಲೀನವಾದ ವಿಲ್ಲಿ ಭಾರತವೆಂಬ (ವಿಲ್ಲಿ ಪುತ್ತೂರನೆಂಬವನ ಭಾರತ) ತಮಿಳುಕೃತಿಯನ್ನು, ಈ ಕೃತಿಯಲ್ಲಿ (ಕಾಲಃ ಸು. ೧೩೨೫) ಪಂಪನ ಸಂದಿಗ್ಧಾರ್ಥದ ಈ ಪದ್ಯಕ್ಕೆ ಸದೃಶವಾದ ಪದ್ಯವಿರುವುದನ್ನು ಅವರು ಗುರುತಿಸಿ, ಅದರ ಆಧಾರದ ಮೇಲೆ ನೆತ್ತವನ್ನು ಆಡುತ್ತಿದ್ದವರು ಭಾನುಮತಿ-ಕರ್ಣರೆಂದು ನಿರ್ಣಯಿಸಿದ್ದಾರೆ; ಅದಕ್ಕೆ ತಕ್ಕ ಹಾಗೆ ಅವರ ವಾದಸರಣಿಯೂ ಇದೆ. ಆಚಾರ್ಯರ ಬರಹವನ್ನು ಡಿ.ಎಲ್. ನರಸಿಂಹಾಚಾರ್ಯರು ತಮ್ಮ 'ಪಂಪಭಾರತದೀಪಿಕೆ'ಯಲ್ಲಿ ಗಮನಿಸಿದ್ದಾರೆ. ಸೇಡಿಯಾಪು ಕೃಷ್ಣಭಟ್ಟರಾದರೋ ಅನ್ಯಮೂಲದಿಂದ ಆಚಾರ್ಯರ ಅಭಿಪ್ರಾಯವನ್ನು ಗಮನಿಸಿ, ತಮಿಳು ಕವಿ ಪಂಪನ ಪದ್ಯವನ್ನು ತಪ್ಪಾಗಿ ಅರ್ಥಮಾಡಿಕೊಂಡಿರುವನೆಂದು ಭಾವಿಸಿ ಈ ಗ್ರಹಿಕೆಯನ್ನು ತಳ್ಳಿಹಾಕಿದ್ದಾರೆ. ಈ ಬಗ್ಗೆ ಈಚೆಗೆ ಹೆಚ್ಚಿನ ಚರ್ಚೆಗಳು ನಡೆದು, ನೆತ್ತವನ್ನು ಆಡಿದವರು ಭಾನುಮತಿ - ದುರ್ಯೋಧನರೆಂಬ ನಿರ್ಣಯಕ್ಕೆ ಬರಲಾಗಿದೆ. ಈ ನಿರ್ಣಯ ಪ್ರಬಲವಾದ ಬಾಹ್ಯಸಾಕ್ಷ್ಯಗಳ ಆಧಾರದ ಮೇಲೆ ಸಾಧ್ಯವಾಗಿರುವುದರಿಂದ ಅದು ಸೂಕ್ತವಾಗಿದೆ. - ರಾಘವಾಚಾರ್ಯರು ಹೀಗೆ ಅವಕಾಶ ಸಿಕ್ಕಾಗ ತಮ್ಮ ತಮಿಳು ಭಾಷಾಸಾಹಿತ್ಯಗಳ ಜ್ಞಾನವನ್ನು ಬಳಸಿಕೊಳ್ಳುತ್ತಾರೆ. ಈ ಸಂಗತಿಯನ್ನು ಸಮರ್ಥಿಸುವ ಇನ್ನೂ ಎರಡು ಲೇಖನಗಳಿವೆ. ಒಂದು, ರಾಮಾನುಜಾಚಾರ್ಯರನ್ನು ಕುರಿತ ಆಕಾಶವಾಣಿಭಾಷಣ; ಇನ್ನೊಂದು, ತಮಿಳು ಭಾಷೆಯ

ಪ್ರಾಚೀನ ಪಂಚಮಹಾಕಾವ್ಯಗಳಲ್ಲಿ ಒಂದಾದ `ಶಿಲಪ್ಪದಿಕಾರಂ' ಎಂಬ ಮಹಾಕಾವ್ಯದ ಪರಿಚಯವನ್ನು ಕುರಿತದ್ದು. ಇವುಗಳಲ್ಲಿ ಮೊದಲನೆಯದರಲ್ಲಿ ಶ್ರೀವೈಷ್ಣವಮಹಿಮಾಪುರುಷರಾದ ರಾಮಾನುಜಾಚಾರ್ಯರ ಬದುಕಿನ ಕೆಲವು ಮಾನವೀಯಸ್ಪರ್ಶದ ಪ್ರಸಂಗಗಳನ್ನು, ಮುಖ್ಯವಾಗಿ ಕಾಂಚೀಪೂರ್ಣ ಮತ್ತು ಧನುರ್ದಾಸರ ದೃಷ್ಟಾಂತಗಳ ಮೂಲಕವಾಗಿ, ಹೃದಯಂಗಮವಾಗಿ ನಿರೂಪಿಸಿದೆ. ಆ ನಿರೂಪಣೆ ರಾಘವಾಚಾರ್ಯರ ಬದುಕಿಗೆ ಇಷ್ಟವಾದ್ದು. ಸಂಪ್ರದಾಯದ ಕಟ್ಟುಪಾಡುಗಳನ್ನು ಸಡಿಲಿಸಿಕೊಂಡು, ಕರ್ಮಠತೆಯನ್ನು ದೂರವಿಟ್ಟು ಅವರು ಬದುಕಿದರೆಂಬುದನ್ನು ಅವರ ಸಮೀಪವರ್ತಿಗಳೆಲ್ಲರೂ ಬಲ್ಲರು. ಒಂದು ಮಾತಿನಲ್ಲಿ ಹೇಳಬಹುದಾದರೆ, ಅವರು ಜಾತಿಜಂಜಡವಿದೂರರು. ಇನ್ನು `ಶಿಲಪ್ಪದಿಕಾರ'ದ ವಿಚಾರ: ಈ ತಮಿಳುಕಾವ್ಯದ ಕರ್ತೃವಿಚಾರದೊಂದಿಗೆ ಕಾವ್ಯಪರಿಚಯವೂ ನಮಗೆ ಇಲ್ಲಿ ಆಗುತ್ತದೆ. ನಿರರ್ಗಳವಾಗಿ ಸಾಗುವ ಇಲ್ಲಿಯ ಕಥಾವಾಹಿನಿ ಮೂಲಕೃತಿಯ ಬಗೆಗೆ ವಾಚಕರಲ್ಲಿ ಆಸಕ್ತಿ ಎಬ್ಬಿಸುತ್ತದೆ.

ಕಥನಕ್ಕೆ ಎತ್ತಿಕೊಂಡ ವಿಷಯ ಯಾವುದೇ ಇರಲಿ, ಅದಕ್ಕೆ ಯಾವುದೇ ಮಿತಿ ಮೇರೆಗಳಿರಲಿ, ಹೇಳುವುದನ್ನು ಒಂದು ಚೌಕಟ್ಟಿನಲ್ಲಿ ಅಳವಡಿಸಿ, ಸೊಗಸುವಂತೆ ಚೊಕ್ಕವಾಗಿ ಹೇಳುವುದು ಆಚಾರ್ಯರಿಗೆ ಒಲಿದು ಬಂದ ಸಾಹಿತ್ಯಗುಣ. ಮಾತು ವಾಕ್ಯಗಳು ಚಿನ್ನದ ಸರಪಳಿಯ ಕೊಂಡಿಗಳಂತೆ ಹೆಣೆದುಕೊಂಡು ಧೀರ ಗಂಭೀರವಾಗಿ ಸಾಗುತ್ತವೆ. ಹಾಗಾಗಿಯೇ ಅವರು ಹೆಚ್ಚು ಬರೆಯಲೂ ಸಾಧ್ಯವಾಗದೆ ಇರಬಹುದು. ಅದಕ್ಕೆ ಬೇರೆ ಕಾರಣಗಳೂ ಇರಬಹುದು.

ಆಚಾರ್ಯರು ವ್ಯಕ್ತಿವಿಚಾರದ ಕೆಲವು ಪ್ರಬಂಧಗಳನ್ನು ಬರೆದಿದ್ದಾರೆ. ಇವು ವಿಶೇಷವಾಗಿ ಅವರ ಗುರುಗಳನ್ನೂ ಗುರುಸ್ಥಾನೀಯರನ್ನೂ ಕುರಿತವೇ ಆಗಿವೆ. ಈ ಲೇಖನಗಳ ಶ್ರೇಣಿಯಲ್ಲಿ ಅಗ್ರಸ್ಥಾನ ಸಂದಿರುವುದು ಅವರ ಪರಮಾಪ್ತಗುರುಗಳಾದ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರಿಗೆ. "ಶ್ರೀಯವರ ಜೀವನಪರಿಚಯ' ಎಂಬ ಒಂದು ಲೇಖನ (ಕನ್ನಡ ನುಡಿ ೮-೧೨-೧೯೪೬) ಶ್ರೀಯವರ ಮೃತಿಯ ತರುವಾಯ ಬರೆದುದಾಗಿದ್ದು, ಇದರಲ್ಲಿ ಅವರ ಜೀವನ ಸಾಧನೆಗಳನ್ನೆಲ್ಲ ಒಂದು ಒಟ್ಟುನೋಟದಲ್ಲಿ ಒಗ್ಗೂಡಿಸಿ ಕೊಟ್ಟಿದೆ. ಹೊರಗಿನವರಿಗೆ ಹೆಚ್ಚು ಪರಿಚಯವಿಲ್ಲದ, ಶ್ರೀಗಳು ಏರ್ಪಡಿಸಿದ, ದತ್ತಿಗಳ ವಿವರಗಳನ್ನು ಕೂಡ ತೇದಿಗಳು ಸಹಿತವಾಗಿ ಇಲ್ಲಿ ದಾಖಲಿಸಿರುವುದು ಗಮನಾರ್ಹ. ತಮ್ಮನ್ನು ಶ್ರೀಯವರ ಪರಮಾಪ್ತಶಿಷ್ಯನೆಂದು ಹೇಳಿಕೊಳ್ಳುವಲ್ಲಿ ಅವರಿಗೆ ಎಲ್ಲಿಲ್ಲದ ಹೆಮ್ಮೆ, ಸಂಭ್ರಮ. ಅವರು ಶ್ರೀಯವರ ಬಗೆಗೆ ಲೇಖನದ ಕೊನೆಗೆ ಬರೆದಿರುವ ಈ ವಾಕ್ಯಗಳಂತೂ ಸಮಾಧಿಶಿಲೆಯ ಸ್ಮೃತಿಲೇಖದ ವಾಕ್ಯಗಳೆಂದೇ ಹೇಳುವಂತಿವೆ: "ಕನ್ನಡವೆ ತಾಯಾಗಿ, ಕನ್ನಡವೆ ತವರಾಗಿ, ಕನ್ನಡವೆ ನನಸಾಗಿ, ಕನ್ನಡವೆ ಕರ್ಮವಾಗಿ, ಕನ್ನಡವೆ ಧರ್ಮವಾಗಿ ಬಾಳಿದ ಶ್ರೀಯವರು ಕನ್ನಡವೆ ಕನಸಾಗಿ, ಕನ್ನಡವೆ ಕಡೆನೆನಹಾಗಿ ಕಣ್ಮರೆಯಾದರು. ಅವರ ಮೈ ಮರೆಯಾಯಿತು, ನಿಜ. ಆದರೆ ಅವರ ಹೆಸರು ಹೊನ್ನಾಗಿ ಸಾವಿರ ಕಾಲ ಸಲ್ಲುತ್ತದೆ".

ಹೀಗೆ ತಾವು ನಂಬಿದ್ದ, ನಚ್ಚಿದ್ದ ಆಚಾರ್ಯ ಶ್ರೀಯವರ ಬಗೆಗೆ ಡಿ.ವಿ.ಜಿ. ಅವರು ಅಸಾಂದರ್ಭಿಕವಾಗಿ ಏನೋ ಸಲ್ಲದ ಮಾತು ಬರೆದರೆಂದು ಕೂಡಲೇ ಆಚಾರ್ಯರು ಆಕ್ಷೇಪಿಸಿ, 'ಶ್ರೀಕಂಠಸಮರ್ಥನೆ' ಎಂಬ ಒಂದು ಬರಹವನ್ನು ಬರೆದು, ಹೆಚ್ಚು ಜನರ ಗಮನಕ್ಕೆ ಬರಲೆಂದು ದಿನಪತ್ರಿಕೆಯೊಂದರಲ್ಲಿ ಪ್ರಕಟಿಸಿದರು. ಡಿ.ವಿ.ಜಿ. ಅವರಂಥ ಹಿರಿಯರ ವಿಷಯದಲ್ಲಿ ತೋರಿಸಬೇಕಾದ ಗೌರವವನ್ನು ತೋರಿಸಿಯೇ, ತಮ್ಮ ಪ್ರತಿಕ್ರಿಯೆಯನ್ನು ದಿಟ್ಟವಾಗಿ ಪ್ರಕಟಿಸಿದ್ದು, ಆ ಕಾಲಕ್ಕೆ ಒಂದು ಅಪರೂಪದ ವಿದ್ಯಮಾನವೇ. ತಮ್ಮ ಸಮರ್ಥನೆಗೆ ಅವರು ಕೊಡುವ ಕಾರಣಗಳನ್ನು ನಾವು ಮೆಚ್ಚದಿರುವುದು ಸಾಧ್ಯವಿಲ್ಲ. ಶ್ರೀಯವರ ಬಗೆಗೆ ಆತ್ಮೀಯವಾದ, ಇನ್ನೆಲ್ಲೂ ದಾಖಲಾಗಿರದ, ಅನೇಕ ಸಂಗತಿಗಳನ್ನು ತಮ್ಮ ಸ್ಮೃತಿಚಿತ್ರಮಾಲಿಕೆಯಾಗಿರುವ ನಂದಾನೆನಪು' ವಿನಲ್ಲಿ ಕೂಡ ತುಂಬಿ ತುಂಬಿ ಕೊಟ್ಟಿದ್ದಾರೆ. ಇವನ್ನು ಕೂಡಿಸಿಕೊಳ್ಳದೆ ಶ್ರೀಯವರ ವಿಸ್ತೃತ ಜೀವನಚರಿತ್ರೆಯನ್ನು ಬರೆಯುವುದು ಯಾರಿಗೇ ಆಗಲಿ ಸಾಧ್ಯವಾಗದು. ಈ ಸಂಗತಿಗಳು ಬರಿಯ ವೈಯಕ್ತಿಕ ಸ್ವರೂಪದ್ದಲ್ಲ, ಕನ್ನಡ ಕಟ್ಟುವ ಕೆಲಸದಲ್ಲಿ ಶ್ರೀಯವರು ಕೈಕೊಂಡ ಸಾಹಸಗಳ ದೃಷ್ಟಿಯಿಂದಲೂ ಉಪಯುಕ್ತವಾದವಾಗಿವೆ.

ರಾಘವಾಚಾರ್ಯರ ಇನ್ನೊಬ್ಬ ಗುರುಗಳು ಟಿ.ಎಸ್. ವೆಂಕಣ್ಣಯ್ಯನವರ ಬಗೆಗೂ ಒಂದು ಲೇಖನವುಂಟು. ಅದು ಅವರ ಸ್ಮರಣಗ್ರಂಥಕ್ಕಾಗಿ (೧೯೭೦) ಬರೆದುದು. "ಥಳುಕಿಲ್ಲದ ತಳುಕಿನ ಮಹನೀಯರು' ಎಂಬ ಈ ಲೇಖನದಲ್ಲಿ ಕೂಡ ಅನ್ಯತ್ರ ದೊರೆಯದ ಕೆಲವು ಆತ್ಮೀಯವಾದ ನೆನಪುಗಳು ಬಂದಿದೆ. ವೆಂಕಣ್ಣಯ್ಯನವರ ಅಧ್ಯಾಪನದ ವಿಷಯದಲ್ಲಿ ಅಷ್ಟಾಗಿ ವಿವರಗಳು ದಾಖಲಾಗಿರುವಂತೆ ತೋರದು; ಆದರೆ ಆಚಾರ್ಯರು ಅವರ ಶಿಷ್ಯರಾಗಿ ಹೇಳುವ ಈ ಮಾತು ನಮ್ಮ ಕುತೂಹಲವನ್ನು ಕೆರಳಿಸುತ್ತದೆ: "ಸೆಂಟ್ರಲ್ ಕಾಲೇಜಿನಲ್ಲಿ ವಿಜ್ಞಾನಗಳನ್ನು ಅಭ್ಯಾಸಮಾಡಿ, ಮುಂದೆ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಓದಲು ಬಂದಾಗ ಅಲ್ಲಿ ಆಗ ಪ್ರೊಫೆಸರ್ ಆಗಿದ್ದ ಗುರುವಯ್ಯ ವೆಂಕಣ್ಣಯ್ಯನವರು ಇತರ ಕಾವ್ಯಗಳ ಜೊತೆಗೆ ವ್ಯಾಕರಣ, ಭಾಷಾಚರಿತ್ರೆಗಳನ್ನು ಬೋಧಿಸಿದರು. ಅವರ ಬೋಧನೆಯ ಸವಿಯನ್ನು ಕಿವಿಯಾರ ಕೇಳಿ ಸವಿಯಬೇಕು"-ಎಂಬುದಾಗಿ, ಸ್ವತಃ ಒಳ್ಳೆಯ ಅಧ್ಯಾಪಕರಾಗಿ ವಿದ್ಯಾರ್ಥಿಗಳಿಗೆ ಪ್ರಿಯರಾಗಿದ್ದ ಆಚಾರ್ಯರು ಮೆಚ್ಚಿ ಬರೆದಿರುವುದು ಆ ಕುತೂಹಲಕ್ಕೆ ಮೀಟುಗೋಲೆನ್ನಬಹುದು. ಇನ್ನು ಅವರ ವ್ಯಕ್ತಿತ್ವದ ಬಗೆಗೆ ಹಲವರು ಹಲವು ವಿಧಗಳಲ್ಲಿ ಕೊಂಡಾಟದ ಮಾತುಗಳನ್ನು ಬರೆದಿದ್ದರೂ, "ಧರ್ಮರಾಯನ ವಿಷಯ ನನಗೆ ತಿಳಿಯದು. ಅಕ್ಷರಶಃ, ತತ್ವಶಃ ಅಜಾತಶತ್ರು ಎಂಬ ವಿಶೇಷಣ ಯಾರಿಗಾದರೂ ಒಪ್ಪುವುದಿದ್ದರೆ ಅದು ತಳುಕಿನ ವೆಂಕಣ್ಣಯ್ಯನವರಿಗೆ ಒಪ್ಪುತ್ತದೆಂದು ನಿಸ್ಸಂಕೋಚವಾಗಿ ಹೇಳಬಹುದು" ಎಂದು ಬರೆದಿರುವುದು ಆ ಮಾತುಗಳೊಂದಿಗೆ ಸ್ಪರ್ಧಿಸಲು ತಕ್ಕ ಮಾತೇ ಆಗಿದೆ. ತಮ್ಮನ್ನು ಒರಟನೆಂದೂ ನಿಷ್ಠುರವಾದಿಯೆಂದೂ ಮೇಲಿಂದ ಮೇಲೆ ಕರೆದುಕೊಳ್ಳುವ ಆಚಾರ್ಯರ ಮಾತು ಅದು ಎಂದ ಮೇಲೆ ಅದರ ಮೌಲ್ಯ ಅಸಾಮಾನ್ಯವೆಂದೇ ಹೇಳಬೇಕು.

ಜೀವನ ಪತ್ರಿಕೆಯಲ್ಲಿ ಮಾಸ್ತಿಯವರ ಮಾತುಗಾರಿಕೆ ಕುರಿತು ಬರೆದಿರುವ ಒಂದು ಲೇಖನವಂತೂ ತುಂಬ ಚೆಲುವಾದ್ದು; ಹಾಗೆಯೇ ವಿಸ್ಮಯಕರವಾದ್ದು. ಲೇಖಕನೊಬ್ಬನ ಹತ್ತು ಹಲವು ಬರಹಗಳನ್ನು ಓದಿ ಓದಿ ಅವನ

ಬರಹಗಳ ಶೈಲಿಲಕ್ಷಣವನ್ನು ಹೀಗೆ ಎಂದು ಗುರುತಿಸುವುದು ಬಹುಶಃ ಕಷ್ಟದ ಕೆಲಸವಾಗದು; ಆದರೆ ಒಳ್ಳೆಯ ಭಾಷಣಕಾರನೊಬ್ಬನ ಹಲವು ಭಾಷಣಗಳನ್ನು ಮೇಲಿಂದ ಮೇಲೆ ಕೇಳಿಯೂ ಅವನ ಮಾತುಗಾರಿಕೆಯ ಸಾಮಾನ್ಯ ಶೈಲಿಲಕ್ಷಣವನ್ನು ಬರಹದಲ್ಲಿ ವಿವರಿಸಿ ತಿಳಿಸುವುದು ಅಷ್ಟು ಸುಲಭವಾದ ಕೆಲಸವಲ್ಲ. ಆದರೆ ಆಚಾರ್ಯರು ಸಮರ್ಥವಾಗಿ ಆ ಕೆಲಸವನ್ನು ಮಾಡಿದ್ದಾರೆ. ತಮ್ಮದೇ ಬರಹದ ಶೈಲಿಯಲ್ಲಿ ಮಾಸ್ತಿಯವರ ಮಾತುಗಾರಿಕೆಯ ಶೈಲಿಲಕ್ಷಣವನ್ನು ಆಕೃತಿಗೊಳಿಸುವ ಮೂಲಕ ನಮ್ಮಲ್ಲಿ ಬೆರಗುಂಟುಮಾಡಿದ್ದಾರೆ.

ಮಾಸ್ತಿಯವರು ಆಚಾರ್ಯರಿಗೆ ಗುರುಸ್ಥಾನೀಯರು. ಅವರ ಭಾವಚಿತ್ರದ ಒಂದು ಅನಾವರಣ ಸಂದರ್ಭದಲ್ಲಿ ಅವರ ಮಾತುಗಾರಿಕೆ ಕುರಿತು ಮಾಡಿದ ಭಾಷಣದಲ್ಲಿ ಪ್ರಸ್ತಾವಿಸಿದ ತಾಯಿ-ಮಗುವಿನ ನಿರ್ವಾಜ ಪ್ರೀತಿಸಂಬಂಧ ಮತ್ತೆ ಮತ್ತೆ ಅವರನ್ನು ಅವರ ಸಂದೇಶಕ್ಕಾಗಿ ನೆನೆಯುವಂತೆ ಮಾಡುತ್ತದೆ. ಹಾಗೆಂದೇ ಅದನ್ನು ಪ್ರತ್ಯೇಕ ಲೇಖನವಾಗಿಯೇ ಮಾಡಿ ಪ್ರಕಟಿಸಿದ್ದು ಕೂಡ ಉಂಟು. ಈ ಲೇಖನವೇ ಮೊದಲು ಪ್ರಕಟವಾಗಿದ್ದಿರಬಹುದು (೨೫-೮-೧೯೩೯). ಈ ಪುಟ್ಟ ಲೇಖನ 'ತಾಯಿ ಮಗು' ಎಂಬ ಶೀರ್ಷಿಕೆಯಲ್ಲಿದ್ದು, ಇದು ಮಾಸ್ತಿಯವರ ಮಾತಿನಲ್ಲಿಯೇ ಕಥನಗೊಂಡಿದೆ ಎನ್ನುವುದು ಅಲ್ಲಿಯ ಉತ್ತಮಪುರುಷಪ್ರಯೋಗದ ರೀತಿಯಿಂದಲೇ ತಿಳಿಯುತ್ತದೆ. ಲೋಕದ ಜೀವರಾಶಿ ಭಗವಂತನ ಮಕ್ಕಳು, ಮಕ್ಕಳು ಮಾಡುವ ತಪ್ಪುಗಳನ್ನು ಅವನು ಮರೆತು ಮನ್ನಿಸುತ್ತಾನೆ, ತಿದ್ದುತ್ತಾನೆ ಎಂಬ ಆಶಯವನ್ನು ತಾಯಿ ಮಗುವಿನ ರೂಪಕವನ್ನು ಬಳಸಿ ಅವರು ನಿರೂಪಿಸುವ ಪರಿ ಅನನ್ಯವಾದುದು.

ಈಗಾಗಲೇ ಗಮನಿಸಿರುವಂತೆ ರಾಘವಾಚಾರ್ಯರು ಸೇವಾದಳದ ಚಟುವಟಿಕೆಗಳಲ್ಲಿ ತಮ್ಮನ್ನು ಸ್ವಯಂಸೇವಕರಾಗಿ ತೊಡಗಿಸಿಕೊಂಡ ಕಾರಣ ಅವರಿಗೆ ಗಾಂಧೀಜಿಯವರನ್ನು ಕಾಣುವ, ಸಮೀಪದಲ್ಲಿದ್ದುಕೊಂಡು ಅವರ ಸೇವೆಯನ್ನು ಮಾಡುವ, ಇತರ ರಾಷ್ಟ್ರೀಯನಾಯಕರನ್ನು ಕಂಡು ನುಡಿಸುವ ಅಪೂರ್ವ ಅವಕಾಶ ಪ್ರಾಪ್ತವಾಯಿತು. ೧೯೪೯ರಲ್ಲಿ ಮೈಸೂರು ಆಕಾಶವಾಣಿಯಲ್ಲಿ ಈ ಸಂಬಂಧ ಅವರು ಮಾಡಿದ ಉಪನ್ಯಾಸ 'ಗಾಂಧಿಯವರ ಬೀಡಾರದಲ್ಲಿ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ತಮ್ಮ ಆರೋಗ್ಯ ಸುಧಾರಣೆಗೆ ಎಂದು ಗಾಂಧೀಜಿಯವರು ೧೯೨೭ರಲ್ಲಿ ಮೈಸೂರು ಸಂಸ್ಥಾನಕ್ಕೆ ಬಂದಿದ್ದರು. ಸ್ವಲ್ಪಕಾಲ ನಂದಿಬೆಟ್ಟದಲ್ಲಿಯೂ ಸ್ವಲ್ಪಕಾಲ ಬೆಂಗಳೂರಿನ ಕುಮಾರಪಾರ್ಕ್ ಬಂಗಲೆಯಲ್ಲಿಯೂ ಇರುತ್ತಿದ್ದರು. ಈ ವೇಳೆ ಸೇವಾದಳದ ಒಬ್ಬ ಕಾರ್ಯಕರ್ತರಾಗಿ ರಾಘವಾಚಾರ್ಯರು ಕುಮಾರಪಾರ್ಕ್ ಬಂಗಲೆಯಲ್ಲಿ ಗಾಂಧೀಜಿಯವರ ಮತ್ತು ಅವರ ಪರಿವಾರದವರ ಸೇವೆಯ ಅವಕಾಶವನ್ನು ಪಡೆದುಕೊಂಡರು. ಆಗ್ಗೆ ಅಲ್ಲಿಗೆ ಬಂದು ಹೋಗುತ್ತಿದ್ದವರಲ್ಲಿ ಕೆಲವರು ರಾಷ್ಟ್ರೀಯ ನಾಯಕರೂ ಇದ್ದರು. ಆಗ ತಮಗಾದ ಅನುಭವಗಳನ್ನು ತಮ್ಮ ಉಪನ್ಯಾಸದಲ್ಲಿ ಆಚಾರ್ಯರು ನಿರೂಪಿಸಿದ್ದಾರೆ. ಇವು ಮೇಲುನೋಟಕ್ಕೆ ಅಂತಹ ಮಹತ್ತ್ವದ ಅನುಭವಗಳಲ್ಲವೆನ್ನುವುದು ನಿಜ; ಆದರೆ ಸಣ್ಣಪುಟ್ಟ ಘಟನೆಗಳಿಗೆ ಅವಕಾಶಮಾಡಿದ ಈ ಅನುಭವಗಳಿಂದಲೇ ಆ ನಾಯಕ ವ್ಯಕ್ತಿಗಳ ಶೀಲ ಸ್ವಭಾವಗಳು ತಿಳಿಯುವಂತಿವೆ. ಆ ಹಿರಿಯರ ಜೀವನಚರಿತ್ರೆಗಳಲ್ಲಿ ಇವು ಈಗಾಗಲೇ ದಾಖಲಾಗಿರುವುದು ಬಹುಶಃ ಅಸಂಭವ. ಇವನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಿಗೆ ಭಾಷಾಂತರಿಸಿ ಪ್ರಕಟಿಸುವುದರಿಂದ ಪ್ರಯೋಜನವಿದೆ. ಆಚಾರ್ಯರ

'ನಂದಾನೆನಪು' ಸ್ಮೃತಿಚಿತ್ರಮಾಲಿಕೆಯಲ್ಲಿ ಕೂಡ ಇವು ಅಲ್ಲಲ್ಲಿ ಚೆದರಿದಂತೆ ಬಂದಿವೆ. ಇವನ್ನೂ ಕೂಡಿಸಿಕೊಂಡು ಇನ್ನೂ ಸಮಗ್ರವಾದ ಚಿತ್ರವನ್ನು ಪಡೆದರೆ, ಈ ೮೦ ವರ್ಷಗಳಿಗೂ ಹಿಂದಿನ ನೆನಪುಗಳು ಇನ್ನಷ್ಟು ಮೈದುಂಬಿಕೊಳ್ಳುತ್ತವೆ.

ಆಚಾರ್ಯರ ಬಿಡಿಬರಹಗಳ ಸಾಲಿನಲ್ಲಿ ಬರುವ ಇನ್ನೂ ಐದು ಬರಹಗಳುಂಟು. ಅವುಗಳ ವಸ್ತು ವಿವರಗಳನ್ನಿಟ್ಟು ನೋಡೋಣ. ಇವುಗಳಲ್ಲಿ 'ಪೆರಿಕ್ಲೀಸ್ ಮಾಡಿದ ಭಾಷಣಗಳು (ಚರಮಸ್ತುತಿ, ಸಮರ್ಥನಭಾಷಣ)' ಪ್ರಾಚೀನ ಗ್ರೀಸ್ ದೇಶದ ವೀರಜೀವನ, ಸಂಸ್ಕೃತಿ, ರಾಜಕೀಯ, ಸಮಾಜ ಇವುಗಳ ಒಂದು ಮುಖದ ವಿಶದವಾದ ನೋಟವಿದ್ದು, ಒಂದು ಹೊಸ ಪ್ರಪಂಚದ ಪರಿಚಯವನ್ನು ಸೊಗಸಾಗಿ ಮಾಡಿಕೊಡುತ್ತವೆ, ಈ ಭಾಷಣಗಳ ಸಂಬೋಧನಪರತೆ, ಒಂದು ಕಾಲದ ವೀರಜೀವನ, ಎಲ್ಲ ಕಾಲಕ್ಕೂ ಒಪ್ಪುವಂತಿರುವ ಪ್ರಸ್ತುತತೆ, ಬೋಧಪ್ರದವಾದ ಸಂದೇಶವನ್ನು ಸಮರ್ಥವಾಗಿ ತರ್ಕಬದ್ಧವಾಗಿ ಮನಮುಟ್ಟಿಸುವ ಚತುರತೆ ಎಲ್ಲವೂ ಮನೋಜ್ಞವಾಗಿವೆ. ಆಚಾರ್ಯರು ಗ್ರೀಕ್‌ನಾಟಕಗಳ ಭಾಷಾಂತರಗಳಿಗೆ ಬರೆದ ಪೀಠಿಕೆಗಳನ್ನು ಹೊರತುಪಡಿಸಿ, ಸ್ವತಂತ್ರವಾಗಿ ಬರೆದ ಬರೆವಣಿಗೆಗಳು ಹೆಚ್ಚಾಗಿಲ್ಲ. ಇದು ಸ್ವತಂತ್ರವಾದುದಲ್ಲವಾದರೂ ಈ ಅಧ್ಯಯನಕ್ಷೇತ್ರಕ್ಕೆ ಸೇರಿದ ಒಂದು ಭಾಷಾಂತರವಾಗಿ, ನೇರವಾಗಿ ಗ್ರೀಕ್ ಭಾಷೆಯಿಂದಲೇ ಮಾಡಿದ ಭಾಷಾಂತರವಾಗಿ, ಕನ್ನಡಕ್ಕೆ ಕೊಟ್ಟ ಅಮೂಲ್ಯವಾದ ಕಾಣಿಕೆಯಾಗಿದೆ.

ಮಹಾರಾಜ ಕಾಲೇಜಿನ ಶತಮಾನೋತ್ಸವ ಸ್ಮರಣಸಂಚಿಕೆಗಾಗಿ ಬರೆದ ಕಾಲೇಜಿನ ಕನ್ನಡ ಶಾಖೆಯ ಒಂದು ಸಂಕ್ಷಿಪ್ತ ಇತಿಹಾಸ (೧೯೫೧) ದಿಟವಾಗಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡವಿಭಾಗದ ಆರಂಭಕಾಲದ ಚರಿತ್ರೆಯನ್ನು ಶೋಧಿಸಲು ಹೊರಟವರಿಗೆ ಅಮೂಲ್ಯ ಸಾಮಗ್ರಿ ದೊರೆಯುವ ಒಂದು ಆಕರವಾಗಿರುವಂಥದು. ನೂರು ವರ್ಷಕ್ಕೆ ಮೇಲ್ಪಟ್ಟ ಚರಿತ್ರೆಯ ಹೆಗ್ಗುರುತುಗಳನ್ನು ಇಲ್ಲಿ ರೇಖಿಸಿದೆ.

ಆಚಾರ್ಯರಿಗೆ ತುಮಕೂರು ತವರುಜಿಲ್ಲೆ. ಇಲ್ಲಿ ನಡೆದ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಭಾಷಣದಲ್ಲಿ ಹಲವು ಕುತೂಹಲಕರ ಸಂಗತಿಗಳು ದಾಖಲಾಗಿವೆ. ಆಚಾರ್ಯರ ಬದುಕಿನಲ್ಲಿ ಪ್ರಭಾವ ಬೀರಿದ ಹೈಸ್ಕೂಲು ಶಿಕ್ಷಣದವರೆಗಿನ ಗುರುವರ್ಗದವರ ಹೆಸರುಗಳು ಇಲ್ಲಿ ಬಂದಿದ್ದು, ಅವರ ಜೀವನಚರಿತ್ರೆಯನ್ನು ಸಮೀಚೀನಗೊಳಿಸಲು ಅವನ್ನು ಬಳಸಿಕೊಳ್ಳಬಹುದಾಗಿದೆ. ಸ್ಥಳವಂದಿಗರಾದ ಗಣ್ಯಸಾಹಿತಿಗಳ ಹಾಗೂ ಕಲಾವಿದರ ಹೆಸರುಗಳನ್ನೂ ಸಂಕ್ಷೇಪವಾಗಿ ಕೆಲವರ ಸಾಧನೆಗಳನ್ನೂ ಇಲ್ಲಿ ನೆನೆಪುಮಾಡಿಕೊಂಡಿದೆ. ಶುದ್ಧ ಸಾಹಿತ್ಯಕವಾಗಿ ಕವಿಲಾಕ್ಷಣಿಕರ, ಹಳತು-ಹೊಸತರ, ಕವಿ-ವಿಮರ್ಶಕರ ಬಗೆಗೆ ತಮ್ಮ ಹೊಳಹುಗಳನ್ನು ಸೊಗಸಾಗಿ ಆಚಾರ್ಯರು ಪ್ರಕಟಿಸಿದ್ದಾರೆ. ಪಂಪನ ಮಾತನ್ನು ಅನುಕರಿಸುತ್ತ ನೆನೆವುದೆಮ್ಮ ಮನಂ ತುಮಕೂರು ಸೀಮೆಯನ್' ಎಂದು ಉದ್ಗಾರವೆತ್ತಿರುವುದು ಆ ಭಾಗದ ಜನಕ್ಕೆ, ರಸಿಕರಿಗೆ ಸಂತೋಷವನ್ನು ನೀಡುವ ಸಂಗತಿಯೇ ಆಗಿದೆ.

ತುಮಕೂರು ಸೀಮೆ ಆಚಾರ್ಯರ ಇನ್ನೊಂದು ಬರಹದಲ್ಲಿ ಕೂಡ ತಲೆಯೆತ್ತಿದೆ. ಆ ಬರಹ 'ತುಮಕೂರಿನವರ ಗುತ್ತಿಗೆ' ಎಂಬ ಶೀರ್ಷಿಕೆಯಲ್ಲಿದೆ. ಇದು ಡಿ.ಎಲ್. ನರಸಿಂಹಾಚಾರ್ಯರು ತೀರಿಕೊಂಡ ಮೇಲೆ (೭-೫-೧೯೭೧) ಅವರ ಸ್ಮರಣೆಗಾಗಿ 'ಕನ್ನಡ ನುಡಿ'ಯಲ್ಲಿ, ಅದರ ಸ್ಮಾರಕಾಂಕದಲ್ಲಿ (೩೪-೧೫, ೧೬ ; ಆಗಸ್ಟ್ ೧೯೭೧), ಪ್ರಕಟವಾದ ಬರಹ. ಪರಿಷತ್ತಿನ ಕನ್ನಡ ನಿಘಂಟುವಿನ ಸಿದ್ಧತೆಯಲ್ಲಿ ಆರಂಭಕಾಲಕ್ಕೆ ಕೆಲಸಮಾಡಿದ ಮೂವರು ಮುಖ್ಯರು ಈ ಸ್ಥಳದವರು ಎಂದು ಹೇಳಿ ಹೆಮ್ಮೆಪಟ್ಟಿರುವ ಆಚಾರರು ತಮ್ಮ ಮತ್ತು ಡಿ.ಎಲ್.ಎನ್. ಅವರ ನಡುವೆ ಇದ್ದ ಮೈತ್ರಿಯನ್ನು ಸೊಗಸಾಗಿ ಚಿತ್ರಿಸಿದ್ದಾರೆ. ಇಬ್ಬರ ಸ್ವಭಾವವೂ ಇಲ್ಲಿ ಚಿತ್ತಭಿತ್ತಿಯ ಮೇಲೆ ಅಚ್ಚೊತ್ತುವ ಪರಿಯಲ್ಲಿ ಹೃದ್ಯವಾಗಿ ಮೂಡಿದೆ.

ಜ್ಯೋತಿಷ್ಯದ ವಿಚಾರದಲ್ಲಿ ಆಚಾರ್ಯರಿಗೆ ನಂಬಿಕೆಯಿತ್ತೇ? ಇತ್ತು ಎಂದು ತಿಳಿಸುವ ಬರಹವೊಂದುಂಟು. ವಿಚಾರವಾದಿಗಳೆಂದು ಹೆಸರಾಗಿದ್ದ ಎಚ್. ನರಸಿಂಹಯ್ಯನವರು 'ವೈಚಾರಿಕದೃಷ್ಟಿ' ಎಂಬ ಲೇಖನವನ್ನು ಪ್ರಕಟಿಸಿದಾಗ, ಅದರಲ್ಲಿ ಪ್ರಾಸಂಗಿಕವಾಗಿ ಜ್ಯೋತಿಷ್ಯವನ್ನು ಕುರಿತು ಆಡಿದ ಅಪನಂಬಿಕೆಯ ಮಾತೊಂದನ್ನು ಎತ್ತಿಕೊಂಡು, ತಮ್ಮ ಬದುಕಿನ ಕೆಲವು ಘಟ್ಟಗಳಲ್ಲಿ ಜ್ಯೋತಿಷ್ಯದ ಮಾತು ನಿಜವಾಗಿರುವುದನ್ನು ತಮ್ಮ ಪ್ರತಿಕ್ರಿಯೆಯ ಲೇಖನದಲ್ಲಿ ತಿಳಿಸಿದ್ದಾರೆ. 'ಜ್ಯೋತಿಷ್ಯ: ವೈಚಾರಿಕದೃಷ್ಟಿ' ಎಂಬ ಈ ಲೇಖನ ಅನೇಕ ವಿಷಯಗಳಲ್ಲಿ ಅಸಾಂಪ್ರದಾಯಿಕವಾಗಿ ನಡೆದುಕೊಳ್ಳುತ್ತಿದ್ದ ಆಚಾರ್ಯರ ಲೇಖನಿಯಿಂದ ಹೊರಬಂದಿರುವುದೀಗ ಕುತೂಹಲದ ಸಂಗತಿ.

ಈ ಮೇಲಿನ ಎಲ್ಲ ಲೇಖನಗಳೂ ಕ.ವೆಂ. ರಾಘವಾಚಾರ್ಯರ 'ನಂದಾ ನೆನಪು' ಎಂಬ ಸಂಕಲಿತಕೃತಿಯಲ್ಲಿ ಸೇರಿದೆ. ಇದರಲ್ಲಿ ಸೇರಬೇಕಾಗಿದ್ದು, ಬಿಟ್ಟು ಹೋಗಿರುವ ಕೆಲವು ಲೇಖನಗಳೂ ಇರುವಂತಿವೆ. ಇವುಗಳಲ್ಲಿ 'ಶ್ರೀ ಗೊಮ್ಮಟೇಶ್ವರ ಎಂಬುದರ ಬಗ್ಗೆ (ಕನ್ನಡನುಡಿ ೨-೧೨-೧೯೩೮, ಪು. ೬೬) ಕೆಲವು ಮಾತುಗಳು: ಶ್ರವಣಬೆಳಗೊಳದ ಬಾಹುಬಲಿಮೂರ್ತಿಯ ಸಂಬಂಧವಾದ ಪುರಾಣಕಥೆ ಹಾಗೂ ಶಿಲ್ಪವೈಭವ ಇವನ್ನು ಸರಳವಾಗಿ ಇಲ್ಲಿ ಪರಿಚಯಿಸಿದೆ; ಹಾಗೆಯೇ ಚಾವುಂಡರಾಯನ ವಿಚಾರವಾಗಿಯೂ ಕೆಲವು ಮಾತುಗಳನ್ನು ಹೇಳಿದೆ. "ಮೂರ್ತಿ ನಿರಾಭರಣಮೂರ್ತಿ; ಬಾನೇ ಬಟ್ಟೆ, ತೇಲುವ ಮುಗಿಲ ಮಾಲೆಯೇ ಮಾಲೆ, ಬಳ್ಳಿಗಳೇ ಅಲಂಕಾರ" ಎಂದಿರುವ ಭಾವಲಿಪ್ತವಾದ ಮಾತು ಆಚಾರರಲ್ಲಿ ಕವಿಹೃದಯವೂ ಉಂಟೆಂದು ಸಾರುವಂತಿದೆ. ರನ್ನಕವಿಯ ಸಹಸ್ರವಾರ್ಷಿಕೋತ್ಸವದ ಅಂಗವಾಗಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಆರ್.ಎಸ್. ಪಂಚಮುಖಿಯವರ ಅಧ್ಯಕ್ಷತೆಯಲ್ಲಿ ಆಚಾರ್ಯರು ರನ್ನನನ್ನು ಕುರಿತು ಒಂದು ಉಪನ್ಯಾಸಮಾಡಿದರು (ವರದಿ : ಕ.ನು. ೧೩-೧-೧೯೫೦). ಕವಿರತ್ನತ್ರಯರ ಬಗ್ಗೆ ಆರಂಭದಲ್ಲಿ ಕೆಲವು ಮಾತುಗಳನ್ನು ಹೇಳಿ, ಕವಿಯ ಕಾಲ ಕೃತಿಗಳ ವಿಚಾರದ ಕೆಲವು ಸಾಮಾನ್ಯ ಸಂಗತಿಗಳನ್ನು ಇಲ್ಲಿ ಪ್ರಸ್ತಾವಿಸಿದೆ.

ಈ ವರೆಗೆ ಆಚಾರ್ಯರ ಕನ್ನಡ ಭಾಷೆಯಲ್ಲಿರುವ ಬಿಡಿಬರಹಗಳ ಪರಿಚಯವನ್ನು ಕೆಲಮಟ್ಟಿಗೆ ಮಾಡಿಕೊಂಡೆವು. ಈಗ ಅವರ ಕೆಲವು ಇಂಗ್ಲಿಷ್ ಭಾಷೆಯಲ್ಲಿರುವ ಪ್ರಬಂಧಗಳತ್ತ ಗಮನ ಹರಿಸೋಣ. ಈ

ಪ್ರಬಂಧಗಳನ್ನು ಕೂಡ 'ನಂದಾನೆನಪು' ಎಂಬ ಕೃತಿಯಲ್ಲಿ ಪ್ರತ್ಯೇಕವಿಭಾಗದಲ್ಲಿ ಸಂಕಲಿಸಿಕೊಟ್ಟಿದೆ. ಇಲ್ಲಿ ಕೂಡ ೧೦ ಲೇಖನಗಳಲ್ಲಿ ೬ ಭಾಷೆಗೆ ಸಂಬಂಧಿಸಿದವು; ಉಳಿದವು ಸಂಕೀರ್ಣಸ್ವರೂಪದವು.

ದಕ್ಷಿಣ ಭಾರತದ ಭಾಷೆ ಸಾಹಿತ್ಯಗಳ ಮೇಲೆ ಸಂಸ್ಕೃತದ ಪ್ರಭಾವ (Influence of Sanskrit on the Southern Indian Languages and Literatures) ಕುರಿತು ಲೇಖನದಲ್ಲಿ, ಮುಖ್ಯವಾಗಿ ನಾಲ್ಕು ಸೋದರ ದ್ರಾವಿಡ ಭಾಷೆಗಳಲ್ಲಿ ಶಬ್ದಕೋಶ, ವಾಕ್ಯರಚನೆ, ಕಾವ್ಯವಿಷಯ ಮೊದಲಾದ ಮುಖಗಳಲ್ಲಿ ಸಂಸ್ಕೃತದ ಪ್ರಭಾವ ಎಷ್ಟರಮಟ್ಟಿಗೆ ಕಂಡುಬರುತ್ತದೆ ಎಂಬುದನ್ನು ಉದಾಹರಣೆಗಳನ್ನು ಕೊಟ್ಟು ವಿವರಿಸಿದೆ. ಮಣಿಪ್ರವಾಳವೆಂಬ ಭಾಷಾಶೈಲಿಯ ರೂಢಿಗೆ ತಮಿಳುನಾಡಿನ ಭಕ್ತಿಚಳವಳಿ ಹೇಗೆ ಸಹಕಾರಿಯಾಯಿತು ಎಂಬುದನ್ನು ತಕ್ಕ ಉದಾಹರಣೆಗಳಿಂದ ಇಲ್ಲಿ ತೋರಿಸಿದೆ.

ಕನ್ನಡ ಭಾಷೆಯಲ್ಲಿ 'ಲಿಪಿಸಂಸ್ಕರಣ' (Script reform in Kannada) ಎಂಬುದರಲ್ಲಿ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು ಮಾಡಿದ ಪ್ರಯತ್ನಗಳನ್ನು ಕನ್ನಡೇತರರಿಗೆ ಪರಿಚಯಿಸುವ ಒಂದು ಪ್ರಯತ್ನ ನಡೆದಿದೆ. ಅದಕ್ಕೆ ಹಿನ್ನೆಲೆಯಾಗಿ ಭಾಷಾವೈವಿಧ್ಯದಲ್ಲಿ ಏಕಲಿಪಿಯ ಸಾಧ್ಯತೆಯ ಬಗೆಯೂ ಇಲ್ಲಿ ಸ್ವಲ್ಪ ಚರ್ಚಿಸಿದೆ. ಈ ವಿಷಯವನ್ನು ಇಷ್ಟು ವ್ಯಾಪಕವಾಗಿ ಚರ್ಚಿಸಿರುವ ಬೇರೆ ಆಂಗ್ಲ ಬರಹಗಳು ಹೆಚ್ಚು ಇರಲಾರವು.

ಲಿಪಿಸಂಸ್ಕರಣದಂತೆಯೇ ತೊಡಕಾದ ಇನ್ನೊಂದು ಭಾಷಾಸಮಸ್ಯೆಯೆಂದರೆ. ಭಾರತೀಯ ಭಾಷೆಗಳಲ್ಲಿ ಪಾರಿಭಾಷಿಕ ಶಬ್ದಗಳನ್ನು ಬಳಸುವಾಗ ಏಕತೆಯನ್ನು ತರುವ ಸಮಸ್ಯೆ. ಈ ವಿಷಯದಲ್ಲಿಯೂ ಆಚಾರ್ಯರು ದೀರ್ಘವಾಗಿ ಚರ್ಚಿಸಿದ್ದಾರೆ (Technical terminology in Indian Languages). ಗ್ರೀಕ್ ಲ್ಯಾಟಿನ್ ಮೂಲಗಳಿಂದ ಪಡೆದಿರುವ ಸಹಾಯವನ್ನೂ ಸಂಸ್ಕೃತದಿಂದ ವಿಪುಲವಾಗಿ ಪಡೆಯಬೇಕಾಗಿರುವ ಸಹಾಯವನ್ನೂ ಅವರು ಇಲ್ಲಿ ಎತ್ತಿ ಹೇಳಿದ್ದಾರೆ. ಪಾರಿಭಾಷಿಕಪದಗಳನ್ನು ಭಾಷೆಗಳಿಗೆ ಅಳವಡಿಸಿಕೊಳ್ಳಬೇಕಾದ ವಿಧಿವಿಧಾನಗಳ ಬಗ್ಗೆಯೂ ಅವರು ಗಮನಾರ್ಹವಾದ ಸಲಹೆಗಳನ್ನು ನೀಡಿದ್ದಾರೆ. ಈ ಸಲಹೆಗಳು ಸ್ವೀಕಾರಯೋಗ್ಯವಾಗಿಯೂ ತಾರ್ಕಿಕವಾಗಿ ನಿಲ್ಲುವಂತಹವೂ ಆಗಿವೆ. ಮತ್ತೆ ಮತ್ತೆ ಗಮನಿಸಬೇಕಾದ ಬರಹವಿದು.

ನಮ್ಮ ವಿಶ್ವವಿದ್ಯಾಲಯಗಳಲ್ಲಿಯ ಭಾಷಾಸಮಸ್ಯೆ ಕುರಿತು ವಿವೇಚಿಸಿರುವ ಪ್ರಬಂಧ (The Language problem in our Universities) ಇದೇ ವಿಷಯವಾಗಿ ಕನ್ನಡದಲ್ಲಿ ಆಚಾರ್ಯರು 'ಬಾಗಿನ' ಸಂಭಾವನಗ್ರಂಥಕ್ಕೆ (೧೯೫೪) ಬರೆದ ಕನ್ನಡ ಲೇಖನದ ಇಂಗ್ಲಿಷ್ ಅವತರಣಿಕೆ, ಆಚಾರ್ಯರ ಭಾಷಾಂತರ ಸಾಮರ್ಥ್ಯವನ್ನು ತಿಳಿಯಲಾಶಿಸುವವರು ಈ ಪ್ರಬಂಧವನ್ನು ಆ ದೃಷ್ಟಿಯಿಂದಲೂ ಪರಿಶೀಲಿಸಿ ನೋಡಬಹುದಾಗಿದೆ.

ದಕ್ಷಿಣ ಭಾರತೀಯಭಾಷೆಗಳ ಸಾಹಿತ್ಯಸಮಿತಿಗಳ ಸಂಯುಕ್ತ ಉದ್ಘಾಟನ ಸಮಾರಂಭದಲ್ಲಿ ಸಾದರಪಡಿಸಿದ ಸಣ್ಣ ಟಿಪ್ಪಣಿ (Note read at the Joint Inauguration of the South Indian Languages' Sahitya

Samitis: 6-3-1960) ಎಂಬ ಬರಹದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದ ಒಂದು ಸಾಮಾನ್ಯಪರಿಚಯವನ್ನು ಮಾಡಿದೆ. ವಚನಸಾಹಿತ್ಯವನ್ನು ಕನ್ನಡದ ವಿಶಿಷ್ಟ ಕೊಡುಗೆಯೆಂದು ಪ್ರತ್ಯೇಕವಾಗಿ ಗುರುತಿಸಿದೆ.

ಶ್ರೀವೈಷ್ಣವ ಆಚಾರ್ಯ ರಾಮಾನುಜಾಚಾರ್ಯರ ದಯಾರ್ದ್ರಹೃದಯವನ್ನು ಕೇಂದ್ರ ಬಿಂದುವಾಗಿಟ್ಟುಕೊಂಡು ಅವರ ಜೀವನ ಸಾಧನೆಗಳನ್ನು ಅನೇಕ ಮುಖಗಳಲ್ಲಿ ಒಂದು ಒಟ್ಟುನೋಟದಲ್ಲಿ ಕೊಡುವ ಪ್ರಯತ್ನ 'ಕಾರುಣ್ಯಪೂರ್ಣ ರಾಮಾನುಜ (Ramanuja The Compassionate)' ಎಂಬ ಒಂದು ಲೇಖನ. ಸಾಕಷ್ಟು ವಿವರಗಳಲ್ಲಿ ಅದನ್ನು ಮಾಡಿಕೊಡಲಾಗಿದೆ. ರಾಮಾನುಜರ ಜೀವನಸಾಧನೆಗಳನ್ನು ಮೂಲಸಾಹಿತ್ಯದಲ್ಲಿಯೇ ಶ್ರದ್ಧಾಭಕ್ತಿಗಳಿಂದ ಅಭ್ಯಾಸಮಾಡಿರುವ ಆಚಾರ್ಯರು ವಿಷಯಗಳನ್ನು ಅಲ್ಲಿಂದಲೇ ಸಂಗ್ರಹಿಸಿದ್ದಾರೆ. ಲೋಕದಲ್ಲಿ ಉದಾತ್ತಚಿಂತನೆಗಳು, ಘನವಾದ ಉಪದೇಶಗಳು ಹಾಗೂ ಸತ್ವಗುಣಸಂಪನ್ನವಾದ ವಿವೇಕಕ್ಕೆ ಕೊರತೆಯಿಲ್ಲ; ಆದರೆ ಬದುಕಿನಲ್ಲಿ ಇವುಗಳ ಅನುಷ್ಠಾನವನ್ನು ಚೆನ್ನಾಗಿ ಕಾಣಬೇಕಾದರೆ ರಾಮಾನುಜಾಚಾರ್ಯ್ಯರಂತಹ ಮಹಾನುಭಾವರಲ್ಲಿ ಎಂಬುದಾಗಿ ಅವರು ಹೇಳಿ, ತಕ್ಕ ದೃಷ್ಟಾಂತಗಳಿಂದ ಅದನ್ನು ಸಮರ್ಥಿಸಿದ್ದಾರೆ.

ಪಂಪ ಮತ್ತು ಅಭಿನವಪಂಪರು ಪ್ರಾಚೀನ ಕನ್ನಡಕವಿಗಳಲ್ಲಿ ಪ್ರಸಿದ್ಧರು. ಇವರನ್ನು ಕನ್ನಡೇತರರಿಗೆ ಪರಿಚಯಿಸುವ ಎರಡು ಪ್ರಬಂಧಗಳಿವೆ. ಒಂದು ಆದಿಕವಿ ಪಂಪ (Adikavi Pampa), ಇನ್ನೊಂದು ಅಭಿನವಪಂಪನ ರಾಮಾಯಣದಲ್ಲಿ ಬರುವ ಚಿತ್ರಕೂಟದ ಭರತ-ರಾಮಸಮಾಗಮಪ್ರಸಂಗ (Bharata Rama Samagama at Chitrakuta), ಈಯೆರಡೂ ಕನ್ನಡ ಅಧ್ಯಾಪಕರಾಗಿದ್ದ ಆಚಾರ್ಯರಿಗೆ ಆಪ್ತವಾದ ವಿಷಯಗಳೇ, ಕವಿಕಾವ್ಯವಿಚಾರವಾದ ಸಂಕ್ಷಿಪ್ತ ಹಿನ್ನೆಲೆಯೊಂದಿಗೆ ಪಂಪನ ಆದಿಪುರಾಣದ ಭರತ-ಬಾಹುಬಲಿ ಪ್ರಸಂಗವನ್ನೂ ವಿಕ್ರಮಾರ್ಜುನವಿಜಯದ ಕರ್ಣ-ದುರ್ಯೋಧನ ಮೈತ್ರಿಪ್ರಸಂಗವನ್ನು ರಸಘಟ್ಟಗಳಾಗಿ ನಿರೂಪಿಸಿದ್ದಾರೆ. ಪಂಪನ ಬಗೆಗಿರುವ ಇಂಗ್ಲಿಷ್ ಬರಹಗಳಲ್ಲಿ ತಪ್ಪದೆ ಗಮನಿಸಬೇಕಾದ ವಿವರಪುಷ್ಟಿಯಿರುವ ಬರಹವಿದು ಎಂದು ಧಾರಾಳವಾಗಿ ಹೇಳಬಹುದು. ಎರಡನೆಯದು, ಅಭಿನವಪಂಪ ನಾಗಚಂದ್ರನ ಕೃತಿಯೊಳಗಿನ ವಿಶಿಷ್ಟ ಕಥಾಸನ್ನಿವೇಶಕ್ಕೆ ಸಂಬಂಧಿಸಿದ್ದು, ಜೈನ ಬೌದ್ಧ ಸಂಪ್ರದಾಯಗಳ ರಾಮಾಯಣಕಾವ್ಯಗಳ ಹಾಗೂ ಕನ್ನಡ ರಾಮಾಯಣಗಳ ಹಿನ್ನೆಲೆಯ ಸಾಮಾನ್ಯ ಪರಿಚಯದೊಂದಿಗೆ ಪಂಪರಾಮಾಯಣದ ಒಂದು ಆಯ್ದ ಕಥಾಘಟ್ಟವನ್ನು ಪ್ರಾತಿನಿಧಿಕವಾಗಿ ಕನ್ನಡೇತರರ ಅನುಕೂಲಕ್ಕೆ ಎಂದು ಆಚಾರ್ಯರು ಸಂಗ್ರಹಿಸಿ ಕೊಟ್ಟಿದ್ದಾರೆ. 'ದಾಖಲಾಗಿರದ ಅಭಿನಂದನೆ' (Unrecorded Tribute) ಪುಟ್ಟ ಟಿಪ್ಪಣಿಯೇ ಆದರೂ ಗಾಂಧೀಜಿಯವರ ಸರ್ವದಯಾಪರತೆಯ ಸ್ವಭಾವದ ಮೇಲೆ ಬೆಳಕುಚೆಲ್ಲಲು ಸಮರ್ಥವಾದ ಒಂದು ಸುಂದರಪ್ರಸಂಗ, ಮಕ್ಷಿಕಾಬಾಧೆ ಬೋಧಿಸಿದ ಮಹಾ ಉಪದೇಶ !

ಇನ್ನು ಈ ಇಂಗ್ಲಿಷ್ ಲೇಖನಗಳ ಗುಚ್ಛದಲ್ಲಿ ಗಮನಿಸಬೇಕಾಗಿರುವುದು 'ಭಾರತೀಯ ಭಾಷೆಗಳಿಗೆ ಗ್ರೀಕ್ ನಾಟಕಗಳನ್ನು ಭಾಷಾಂತರಿಸುವುದು' (Translating Greek Plays into Indian Languages) ಎಂಬ ಉತ್ಕೃಷ್ಟ ಉದ್ಬೋಧಕ ಲೇಖನವನ್ನು, ಆಚಾರ್ಯರು ತಮಗಿದ್ದ ಗ್ರೀಕ್ ಭಾಷಾಸಾಹಿತ್ಯಗಳ ಪ್ರತ್ಯಕ್ಷಪರಿಚಯದಿಂದಾಗಿ ವಸ್ತುವಿವರಗಳನ್ನು ಅಧಿಕೃತವಾಗಿ ನಿರೂಪಿಸಿದ್ದಾರೆ, ಭಾಷಾಂತರಕಲೆಯ ವಿಧಿವಿಧಾನಗಳಲ್ಲಿ ಆಸಕ್ತರಾದವರಿಗೆ

ಅಮೂಲ್ಯವಾದ ಸಾಮಗ್ರಿಯನ್ನು ನೀಡಿದ್ದಾರೆ. ಗ್ರೀಕ್ ನಾಟಕಗಳ ಸಾಮಾನ್ಯಸ್ವರೂಪ, ನಾಟಕಗಳ ಅನುವಾದಗಳಲ್ಲಿ ವಿನಿಯೋಗವಾಗುವ ಗದ್ಯ ಪದ್ಯಗಳ ಸಾರ್ಥಕತೆ, ಛಂದಸ್ಸುಗಳ ಬಳಕೆಯ ಔಚಿತ್ಯ, ನೇರವಾಗಿ ಗ್ರೀಕ್ ಮೂಲದಿಂದಲೇ ಭಾರತೀಯ ಭಾಷೆಗಳಿಗೆ ಗ್ರೀಕ್‌ನಾಟಕಗಳನ್ನು ಭಾಷಾಂತರಿಸುವುದರಿಂದ ಆಗುವ ಪ್ರಯೋಜನಗಳು, ರೂಪಾಂತರಗಳ ವಿಚಾರ, ಕನ್ನಡದಲ್ಲಿ ಶ್ರೀಯವರು ನಡೆಸಿದ ಪ್ರಾರಂಭದ ಪ್ರಯೋಗಗಳು ಈ ಮೊದಲಾದವು ಇಲ್ಲಿ ಚರ್ಚಿತವಾಗಿವೆ. ಸ್ವಾರಸ್ಯವೆಂದರೆ, ತಾವು ಗ್ರೀಕ್ ಮೂಲದಿಂದಲೇ ನೇರವಾಗಿ ಮಾಡಿದ ಭಾಷಾಂತರಪ್ರಯತ್ನಗಳ ಬಗೆಗೆ ಒಂದೇ ಒಂದು ಮಾತು ಕೂಡ ಈ ಬರಹದಲ್ಲಿ ಪ್ರಸ್ತಾಪ ಮಾಡದಿರುವುದು ಆಶ್ಚರ್ಯ ಹುಟ್ಟಿಸುತ್ತದೆ. ವಿನಯವೂ ಸಂಕೋಚವೂ ಹಾಗೆ ಮಾಡುವ ಕೈಯನ್ನು ತಡೆದಿರಬಹುದು. ಈ ಲೇಖನ ದೆಹಲಿ ವಿಶ್ವವಿದ್ಯಾನಿಲಯದವರು ಉದ್ದೇಶಿಸಿದ ಗಿಲ್ಬರ್ಟ್ ಮತ್ತೆ ಶತಮಾನೋತ್ಸವಸ್ಮರಣೆಯ ಗ್ರಂಥಕ್ಕೆ ಎಂದು ಬರೆದುದೆಂದು ತಿಳಿಯುವುದರಿಂದ ಇದು ಕೂಡ ಅಭಿಮಾನಪಡಬೇಕಾದ ಸಂಗತಿಯೇ.

ಇಲ್ಲಿಯವರೆಗೆ ಕ.ವೆಂ. ರಾಘವಾಚಾರ್ಯರು ಕನ್ನಡದಲ್ಲಿಯೂ ಇಂಗ್ಲಿಷಿನಲ್ಲಿಯೂ ಬರೆದ ಲೇಖನಗಳ, ಮಾಡಿದ ಭಾಷಣಗಳ ಬಗೆಗೆ ಒಂದು ಸಮೀಕ್ಷೆಯನ್ನು ಮಾಡಿದ್ದಾಯಿತು. ಅವರ ಇತರ ಕೃತಿಗಳು ಇನ್ನು ನಾವು ಪ್ರಯಾಣಮಾಡಬಹುದಾಗಿದೆ.

## ೪. ನಂದಾನೆನಪು

ಕ.ವೆಂ. ರಾಘವಾಚಾರ್ಯರ (೧೯೦೪-೭೭) ಬರಹಗಳ ಮತ್ತು ಭಾಷಣಗಳ ಸಂಕಲಿತಗ್ರಂಥ ಸಿದ್ಧವಾಗುತ್ತಿದ್ದಾಗ, ತಮ್ಮ ನೆನಪುಗಳ ಒಂದು ಸಂಕ್ಷಿಪ್ತಕಥನವನ್ನು ಕೂಡ ಅದರೊಂದಿಗೆ ಸೇರಿಸಬಹುದೆಂದು ಅವರ ಮನಸ್ಸಿಗೆ ಬಂದಿತು. ದಿಟವಾಗಿ ಅದೊಂದು ಶುಭಗಳಿಗೆ, ಕನ್ನಡ ನಾಡು ನುಡಿಗಳಿಗೆ, ಗುರು ಹಿರಿಯರಿಗೆ ಸಂಬಂಧಿಸಿದ ಅನೇಕ ಅಮೂಲ್ಯವಾದ, ಆತ್ಮೀಯವಾದ ವಿವರಗಳು ಆ ನಿಮಿತ್ತವಾಗಿ ಪ್ರಕಟವಾಗಲು ಇದರಿಂದ ಅವಕಾಶವಾಯಿತು. ಇದು ಲೇಖನ ಭಾಷಣಗಳ ಸಂಪುಟದೊಳಗೆ ಒಂದು ಭಾಗವಾಗಿ ಸೇರಿರುವ ಕಾರಣದಿಂದಲೋ ಏನೋ. ೧೨೫ ಪುಟಗಳ ಪುಸ್ತಕದ ಗಾತ್ರದಲ್ಲಿರುವ ಕಥನವಾದರೂ, ಪಡೆಯಬೇಕಾದ ಮಟ್ಟಿಗೆ ಪ್ರಚಾರವನ್ನು ಪಡೆಯುವುದಾಗಿಲ್ಲವೆನ್ನಬೇಕು.

ಆಚಾರ್ಯರು ತಮ್ಮ ನೆನಪುಗಳ ಈ ಕಥನವನ್ನು ಕುರಿತು ತಾವೇ ಹೀಗೆ ಹೇಳಿದ್ದಾರೆ. “ನನ್ನ ಬಾಳಲ್ಲಿ ಆಗಾಗ ಇಣುಕಿ ಮರುಕೊಳಿಸುವ ಕೆಲವು ನೆನಪುಗಳ ಟಿಪ್ಪಣಿ ಇದು ಎನ್ನಬಹುದು. ಇದು ನನ್ನ ಸಮಗ್ರ ಜೀವನಕಥೆಯಲ್ಲ. ನನ್ನ ಅಂತರಂಗವರ್ಗದವರಲ್ಲಿ, ಪರಮಾತ್ಮೀಯರಲ್ಲಿ ಹಲವರ ಹೆಸರು ಕೂಡ ಇಲ್ಲಿ ಬಂದಿಲ್ಲ. ಕೆಲವೇ ಘಟ್ಟಗಳ ಕೆಲವೇ ಸನ್ನಿವೇಶಗಳನ್ನು ಮಾತ್ರ ಇಲ್ಲಿ ಹೆಗ್ಗುರುತಿಸಲು ಪ್ರಯತ್ನಿಸಿದೆ.”

ಸ್ವತಃ ಕೃತಿಕರ್ತೃವೇ ಭಾವಿಸುವಂತೆ ಈ ಸ್ಮೃತಿಚಿತ್ರಮಾಲಿಕೆ ಎಷ್ಟೇ ಸಂಕ್ಷೇಪವಾಗಿ, ಅಸಮಗ್ರವಾಗಿ ಇದ್ದರೂ ಇದರಲ್ಲಿ ಆಚಾರ್ಯರ ಜೀವನದ ಬಾಲ್ಯ, ವಿದ್ಯಾಭಾಸ ಮತ್ತು ವೃತ್ತಿಜೀವನದ ಅನೇಕ ವಿವರಗಳು ನಮಗೆ

ದೊರೆಯುತ್ತವೆ; ಅವರ ಒಡನಾಟದ ಹಿರಿಯರ, ಗುರುವರ್ಗದವರ, ಗೆಳೆಯರ ವಿಚಾರಗಳೂ ಅಲಲ್ಲಿ ಅಷ್ಟಷ್ಟು ಬಂದಿವೆ; ಬಂಧುಬಾಂಧವರ ಸಂಗತಿಗಳೂ ಉಂಟು. ಗಾಂಧೀಜಿಯವರ ಮತ್ತು ಅವರ ಆಪ್ತವರ್ಗದ ರಾಷ್ಟ್ರೀಯನಾಯಕರ ನಡೆನುಡಿಗಳ ಬಗೆಗೆ ಬೆಳಕು ಚೆಲ್ಲುವ ಸ್ವಾರಸ್ಯಕರ, ಆತ್ಮೀಯ ಎನ್ನಬಹುದಾದ ಸಣ್ಣ ಪುಟ್ಟ ಘಟನೆಗಳಂತೂ ಆಯಾ ಮಹನೀಯರ ಜೀವನಚರಿತ್ರೆಗಳಲ್ಲಿ ಬಹುಶಃ ಎಲ್ಲಿಯೂ ದಾಖಲಾಗದೆ ಇರುವಂತಹವು, ತಪ್ಪದೆ ದಾಖಲೆಯಾಗಬೇಕಾದಂತಹವು ಎನ್ನಬಹುದು.

ಇನ್ನು ಸಾಂಸ್ಥಿಕವಾಗಿ ಬೆಂಗಳೂರು ಗವೀಪುರ ಬಡಾವಣೆಯ ಕೋಹಿನೂರು ಸಂಘ (೧೯೨೦-೨೮), ಬೆಳಗಾವಿಯ ಅಖಿಲಭಾರತ ಕಾಂಗ್ರೆಸ್ ಮಹಾಧಿವೇಶನ (೧೯೨೪), ಗಾಂಧೀಜಿಯವರ ನಂದೀದುರ್ಗ-ಬೆಂಗಳೂರು ವಾಸ್ತವ್ಯ (೧೯೨೭), ಮದರಾಸು ಕಾಂಗ್ರೆಸ್ ಮಹಾಧಿವೇಶನ (೧೯೨೭), ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ನಿಘಂಟು ಸಿದ್ಧತೆಯ ಆರಂಭ (೧೯೩೩), ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟುವಿನ ಆರಂಭ (೧೯೪೩) ಇಂಥ ವಿದ್ಯಮಾನಗಳ ಬಗೆಗೆ ಇಲ್ಲಿ ಪ್ರತ್ಯಕ್ಷಕಥನಗಳಿವೆ. ಇವೆಲ್ಲ ಆಚಾರ್ಯರು ಕನ್ನಡ ಕಟ್ಟುವ ಕೆಲಸದಲ್ಲಿ ತಮಗೆ ಅರಿವಿಲ್ಲದೆಯೇ, ಕೆಲವೊಮ್ಮೆ ಅರಿವಿದ್ದು, ಹೇಗೆ ಭಾಗಿಯಾದರು ಎನ್ನುವುದನ್ನು ಈ ದೂರದ ಕಾಲಘಟ್ಟದಲ್ಲಿ ನಮಗೆ ಮನವರಿಕೆಮಾಡಿಕೊಡುತ್ತವೆ. ಅಲ್ಲದೆ ಅವರೇ ಕಥನದ ಕೇಂದ್ರವ್ಯಕ್ತಿಯಾಗಿದ್ದರೂ ಈ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡು ದುಡಿದ ಹಲವರು ಹಿರಿಯರ ಶೀಲಸ್ವಭಾವಗಳೂ ಸಾಧನೆಯ ವಿವರಗಳೂ ನಮಗೆ ಜೊತೆಜೊತೆಗೇ ಕಣ್ಣಿಗೆ ಕಟ್ಟಿ ನಿಲ್ಲುತ್ತವೆ. ಬೆಳ್ಳಾವೆ ವೆಂಕಟನಾರಣಪ್ಪನವರು, ಬಿ.ಎ. ಶ್ರೀಕಂಠಯ್ಯನವರು, ಎಂ.ಆರ್. ಶ್ರೀನಿವಾಸಮೂರ್ತಿಯವರು, ಬಾಲಸರಸ್ವತಿಯವರು, ಟಿ.ಎಸ್. ವೆಂಕಣ್ಣಯ್ಯನವರು, ಸಂಗೀತದ ಕೆಂಪೇಗೌಡರು, ರಾಳ್ಳಪಲ್ಲಿ ಅನಂತಕೃಷ್ಣಶರ್ಮರು, ಮಾಸ್ತಿಯವರು, ಡಾ. ಸಿ.ಬಿ. ರಾಮರಾಯರು, ಎನ್.ಎಸ್. ಸುಬ್ಬರಾಯರು, ಎ.ಆರ್. ಕೃಷ್ಣಶಾಸ್ತ್ರಿಗಳು ಈ ಕೆಲವರ ಸಂಬಂಧವಾದ ನಡೆನುಡಿಗಳ ವಿಶಿಷ್ಟಸಂದರ್ಭಗಳನ್ನು ಗಮನಿಸಿದರೆ ಅದು ತಿಳಿಯುತ್ತದೆ.

ಒಂದು ಕಾಲದ ಸಾಮಾನ್ಯಮಧ್ಯಮವರ್ಗದ ಕುಟುಂಬವ್ಯವಸ್ಥೆ, ಪ್ರೀತಿದ್ವೇಷಗಳು, ವಾತ್ಸಲ್ಯ ಸಂಘರ್ಷಗಳು, ಹಠ ಹಿಡಿದು ವ್ಯಕ್ತಿ ತನ್ನ ನೆಲೆ ಕಂಡುಕೊಳ್ಳುವ ಹೋರಾಟ ಹಾರಾಟಗಳು ಎಲ್ಲ ಇಲ್ಲಿ ಕೇದಗೆಯ ದಿಂಡು ಎಸಳು ಬಿರಿದು ಬಿಚ್ಚಿಕೊಳ್ಳುವಂತೆ ಮುದ್ರಣದ ಪುಟಗಳಲ್ಲಿ ತೆರೆದುಕೊಳ್ಳುತ್ತ ಹೋಗುತ್ತವೆ. ಹಾಗಾಗಿ ಈ ಆತ್ಮವೃತ್ತಾಂತವು ಎಷ್ಟೇ ಆನುಷಂಗಿಕ, ಸಂಕ್ಷಿಪ್ತ, ಅಸಮಗ್ರ ಎಂದರೂ ಮುದ್ರಿತವಾಗಿರುವ ಪುಟಗಳು ಮುಂದುಮುಂದಿನ ಪೀಳಿಗೆಗಳಿಗೆ ಜೀವನಪಾಠದ ಪುಟಗಳೆಂದೇ ಹೇಳುವಂತಿವೆ. ಆಚಾರ್ಯರು ಕೂಡ ಒಂದೊಂದೂ ಸನ್ನಿವೇಶವನ್ನು ಕುರಿತು ಬರೆಯುವಾಗ, ವ್ಯಕ್ತಿಗಳ ನಡೆನುಡಿಗಳನ್ನು ಕುರಿತು ಪ್ರಸ್ತಾಪಿಸುವಾಗ ಒಂದು ನಿರ್ಲಿಪ್ತಭಾವದಲ್ಲಿ, ಸಾಕ್ಷಿಪ್ರಜ್ಞೆಯಿಂದ ಅವುಗಳ ಬಗೆಗೆ ತಮ್ಮದೇ ಉಪಸಂಹಾರದ ಟಿಪ್ಪಣಿಯನ್ನೋ ವಾಕ್ಯವನ್ನೋ ಬರೆಯುವುದನ್ನು ಮರೆಯುವುದಿಲ್ಲ.

ಆಚಾರ್ಯರು ಸ್ವಾಭಿಮಾನಿಗಳು, ಹಠವಾದಿಗಳು, ಕೋಪಿಷ್ಠರು, ಕಠಿನೋಕ್ತಿಯ ಕೆಣಕುಗಾರರು ಎನ್ನುವುದನ್ನು ಎತ್ತಿ ತೋರಿಸುವ ಅನೇಕ ಸಂದರ್ಭಗಳು ಈ ಸ್ಮೃತಿಚಿತ್ರಮಾಲಿಕೆಯಲ್ಲಿ ಬಂದಿವೆ. ಅವನ್ನು ಮುಚ್ಚುಮರೆ ಮಾಡದೆ ಅವರೇ ಸಂದರ್ಭ ಬಂದಾಗಲೆಲ್ಲ ಹೇಳಿಕೊಂಡಿದ್ದಾರೆ. ತಮ್ಮ ಅಪ್ರಿಯವಾದ ಈ ವಿಲಕ್ಷಣ ಪ್ರಕೃತಿಗೆ ಅವರಿಗೆ ಬೇಸರವೂ ಇದೆ, ಖೇದವೂ ಇದೆ. ಕೆಲವು ಕಡೆ ತಪ್ಪೊಪ್ಪಿಗೆಯೂ ಇದೆ. ಜೊತೆಗೆ ತಮ್ಮ ಪ್ರಾಮಾಣಿಕತೆ, ನ್ಯಾಯನಿಷ್ಠುರತೆ, ನಿರ್ದಾಕ್ಷಿಣ್ಯ, ಶಿಸ್ತುಪಾಲನೆ, ಕಾರ್ಯನಿಷ್ಠೆಗಳ ವಿಷಯದಲ್ಲಿ ಹೆಮ್ಮೆಯೂ ಇದೆ. 'ಕೊನೆಯರಿಕೆ'ಯ ಭಾಗದಲ್ಲಿ ಅವರು ಬರೆದಿರುವ ಈ ಮಾತುಗಳನ್ನು ನೋಡಿ: "ನನ್ನ ಎಪ್ಪತ್ತು ವರ್ಷದ ನಿಡುಬಾಳಿನ ಹಿನ್ನೋಟದ ಕೆಲವು ಗೆರೆಗಳನ್ನು ಮಾತ್ರ ಎಳೆದಿದ್ದೇನೆ. ನನ್ನ ಸ್ವಭಾವದಂತೆಯೇ ಎಷ್ಟೋ ಗೆರೆಗಳು ಸೊಟ್ಟಾಪಟ್ಟೆ ಇವೆ, ನಿಜ. ಆದರೆ ಎಲ್ಲ ಗೆರೆಗಳೂ ಸಾಚ; ಸೋಗಿನದಂತೂ ಇಲ್ಲ ಎನ್ನುವುದೆ ನನ್ನ ತೃಪ್ತಿ. ನನ್ನ ಯಾವುದೇ ನಡವಳಿಕೆಯ ಬಗ್ಗೆ ನಾನು ಪಶ್ಚಾತ್ತಾಪಪಡಬೇಕಾಗಿಲ್ಲ. ತಿಳಿದೂ ತಿಳಿದೂ ಯಾವ ತಪ್ಪನ್ನೂ ಮಾಡಿಲ್ಲ. ಯಾರಿಗೂ ಅನ್ಯಾಯ ಮಾಡಿಲ್ಲ, ಯಾವುದಕ್ಕೂ ಅಪಚಾರ ಮಾಡಿಲ್ಲ ಎಂದುಕೊಂಡಿದ್ದೇನೆ. ದೈವಾನುಗ್ರಹದಿಂದ ತಕ್ಕಮಟ್ಟಿನ ಸಾರ್ಥಕ ಜೀವನ ನಡೆಸಿದ್ದೇನೆಂಬ ನೆಮ್ಮದಿ ನನಗಿದೆ. ಆ ನೆಮ್ಮದಿಯೆ ಸಾಕು, ನನಗೆ. ಬಾಳು ಇನ್ನೂ ಹಸನಾಗಿ ಹದನಾಗಬಹುದಿತ್ತೇನೊ ದೇವರೆ ಬಲ್ಲ. ನನ್ನ ಲೌಕಿಕ ವ್ಯವಹಾರದಲ್ಲಿ ಎಷ್ಟೋ ಸಂದರ್ಭದಲ್ಲಿ ನನ್ನ ಬಾಹ್ಯವರ್ತನೆ ಇನ್ನೂ ಹೆಚ್ಚು ಸೌಜನ್ಯದಿಂದ ಕೂಡಿ ಸೌಮ್ಯವಾಗಿರಬಹುದಿತ್ತೇನೊ ! ಈಗ ಚಿಂತಿಸಿ ಫಲವಿಲ್ಲ ಹತ್ತಿರದಿಂದ ಆಚಾರ್ಯರನ್ನು ಬಲ್ಲವರು ಈ ಮಾತುಗಳನ್ನು ಗರ್ವದ ಮಾತುಗಳೆಂದು ಖಂಡಿತ ತಿಳಿಯಲಾರರು.

ಒಂದು ಸುಮನೋಹರ, ನಿರರ್ಗಳ, ವೀರ್ಯವತ್ತಾದ ಗದ್ಯದಲ್ಲಿ ಆಚಾರ್ಯರು ತಮ್ಮ ಕಥನವನ್ನು ಸಾದ್ಯಂತವಾಗಿ ನಿರ್ವಹಿಸಿದ್ದಾರೆ. ಅವರ ಭಾಷಾಶೈಲಿ ಅವರಿಗೆ ಮಾತ್ರ ಸಾಧ್ಯವಾದ್ದು. ಅದರ ವಿಲಾಸ ವೈಖರಿಗಳನ್ನು ಓದಿಯೇ ತಿಳಿಯಬೇಕು. ಅಚ್ಚಗನ್ನಡದ ನುಡಿನಿರಿಗೆ ಇಲ್ಲಿಯ ದೇಶ್ಯಶಬ್ದಗಳಲ್ಲಿ, ಸಮಾಸಗಳಲ್ಲಿ, ಕೃನ್ನಾಮಗಳಲ್ಲಿ, ಹೊಸದಾಗಿಯೇ ರೂಢಿಸಿದ ಮಾತುಗಳಲ್ಲಿ ಅಪ್ರಯತ್ನವಾಗಿ ಹೆಣೆದುಕೊಂಡು, ಒಂದು ಹೊಸಬಗೆಯ ಕನ್ನಡ ಮಾತುಗಾರಿಕೆಯ ಬಿಗಿ ಬಿಂಕಗಳನ್ನು ಪ್ರಕಟಿಸಿದೆ: ದಿಟವಾಗಿ ಸಾಧಿಸಿದೆ ಎನ್ನಬಹುದು. ಆಚಾರ್ಯರ ಕನ್ನಡ ಕಟ್ಟುವ ಸೇವೆಯಲ್ಲಿ ಈ ವಿಶಿಷ್ಟ ವಿನೂತನಶೈಲಿಗೂ ತಪ್ಪದೆ ಸ್ಥಾನವುಂಟು. ಚಿರಸ್ಮರಣೆ ಎಂಬ ಅರ್ಥದಲ್ಲಿ ಅವರು ಟಂಕಿಸಿರುವ, 'ನಂದಾದೀಪ' ಎಂಬ ಶಬ್ದಕ್ಕೆ ಸದೃಶವಾದ 'ನಂದಾನೆನಪು ಎಂಬ ಮಾತು ಈಗೀಗ ಅವರ ಶಿಷ್ಯರ ಮೂಲಕ ರೂಢಿಗೆ ಬರುತ್ತಿದೆ ಎನ್ನುವುದು ಹೃದ್ಯವಾದ ಸಂಗತಿ.

ಈಗ ರಾಘವಾಚಾರ್ಯರ ಕನ್ನಡ ಬರೆವಣಿಗೆಯ ಸಾಮಾನ್ಯ ಅಥವಾ ವಿಶಿಷ್ಟ ಎಂದು ಹೇಳಬಹುದಾದ ಸ್ವರೂಪದಲ್ಲಿ ಕನ್ನಡ ಮಾತುಗಳ ವರಸೆ ಹೇಗಿರಬಹುದು ಎಂದು ತಿಳಿಯುವ ಪ್ರಯತ್ನವನ್ನು ಇಲ್ಲಿ ಸ್ವಲ್ಪ ಮಾಡಬಹುದಾಗಿದೆ. ಇದಕ್ಕೆ ಭಾಷೆಯ ವಿಚಾರದಲ್ಲಿ ಅವರು ಆಗಿಂದಾಗ್ಗೆ ಬರೆದಿರುವ ಕೆಲವು ಲೇಖನಗಳಲ್ಲಿಯೂ ಬೇಕಾದ ಹಾಗೆ ಹೊಳಹುಗಳುಂಟು. ಮಾದರಿಯಾಗಿರುವ ಶೈಲಿಯೂ ಉಂಟು. ಕಾವ್ಯದ ಭಾಷೆಗೆ ಪ್ರತ್ಯೇಕವಾದೊಂದು ನುಡಿಕಾರವುಂಟೆಂಬ ಕಾರಣದಿಂದ ಅವರ ನಾಟಕಗಳನ್ನು ಹೊರತುಪಡಿಸಿ, ಆತ್ಮವೃತ್ತವನ್ನು

ಒಳಕೊಂಡು ಅವರ ಸುಮಾರು ಎಲ್ಲಾ ಗದ್ಯಲೇಖನಗಳನ್ನೂ ಸಂಕಲಿಸಿರುವ 'ನಂದಾನೆನಪು'ವನ್ನು ನೋಡಬಹುದಾಗಿದೆ.

ಕ.ವೆಂ. ರಾಘವಾಚಾರ್ಯರ ಬರಹಗಳ ಭಾಷೆ, ವಿಶೇಷವಾಗಿ ಗದ್ಯದಲ್ಲಿರುವ ಬರಹಗಳ ಭಾಷೆ, ಒಂದು ವಿಶಿಷ್ಟಶೈಲಿಯ ಮುದ್ರೆಯಿಂದ ಕೂಡಿ ಸೊಗಸುತ್ತದೆ. ಆ ಮುದ್ರೆ ಶಿಲಾಭಿತ್ತಿಯ ಮೇಲೆ ಎದ್ದು ಕಾಣುವ ಉಬ್ಬುಶಿಲ್ಪದ ಚೆಲುವಿನದು. ಈ ಶೈಲಿಯ ಶಿಲ್ಪ ಅವರಿಗೆ ಸಾಧ್ಯವಾದದ್ದು ಅವರ ಅಭಿಜಾತ ಕನ್ನಡಕಾವ್ಯಗಳ ವ್ಯಾಸಂಗ, ಸಂಸ್ಕೃತ ಗ್ರೀಕ್ ಮತ್ತು ತಮಿಳು ಭಾಷಾಸಾಹಿತ್ಯಗಳ ಪರಿಚಯ ಪರಿಶ್ರಮ ಪಾಂಡಿತ್ಯಗಳ ಸಾಧನೆಯಿಂದ ಎಂದು ತಿಳಿಯಬಹುದಾಗಿದೆ.

ಆಚಾರ್ಯರ ಭಾಷಾಶೈಲಿಯಲ್ಲಿ ಒಂದು ಪರಿಣತಿ, ಪ್ರೌಢಿಮೆ ಕಾಣುತ್ತದೆ; ಅದಕ್ಕೆ ಒಂದು ಬಿಗಿ ಬಿಕ್ಕಟ್ಟುಗಳುಂಟು, ಬಣ್ಣ ಬೆಡಗುಗಳುಂಟು. ಅವರು ಹಳಗನ್ನಡದ ರೂಢಿಯ ಮಾತುಗಳನ್ನು ಪುನರುಜ್ಜೀವನಗೊಳಿಸುತ್ತಾರೆ, ಹಳೆಯ ಹೊಸ ಮಾತುಗಳನ್ನು ಸಮಾಸಗಳಾಗಿ ಹೆಣೆದು ಬೇಕಾದ ಅರ್ಥಗಳನ್ನು ಹೊಸದಾಗಿಯೇ ಹೊರಡಿಸುತ್ತಾರೆ. ರೂಢಿಗತ ಕೃದಂತ ತದ್ಧಿತಾಂತ ನಾಮಪದಗಳ ಧಾಟಿಯಲ್ಲಿ ಹೊಸದಾಗಿಯೇ ಪದಗಳನ್ನು ಕಲ್ಪಿಸುತ್ತಾರೆ. ಜೋಡುನುಡಿಗಳನ್ನು ಲಯಬದ್ಧವಾಗುವಂತೆ, ಪ್ರಾಸಬದ್ಧವಾಗುವಂತೆ ಕೂಡಿಸಿ ಕಳೆಯೇರಿಸುತ್ತಾರೆ. ಈ ಪ್ರಮಾಣದಲ್ಲಿ ಅಲ್ಲವಾದರೂ ಇದೇ ತೆರನ ಚಮತ್ಕಾರವನ್ನು ಅವರು ವ್ಯಸ್ತ ಸಮಸ್ತರೂಪಗಳ ಸಂಸ್ಕೃತಶಬ್ದಗಳಲ್ಲಿಯೂ ತರಬಲ್ಲವರಾಗಿದ್ದಾರೆ.

ಮುಖ್ಯವಾಗಿ ಅಚ್ಚಕನ್ನಡದ ತನಿಮಾತುಗಳು, ಇನಿಮಾತುಗಳು ಅವರಿಗೆ ಬಹು ಪ್ರಿಯವಾದುವು. ಅವುಗಳನ್ನೇ ಹೆಚ್ಚು ಬಳಸುತ್ತಾರೆ, ಬೆಳಸುತ್ತಾರೆ; ಅವನ್ನು ಬಿಗಿಯಾಗಿ ಅಡಕಗೊಳಿಸಿ ಸಮಾಸಗಳನ್ನು ಕಲ್ಪಿಸುತ್ತಾರೆ, ಕಟ್ಟುತ್ತಾರೆ. ಹೀಗೆ ಹೂಡಿದವೂ ಹೊಸೆದವೂ ಆದ ಶಬ್ದಪ್ರಪಂಚ ಕೆಲಮಟ್ಟಿಗೆ ಕೃತಕ, ವಿಜೃಂಭಿತ ಎಂಬುದಾಗಿ ಕಂಡರೂ ಅದಕ್ಕೊಂದು ಹೊಸತನ, ಹೊಸಶಕ್ತಿ ಕೂಡಿದಾಗ ಅದು ಚೆಲ್ಲುವ ಪ್ರಖರವಾದ ಅರ್ಥಪ್ರಭೆ ಬೆರಗು ಹುಟ್ಟಿಸುವಂತೆ ಕಣ್ಣೆದುರು ಕಟ್ಟಿ ನಿಲ್ಲುತ್ತದೆ, ಮನಸ್ಸಿನ ಆಳವನ್ನು ತುಂಬಿಕೊಳ್ಳುತ್ತದೆ. ಇದು ಎಲ್ಲರಿಗೂ ಸಾಧ್ಯವಾಗುವ ಸಾಧನವಲ್ಲ. ಕನ್ನಡ ಶಬ್ದಕೋಶವನ್ನು ತುಂಬುವ, ಶಬ್ದಶಕ್ತಿಯನ್ನು ಬೆಳಸುವ ಈ ಪ್ರಯತ್ನದ ಹಿಂದೆ ಅವರಿಗಿರುವ ವ್ಯಕ್ತಿಗತ ದೇಸಿಯ ನಿಷ್ಠೆ ಒಂದು ಕಾರಣವಾದರೆ, ಅವರು ಇಂಗ್ಲಿಷ್-ಕನ್ನಡ ನಿಘಂಟುಕಛೇರಿಯಲ್ಲಿ ಪಡೆದ ಅನುಭವವನ್ನು ಇನ್ನೊಂದು ಕಾರಣವೆನ್ನಬಹುದು. ದೇಸಿಯನ್ನೇ ಮೆರೆಸುವ ತಮಿಳು ಭಾಷೆ ಸಾಹಿತ್ಯಗಳ ಪರಿಚಯ ಪಾಂಡಿತ್ಯಗಳು ಕೂಡ ತಮ್ಮ ಪ್ರಭಾವ ಬೀರಿರಬಹುದು. ಅರ್ಥಗ್ರಹಣ ಮತ್ತು ಪ್ರತಿಪದಸೂಚನೆಗಳಲ್ಲಿ ಅವರ ನಿಶಿತವಾದ ಬುದ್ಧಿ ನಿರಂತರವಾಗಿ ವ್ಯವಸಾಯಿಯಾಗಿರುತ್ತಿದ್ದುದರಿಂದ ಇಲ್ಲಿ ಅದೂ ಕೆಲಸಕ್ಕೆ ಬಂದಿರುವುದು ಸಾಧ್ಯ. ತಮ್ಮ ನೆಚ್ಚಿನ ಗುರುಗಳು ಶ್ರೀಯವರ ಮೇಲ್ಪಂಕ್ತಿ ಹಿಡಿದು ಅವರು ನಡೆದರು. ಶ್ರೀಯವರು ಆಡುಮಾತಿನ ಸರಳವಾದ ಕನ್ನಡಕ್ಕೆ ಮಣೆಹಾಕಿದರು; ಇವರು ಪ್ರಾಚೀನ ಕನ್ನಡ ಕಾವ್ಯಭಾಷೆಯ ಬಿಗಿಯಾದ ದೇಸಿಗೆ ಮನ್ನಣೆಕೊಟ್ಟರು, ಮಣೆಯಿಟ್ಟರು.

**'ನಂದಾನೆನಪು'** ಸಂಕಲನದಿಂದ ಕೆಲವು ಉದಾಹರಣೆಗಳು:

೧. ನಾಮಪದ ರಚನೆಯ ವಿವಿಧರೂಪಗಳು :

ನೆತ್ತರ ನಂಟು (೧೪), ಪೋಟಿ (೨೯), ಮಾನವೀಕರಣ (೪೧), ಮಾತ್ರಾರ್ಜಿತ (೪೪), ಮುಂಬರಿವು (೪೬), ಅಣಿ (೧೬೮), ಬೃಹಚ್ಛೈಲಿ (೧೭೧), ತೀರ್ಪಿಗ (೧೭೭), ಕಣ (೧೭೯) ಸುಮಿತಿ (೧೯೪), ನೇರ್ಪು (೨೦೨), ಮಡದಿತನ (೨೧೩), ಬಿತ್ತಿಗ (೨೧೯), ನೆರತೆ (೨೨೩), ಕಣಿಯ (೨೩೩), ಮಡಿವು (೨೩೩), ಮುಗಿವು (೨೪೨), ಒಳ್ಪು (೨೫೫), ಮುಡಿ (೨೫೬), ಪಿಡುಗು (೨೫೬), ಉಜ್ಜಿಗೆ, ತೊಳೆತ, ಪಳಕ (೨೬೫), ನೇಸರ ಮುಂದಿನ ನೆಯ್ಯುತ್ತಿ (೨೭೮)

೨. ಸ್ವತಂತ್ರ ಹಾಗೂ ನಾಮಧಾತುಮೂಲವಾದ ಕ್ರಿಯಾರೂಪಗಳು :

ಕುರಿಯುತ್ತಿರು (೧೮), ಅನುಲಿಪಿಸು (೨೩), ತೊದಳು (೨೭), ಎಳೆ ಬಿಡು (೪೬), ಅಡಕಿಸು (೯೬), ಬೆರಗು ನಿಲ್ಲು (೧೧೦), ಆಳಗಾಣು (೧೩೬). ನೇರಗೈ (೨೧೪), ಹೆಕ್ಕಳಿಸಿ ನುಡಿ (೨೧೫), ಏವಗೊಳ್ಳು (೨೧೮), ಎದೆನಾಟು (೨೩೭), ಒಳಗುದಿಗೊಳ್ಳು (೨೩೯), ಕಟ್ಟಳೆಯಿಡು (೨೩೯), ಒಕ್ಕೈಯಾಗಿ ನಿಲ್ಲು (೨೪೨), ಬಲುಪಟ್ಟಾಗಿ ಹಿಡಿ (೨೪೪), ಹಿಮ್ಮೊಗರಾಗು (೨೫೨), ಸಗ್ಗು (೨೫೬), ಕೊಲೆಪಡು (೩೦೬)

೩. ಸಮಾಸಸಂಘಟನೆ:

ನುಡಿಕಟ್ಟಡ (೧), ಕಾಪಾಟ (೨), ಒತ್ತುಸಿರು (೬), ಕುಂಟುದಾರಿ (೨), ನುಡಿಬಳಗ (೮), ನುಡಿನಂಟು (೧೦), ದಾದಿನುಡಿ (೧೪), ನುಡಿಮೋಸ (೧೭), ಎಡೆಮಾರು (ಕ್ರಿ.ನಾ. ೨೭), ನಿಡುಗಾಲ (೩೯), ಹೆರನುಡಿ, ಕಾಡಟ್ಟು (೪೯), ಪ್ರತಿಷ್ಠಾಸಂಸ್ಥೆ (೫೧), ತವರುನಾಡು (೫೫), ಕೂದಲುಸೀಳಿಕೆ (೫೯), ಅರಗುವರಿ (೬೧), ಹಿರಿಯೆಡೆ (೬೭), ಮರುಗು (೮೦), ನಿಡುಬಾಳು (೮೧), ಕಿರಿಯಳತೆ (೮೧), ಬೆರಗುವರಿಸೆ (೮೨), ಬಿರುಗಂಡು (೮೫), ಮುನ್ನಿರುಳು (೮೫), ಕಟುವಿಶೇಷಣ (೯೨), ಒಳಕೂಗು (೯೩), ಮುನ್‌ಸುಳಿವು (೯೪), ರುದ್ರಮರಣ (೯೪), ಕಡಲಾಳು, ಮುಸುಕುಮಂಜು, ಹಿಂಬೆಳಕು, ನೇಸರಂಗಳ (೧೧೦), ಮುದುಗೂನ (೧೧೩), ಅಡಕಪಟ್ಟಿ (೧೧೭), ಕಡೆನೆನಹು (೧೩೪), ಕಿಗ್ಗೋಣೆ (೧೩೫), ತವದೊಲವು (೧೩೯), ತನಿಗುಣ (೧೩೯), ಜನನುಡಿ (೧೩೯), ತವಚೆಲುಮೆ (೧೪೭), ಮುಮ್ಮೊದಲು (೧೪೭), ತನಿಕೊಡುಗೆ (೧೫೨), ಉಪಕ್ರಮಭಾಷಣ (೧೬೫), ಮುಂಗಣ (೧೬೭), ಅಡಿನೆಲೆ (೧೬೮), ಮೇಲಾಟ (೧೭೦), ಕೂರೆಡೆ (೧೭೭), ತನಿನಟ (೧೭೯), ಇಕ್ಕಡೆ (೧೮೦), ದೇವವೇದಿಕೆ, ತಿರುಗಟ್ಟಣೆ (೧೮೧), ತುದಿನೆಲೆ (೧೮೫), ಮೀಸಲುಪಟ್ಟಣ (೧೯೬), ತೇಪೆಪಾಠ (೧೯೯), ಇಣಿಕುಗಂಡಿ (೨೦೪), ಸಿಂಹಾಜಿನ (೨೦೭), ಉರಿಕೊಳ್ಳಿ (೨೧೧), ಹಿಮ್ಮರಳಿಕೆ (೨೧೩), ವಿಜಯಪಾದ (೨೧೪), ಸೇಡುಮಾರಿ, ಬೆಂಕಿಸುದ್ದಿ (೨೧೬), ಎಸಳುಮಗು (೨೨೧), ಸ್ವೀತಪಾದ, ಊದಡಿ (೨೨೧), ನೆತ್ತಿಹೊತ್ತು (೨೨೩), ಮುನ್ನುಡಿತ (೨೩೩), ಹಲಮಡಿ (೨೬೬), ತನಿಹಿರಿಮೆ (೨೩೯), ಹೆರನೆಲ (೨೫೧), ಸರಿಸಾಹಸ (೨೫೧), ಕಲ್ಲರೆ, ನಡುಗಂಬ (೨೫೬), ಸರಿಯಳತೆ (೨೫೫), ಹೆಸರೊಳು (೨೫೮), ಅಡುವಣಿ (೨೬೬), ವಿದ್ಯುದ್ ಬೀಸಣಿಗೆ (೨೬೭),

ತೆರವುಪಟ್ಟಿ (೨೬೮), ಬಿರುಮುಳ್ಳು (೨೬೮), ಹಳಸಲೊಲುಮೆ (೨೨), ಇಮ್ಮೊಗ (೨೭೬), ಬಿರಿಹೊಟ್ಟೆ (೨೭೯), ಸಿರಿಬಾಳು (೨೮೨), ಕಂದುಬೆಳಕು (೨೮೫), ಕನ್ನೆಗೋಲು (೩೦೨), ನೆರಳುನೆನಪು (೩೧೧), ಕುಸಿಮುಪ್ಪು (೩೩೧), ಮಂದಗಿವಿ(೩೧೮), ಮೆಟ್ಟೋಲೆ (೪೫), ಅಂಕಸಂಕಲನ (೪೧೪).

೪. ಜೋಡುನುಡಿಗಳು

ಹೆಣ್ಣುನುಡಿ - ಗಂಡುನುಡಿ (೪೯), ಲಘುಮನಸ್ಸು - ಹಗುರಮಾತು (೫೯), ಕಾಮಕೆರಳಿಕೆ - ಕಾಮತೀರಿಕೆ (೮೫), ಪಟ್ಟದರಸಿ - ಪ್ರೇಮದರಸಿ (೮೭), ಮನೆಮಡದಿ - ಒಲವಿನೊಡತಿ (೮೮), ಅಳಲಪಾಡು - ಕೊರಗುಕಥೆ (೧೦೨), ಎಲೆಮರೆಯ ಹೂವು - ಹೊಗೆಮರೆಯ ಕಿಡಿ (೧೩೫), ನಾಲಗೆಯಾಟ - ಕೈಯೋಟ (೧೩೯), ಮೆಲ್ಲೇಟು - ಮೆಲುಮುಟ್ಟು (೧೪೦), ಹೋಲಿಕೆ - ಮಾರಿಕೆ (೧೪೨), ತಾಕದ ತಳ - ಮುಟ್ಟದ ಮುಗಿಲು - ಹಾರದ ಹರವು (೧೪೪), ಬಿಳಲು - ಬಂದಳಿಕೆ (೧೫೪), ಬಲಮುರಿ - ಎಡಮುರಿ (೧೬೩), ತಿರುಳು - ಹುರುಳು (೧೬೬), ಮುಕ್ಕೂಟನಾಟಕ - ನಾಲ್ಕೂಟನಾಟಕ (೧೬೯), ಹುರುಳು - ತಿರುಳು (೧೭೧), ಕೆಚ್ಚು - ನೆಚ್ಚು, ಹೆಣಗು - ಹೋರು, ಅಳಲು - ಕೊರಗು, ಬೀಳು - ಮುರಿತ (೧೯೩), ಇನಿಗೊರಲು - ಹಗುರಡಿ (೨೦೦), ಒಳನುಡಿ - ಹೊರಕಟ್ಟು (೨೩೯), ಬಿರುಸು - ಮೆಲುಪು (೨೪೧), ಮಾತಾಳಿ - ಕೆಲಸಿಗ (೨೪೭), ಹಳಿವು - ಹೊಗಳು (೨೫೫), ಅಲೆವೀಡಾರ - ನೆಲೆವೀಡಾರ (೨೬೩), ಬಿದಿರಂಡೆ - ನಾಮದುಂಡೆ (೨೭೮), ಕೆಂಗಾವು - ಬಿಳಿಗಾವು (೨೮೫).

ಕ.ವೆಂ. ರಾಘವಾಚಾರ್ಯರಿಗೆ ಈ ಹುರುಳುಗನ್ನಡದ ದೇಸಿಯನ್ನು ಒಲಿಯುವಂತೆ ಮಾಡಿದವರು ಶ್ರೀಯವರೆಂದೇ ತೋರುವುದು. ಆದರೆ ಅದು ಬೆಳೆದು ಬಲಿಯುವಂತೆ ನೋಡಿಕೊಂಡವರು ಅವರೇ, ಎಂದರೆ ಆಚಾರ್ಯರೇ ಅಲ್ಲದೆ ಬೇರೆ ಯಾರೂ ಅಲ್ಲ. ಬೊಂಬಾಯಿಯಲ್ಲಿ ಗೋವಿಂದ ಪೈ ಅವರ ಅಧ್ಯಕ್ಷತೆಯಲ್ಲಿ ನಡೆದ ೩೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರ ಅಪೇಕ್ಷೆಯಂತೆ ತಾವೂ ಮುಂಬಯಿಗೆ ತೆರಳಿದ್ದಲ್ಲದೆ, ಅದು ನಡೆದ ತರುಣದಲ್ಲೇ ಮೈಸೂರಿನಲ್ಲಿ ನಡೆದ ಸಾರ್ವಜನಿಕ ಸಾತ್ಕಾರಸಮಾರಂಭದಲ್ಲಿ ಅವರಿಗೆ ಒಪ್ಪಿಸಿದ ಬಿನ್ನವತ್ತಳೆಯನ್ನು ಅಚ್ಚಕನ್ನಡದಲ್ಲಿ ಸಿದ್ಧಪಡಿಸಿದವರೂ ಅದನ್ನು ಓದಿ ಅವರಿಗೆ ಒಪ್ಪಿಸಿದವರೂ ಆಚಾರ್ಯರೇ. ಆ ಹಿರಿಯರು “ಅಭಿನವ ಆಂಡಯ್ಯನ ಕೈಯಿಂದ ಇದನ್ನು ಒಪ್ಪಿಸಿಕೊಳ್ಳುತ್ತಿದ್ದೇನೆ” ಎಂದು ಹೇಳಿದ್ದಲ್ಲದೆ, ಅವರ ಕನ್ನಡ ನುಡಿಗಟ್ಟನ್ನೂ ಕನ್ನಡದ ಕೆಚ್ಚನ್ನೂ ಮೆಚ್ಚಿ ಸಂತೋಷಪಟ್ಟರು (೯-೫-೧೯೫೦).

## ೫. ಗ್ರೀಕ್‌ನಾಟಕಗಳ ಕನ್ನಡಭಾಷಾಂತರಗಳು

ಕ.ವೆಂ. ರಾಘವಾಚಾರ್ಯರು ತಮ್ಮ ಎಂ.ಎ., ಬಿ.ಟಿ. ಪರೀಕ್ಷೆಗಳನ್ನು ಮುಗಿಸಿಕೊಂಡು (೧೯೩೧, ೧೯೩೨) ಖಾಯಂ ಕೆಲಸದ ನಿರೀಕ್ಷೆಯಲ್ಲಿರುತ್ತಿರುವಾಗ, ಬಿಡುವಿನ ವೇಳೆ ಕಳೆಯಲೆಂದು ಬೆಂಗಳೂರಿನ ತಮಿಳು ಪಂಡಿತ

ಪಿ.ಎಂ. ಸೋಮಸುಂದರಂ ಅವರಲ್ಲಿ ತಮಿಳು ಕಲಿಯುತ್ತಿದ್ದ ಹಾಗೆಯೇ, ಗ್ರೀಕನ್ನೂ ಏಕೆ ಕಲಿಯಬಾರದು ಎಂದು ಮನಸ್ಸಿಗೆ ಒಂದು ಆಲೋಚನೆ ಸುಳಿಯಿತು. ಆಚಾರ್ಯ ಬಿ.ಎಂ. ಶ್ರೀ. ಅವರು ತಮ್ಮ ಒಂದು ಉಪನ್ಯಾಸದಲ್ಲಿ "ಗ್ರೀಕ್ ಕಲಿಯಲಿಲ್ಲವಲ್ಲಾ ಎಂಬ ಕೊರಗು ಈಗಲೂ ನನ್ನನ್ನು ಬಾಧಿಸುತ್ತಿದೆ" ಎಂದು ಹೇಳಿದ ಮಾತು ಇದಕ್ಕೆ ಮೀಟುಗೋಲಾಯಿತು. ಅಲ್ಲದೆ ತಮ್ಮ 'ಅಂತಿಗೊನೆ' ನಾಟಕದ ಮುನ್ನುಡಿಯಲ್ಲಿ (೨-೧೧-೧೯೩೮) "ನನ್ನನ್ನು ಗ್ರೀಕ್ ಕಲಿಯುವಂತೆ ಹಲವು ಬಗೆಯಲ್ಲಿ ಪ್ರೇರಿಸಿದವರು ನನ್ನ ಗುರುವರ್ಯರಾದ ಶ್ರೀಯವರು" ಎಂದು ನೇರವಾಗಿಯೇ ಆ ಪ್ರೇರಣೆಯನ್ನು ಸೂಚಿಸಿದ್ದಾರೆ.

ಪಾದ್ರಿಗಳು ಗ್ರೀಕ್ ಕಲಿತಿರುತ್ತಾರೆ ಎಂದು ತಿಳಿದಿದ್ದುದರಿಂದ, ೧೯೩೩ರಲ್ಲಿ ಒಂದು ದಿನ ಪಾದ್ರಿ ಎಸ್.ಜೆ. ಕಾಕ್ಸ್ ಎಂಬವರನ್ನು ಭೇಟಿಮಾಡಿ ತಮ್ಮ ಆಸೆಯನ್ನು ತಿಳಿಸಿದರು. ಅವರು ತಮಗೆ ನ್ಯೂ ಟೆಸ್ಟಮೆಂಟ್ ಗ್ರೀಕ್ ಚೆನ್ನಾಗಿ ತಿಳಿದಿರುವುದೆಂದೂ ಕ್ಲಾಸಿಕಲ್ ಗ್ರೀಕ್ ಬಳಕೆ ತಪ್ಪಿಹೋಗಿದೆಯೆಂದೂ ತಿಳಿಸಿದರಾದರೂ, ಅಂದೇ ಗ್ರೀಕ್ ಅಕ್ಷರಾಭ್ಯಾಸವನ್ನು ಅವರಿಗೆ ಮಾಡಿಸಿ, ದಂಡುಪ್ರದೇಶದಲ್ಲಿದ್ದ ಯುನೈಟೆಡ್ ತಿಯೊಲಾಜಿಕಲ್ ಕಾಲೇಜಿನ ಗ್ರೀಕ್ ಅಧ್ಯಾಪಕರಾದ ಎಚ್.ಕೆ. ಮೌಲ್ಟನ್ ಅವರಲ್ಲಿಗೆ ಪರಿಚಯಪತ್ರದೊಂದಿಗೆ ಕಳಿಸಿಕೊಟ್ಟರು. ಮೌಲ್ಟನ್ ಅವರು ಪಾಠ ಹೇಳಲು ಒಪ್ಪಿದರು; ಅಭ್ಯಾಸದ ಎರಡು ಪುಸ್ತಕಗಳನ್ನು ಸೂಚಿಸಿ, ಅವನ್ನು ಇಂಗ್ಲೆಂಡಿನಿಂದ ತರಿಸಿಕೊಳ್ಳುವಂತೆಯೂ ಪುಸ್ತಕಗಳು ಬಂದ ಮೇಲೆ ತಮ್ಮನ್ನು ಬಂದು ಕಾಣುವಂತೆಯೂ ತಿಳಿಸಿದರು. ಆಚಾರ್ಯರು ಹಾಗೆಯೇ ಪುಸ್ತಕಗಳನ್ನು ತರಿಸಿಕೊಂಡು ಮೌಲ್ಟನ್ನರನ್ನು ಹೋಗಿ ಕಂಡರು. ಅಂದಿನಿಂದಲೇ ಗ್ರೀಕ್‌ಪಾಠ ಮೊದಲಾಯಿತು, ಅವಿಚ್ಛಿನ್ನವಾಗಿ ಸ್ವಲ್ಪ ಕಾಲ ಮುಂದುವರಿಯಿತು. ಇಷ್ಟರಲ್ಲಿ ಅವರು ತಮ್ಮ ತಾಯಿನಾಡು ಇಂಗ್ಲೆಂಡಿಗೆ ತೆರಳಬೇಕಾಗಿ ಬಂದಾಗ, ಅವರ ಕೋರಿಕೆಯ ಮೇಲೆ ಯು.ಟಿ.ಸಿ.ಯ ಪ್ರಿನ್ಸಿಪಾಲ್ ಎಂ.ಎಚ್. ಹ್ಯಾರಿಸನ್ ಒಂದು ವರ್ಷ ಕಾಲ ತಾವು ಪಾಠಗಳನ್ನು ಮುಂದುವರಿಸಿ ಸಹಾಯವಾದರು. ಮುಖ್ಯ ಅಧ್ಯಾಪಕರಾಗಿದ್ದ ಮೌಲ್ಟನ್ ಅವರು ತಾವು ಇಂಗ್ಲೆಂಡಿಗೆ ತೆರಳಿದ ಮೇಲೆ ಕೂಡ ಹಲವು ವರ್ಷ ಆಚಾರ್ಯರ ಅಗತ್ಯಗಳಿಗೆ ಸ್ಪಂದಿಸಿ ಸಲಹೆ ಸಹಾಯಗಳನ್ನು ಮಾಡುತ್ತಲೇ ಇದ್ದರು ಎನ್ನುವುದನ್ನು ಆಚಾರ್ಯರು ತಮ್ಮ ಭಾಷಾಂತರಗಳಲ್ಲಿ ಕೃತಜ್ಞತೆಯಿಂದ ನೆನೆದಿದ್ದಾರೆ.

೧೯೩೩ರ ಬೇಸಗೆಯಲ್ಲಿ ಆರಂಭವಾದ ಗ್ರೀಕ್ ಭಾಷಾಭ್ಯಾಸದ ಮೊದಲ ಪರಿಣತಫಲವೆಂದರೆ 'ಅಂತಿಗೊನೆ' ನಾಟಕದ ಪ್ರಕಟನೆ (೧೯೩೮). ಅದರ ಅನಂತರದಲ್ಲಿ ತಮ್ಮ ಗ್ರೀಕ್ ಅಭ್ಯಾಸ ಕಾರಣಾಂತರಗಳಿಂದ ಕುಂಟುತ್ತ ನಡೆಯಿತೆಂದು ಅವರೇ ಹೇಳಿದ್ದಾರೆ. ಅರಿಸ್ಟಾಟಲನ ಕಾವ್ಯಮೀಮಾಂಸೆಯ ಅನುವಾದವನ್ನು ೧೯೪೨ರ ಹೊತ್ತಿಗೆ ಮಾಡಿ ಮುಗಿಸಿದ್ದರು. ಆದರೆ ಬೇರೆ ಬೇರೆ ಕಾರಣಗಳಿಂದ ಹಸ್ತಪ್ರತಿಯನ್ನು ಮುದ್ರಣಕ್ಕೆ ಕೊಡಲು ಅವರು ಉತ್ಸಾಹಿಸಲಿಲ್ಲ.

ಇನ್ನೂ ಈಚೆಗೆ, ೧೯೬೨ರಲ್ಲಿ 'ಅಗಮೆಮ್ನೋನ್' ನಾಟಕವನ್ನೂ ೧೯೬೩ರಲ್ಲಿ "ಕಪ್ಪೆಗಳು' ನಾಟಕವನ್ನೂ ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಸಿದ್ಧಪಡಿಸಿದ್ದು, ತಮ್ಮ ಸ್ವಂತಕ್ಕಾಗಿ ಸಿದ್ಧಮಾಡಿಕೊಂಡಿದ್ದ 'ಒಯ್ದಿಪೌಸ್ ದೊರೆ'

ನಾಟಕವೂ ಸೇರಿದಂತೆ ಈ ಮೂರೂ ನಾಟಕಗಳನ್ನೂ ಸಾಹಿತ್ಯ ಅಕಾಡೆಮಿಯೇ ೧೯೬೫ರಲ್ಲಿ ಒಂದು ಸಂಯುಕ್ತಸಂಪುಟವಾಗಿ ಪ್ರಕಟಿಸಿತು. ನಾಟಕಗಳ ಅನುವಾದದ ಕೆಲಸವನ್ನು ಆಚಾರ್ಯರು ತಾವು ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿದ ಒಂದೆರಡು ವರ್ಷಗಳಲ್ಲಿಯೇ ಆರಂಭಿಸಿರಬೇಕೆಂದು ತೋರುವುದು. ಒಯ್ದಿಪೌಸ್ ಕೊಲೊನೊಸ್ಸಿನಲ್ಲಿ' ನಾಟಕದ ವ್ಯಾಸಂಗ ಅನುವಾದಕಾರ್ಯಗಳು ೧೯೬೩ ರಲ್ಲಿಯೇ ಮೊದಲಾಗಿದ್ದರೂ ಮುಗಿದದ್ದು ೧೯೬೬ರಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಿಂದ ಪ್ರಕಟವಾದ್ದು ೧೯೭೩ ರಷ್ಟು ಇನ್ನೂ ಈಚೆಗೆ.

ಸೋಫೊಕ್ಲೆಸ್ ರಚಿಸಿದ 'ಒಯ್ದಿಪೌಸ್ ದೊರೆ', ಒಯ್ದಿಪೌಸ್ ಕೊಲೊನೊಸ್ಸಿನಲ್ಲಿ' ಮತ್ತು 'ಅಂತಿಗೊನೆ' ಈ ಮೂರು ನಾಟಕಗಳನ್ನೂ ಅನುವಾದಿಸಿದ ಮೇಲೆ ಇದೇ ಕವಿಯ ಬಿಡಿನಾಟಕಗಳಲ್ಲಿ ಕೆಲವನ್ನು ಅನುವಾದಿಸಬೇಕೆಂದು ಆಲೋಚಿಸಿದರು. ಅದಕ್ಕೆ ಅವರು ಮೊದಲು ಆರಿಸಿದ್ದು 'ಏಲೆಕ್ತ್ರ' ನಾಟಕವನ್ನು, ಆದರೆ ಗ್ರೀಕ್ ಪಠ್ಯಕ್ಕಾಗಿ ಅವರು ಬಹಳ ವರ್ಷವೇ ಕಾಯಬೇಕಾಯಿತು. ಗ್ರೀಕ್ ವ್ಯಾಸಂಗಕ್ಕೆ ಆವಶ್ಯಕವಾದ ಸಾಹಿತ್ಯಸಾಮಗ್ರಿಯನ್ನು ಆಗಾಗ್ಗೆ ಒದಗಿಸುತ್ತ ಇದ್ದ ತಮ್ಮ ಹಿಂದಿನ ಗ್ರೀಕ್ ಗುರುಗಳು ಮೌಲ್ಟನ್ ಅವರಿಗೆ ಈ ಬಗ್ಗೆ ಪತ್ರ ಬರೆದರು. ಆಗ್ಗೆ ಇವರು ಬೆಂಗಳೂರಿನಲ್ಲಿಯೇ ಇದ್ದರೂ, ತಮ್ಮ ಅಳಿಯಂದಿರ ಮೂಲಕ ಒಂದು ಗ್ರೀಕ್ ಮೂಲದ ಪ್ರತಿಯನ್ನು ತರಿಸಿಕೊಟ್ಟರು. ಅನುವಾದ ಸಾಧ್ಯವಾಯಿತು. ಇದರ ಕೆಲಸ ಮುಗಿಯುತ್ತಿದ್ದಂತೆಯೇ ಅದೇ ಕವಿಯ 'ಫಿಲೊಕ್ತೇತೇಸ್' ನಾಟಕದ ಅನುವಾದವನ್ನು ಕೈಗೆತ್ತಿಕೊಂಡರು. ಈಗಲೂ ಇದರ ಗ್ರೀಕ್‌ಪಠ್ಯಕ್ಕಾಗಿ ಪರದಾಡಬೇಕಾಯಿತು. ಇಂಗ್ಲೆಂಡಿನ ಪ್ರಸಿದ್ಧ ಪುಸ್ತಕವ್ಯಾಪಾರಿಗಳಿಗೆ ಬರೆದರೂ ಪ್ರಯೋಜನವಾಗಲಿಲ್ಲ. ಸೆಂಟ್ರಲ್ ಕಾಲೇಜಿನ ಗ್ರಂಥಭಂಡಾರದಲ್ಲಿ ಸರ್ ರಿಚರ್ಡ್ ಜೆಬ್ ಸಂಪಾದಿಸಿದ ಗ್ರೀಕ್‌ಪಾಠದ ಪ್ರತಿ ಇದ್ದರೂ ಅದನ್ನು ಪರಾಮರ್ಶೆಗೆ ಮಾತ್ರ ಇಟ್ಟಿದ್ದು, ಹೊರಗೆ ಒಯ್ಯುವಂತಿರಲಿಲ್ಲ. ಹೀಗಾಗಿ, ತಮ್ಮಲ್ಲಿಯೇ ಇದ್ದ, ಪಠ್ಯ ಮಾತ್ರವೇ ಇದ್ದ, ಸಣ್ಣಕ್ಷರದ ೧ಲ೫೦ರ ಜೀರ್ಣಪ್ರತಿಯೊಂದನ್ನೇ ಇಟ್ಟುಕೊಂಡು ಅನುವಾದ ಕಾರ್ಯಕ್ಕೆ ತೊಡಗಿದರು. ಆದರೆ ಸ್ವಲ್ಪಕಾಲದಲ್ಲೇ, ಜಿ.ಎಸ್. ಶಿವರುದ್ರಪ್ಪನವರ ಪ್ರಯತ್ನದಿಂದ, ವಿಶೇಷಸಂದರ್ಭವೆಂದು ಸೆಂಟ್ರಲ್ ಕಾಲೇಜು ಗ್ರಂಥಭಂಡಾರದ ಅಧಿಕಾರಿಗಳು ಜೆಬ್ ಅವರ ಗ್ರೀಕ್‌ಪಠ್ಯವನ್ನು, ಅನುವಾದ ಪೀಠಿಕೆ ಟಿಪ್ಪಣಿಗಳು ಸಹಿತವಾಗಿ ಇದ್ದುದನ್ನು, ವಿಶ್ವಾಸದಿಂದ ಹೊರಗೆ ಕೊಡಲು ಒಪ್ಪಿದರು. ಅದರಿಂದ ಆಚಾರ್ಯರಿಗೆ ಬಹುವಾಗಿ ಸಹಾಯವಾಯಿತು. "ಇಂಗ್ಲಿಷ್ ಆಕರಗಳ ಸಹಾಯವನ್ನು ಅಪೇಕ್ಷಿಸದೆಯೆ, ಕನ್ನಡ ಅನುವಾದದಿಂದಲೆ ಅರ್ಥಸ್ವಾರಸ್ಯ ನಾಟಕಕಥಾವ್ಯಾಪ್ತಿ ಮೊದಲಾದುವನ್ನು ಗ್ರಹಿಸಿ ಅನುಭವಿಸುವುದಕ್ಕೆ ಬೇಕಾದ ಎಲ್ಲ ಸಹಾಯಸಾಮಗ್ರಿಯನ್ನೂ ಒದಗಿಸಲು ಆದಷ್ಟು ಪ್ರಯತ್ನಿಸಿದ್ದೇನೆ" ಎಂದು ಈ ನಾಟಕದ್ವಯದ ಅರಿಕೆಯ ಕೊನೆಗೆ ಅವರು ಹೇಳಿರುವುದು (೨೨-೮-೧೯೭೩) ಗಮನಾರ್ಹವಾಗಿದೆ. ಇದು ಮೈಸೂರಿನ ಉಷಾಸಾಹಿತ್ಯಮಾಲೆಯಿಂದ ೧೯೭೪ರಲ್ಲಿ ಹೊರಬಂದಿತು.

ಈಗ ರಾಘವಾಚಾರ್ಯರು ಗ್ರೀಕ್ ಮೂಲದಿಂದ ಭಾಷಾಂತರಿಸಿದ ನಾಟಕಗಳನ್ನು ಅವು ಪ್ರಕಟವಾದ ಅನುಕ್ರಮದಲ್ಲಿಯೇ ಸ್ವಲ್ಪಮಟ್ಟಿಗೆ ಇಲ್ಲಿ ಪರಿಚಯಮಾಡಿಕೊಳ್ಳಬಹುದಾಗಿದೆ:

**೧. ಸೊಫೋಕ್ಲೀಸ್ ಕವಿಯ 'ಅಂತಿಗೊನೆ' (Antigone) :** ಸತ್ತವನಿಗೆ ಸಂಸ್ಕಾರವೆಸಗುವುದು ಎಂಬ ದೈವದ ಕಟ್ಟಳೆ ಮತ್ತು ದೇಶದ್ರೋಹಿಗೆ ಶಿಕ್ಷೆ ವಿಧಿಸುವುದು ಎಂಬ ಮನುಷ್ಯಕಟ್ಟಳೆ, ಸದಿಚ್ಛಾಮೂಲವಾದ ವ್ಯಕ್ತಿಸ್ವಾತಂತ್ರ್ಯ ಮತ್ತು ನಿಷ್ಠುರವಾದ ರಾಜಶಾಸನ ಈ ತತ್ತ್ವಗಳಿಗೆ ನಡೆಯುವ ಸಂಘರ್ಷವನ್ನು ಮುಖ್ಯಪಾತ್ರಗಳಾದ ಅಂತಿಗೊನೆ, ಕ್ರಯೋನ್ ಇವರ ಮೂಲಕ ಚಿತ್ರಿಸಿದೆ. ಮೂಲನಿಷ್ಠೆಯ ಕನ್ನಡ ರುದ್ರನಾಟಕಗಳಲ್ಲಿ ಮೊತ್ತಮೊದಲನೆಯದಾದ ಈ ನಾಟಕವನ್ನು ಹಳಗನ್ನಡ ಭಾಷೆಯಲ್ಲಿ, ಮಾತ್ರಾಗಣಾತ್ಮಕ ಛಂದೋಬಂಧಗಳಲ್ಲಿ ಭಾಷಾಂತರಿಸಿದೆ.

**೨. ಅಯ್‌ಸ್ಖುಲೊಸ್ ಕವಿಯ 'ಅಗಮೆಮ್ನೋನ್" (Agamemnon) :** 'ಒರೆಸ್ಟೈಸ್' ನಾಟಕತ್ರಯದ ಪ್ರಥಮ ಖಂಡವಾದ ಈ ನಾಟಕದಲ್ಲಿ ತಂದೆ ಬಲಿಗೊಟ್ಟ ಮಗಳ ಸಾವಿನ ಸೇಡನ್ನು ತಾಯಿ ಗಂಡನ ಮೇಲೆ ತೀರಿಸುವ ಕ್ರೋಧಸಾಹಸದ ರುದ್ರಕಥೆ ಅದ್ಭುತವಾಗಿ ನಿರೂಪಿತವಾಗಿದೆ. ಅನೀತಿ ಅಕೃತ್ಯಗಳೂ ಕ್ರೌರ್ಯ ಔದ್ಧತ್ಯಗಳೂ ಕೊಲೆ ಹೊಲೆಗಳೂ ಪೂರ್ವಜರಿಂದ ಸಂತತಿಯಲ್ಲಿ ಬಂದವರ ತಲೆಗೆ ಅಂಟಿಬರುವುದೂ ಕೈಯ ಮೇಲೆಯೇ ಕೇಡಿನ ವಿಷಫಲವನ್ನು ಉಣಬಡಿಸುವುದೂ ಇಲ್ಲಿ ಮುಖ್ಯವಾಗಿ ಅಗಮೆಮ್ನೋನ್ ಮತ್ತು ಕುತೈಮ್ನೇಸ್ತ್ರ (ಕ್ಲಿಟಮ್ನೆಸ್ಟ್ರಾ) ಈ ಪಾತ್ರಗಳ ಮೂಲಕ, ಅವರ ಜಘನ್ಯ ರೌದ್ರಕೃತ್ಯಗಳ ಮೂಲಕ ಮನವರಿಕೆಯಾಗುತ್ತವೆ. ಭಾಷೆ ಹೊಸಗನ್ನಡ ಗ್ರಾಂಥಿಕಗದ್ಯದಲ್ಲಿದೆ.

**೩. ಸೊಫೋಕ್ಲೇಸ್ ಮಹಾಕವಿಯ ಒಯ್ದಿಪೌಸ್‌ದೊರೆ (Odipus the King) :** ಮರ್ತ್ಯಸಾಮಾನ್ಯರು ಎಷ್ಟು ವಿಧದಿಂದ ತಡೆಯಲು, ತಪ್ಪಿಸಲು ಯತ್ನಿಸಿದರೂ ದೈವೇಚ್ಛೆಯಾಗಿ, ವಿಧಿಯಿಚ್ಛೆಯಾಗಿ ನಡೆಯಲಿರುವ ದೇವವಾಣಿಗಳ ಆದೇಶವು ನಡೆದೇ ತೀರುವುದೆಂಬ ತತ್ತ್ವ ಇಲ್ಲಿಯದು. ಅರಿಯದೆ ತಂದೆಯನ್ನು ಕೊಂದು, ತಾಯನ್ನು ನೆರೆದು, ಹೊಲೆಸಂತಾನವನ್ನು ಪಡೆದು, ಆದ ಮಹಾಪಾತಕಕ್ಕಾಗಿ ತನಗೆ ತಾನೇ ದಾರುಣಪ್ರಾಯಶ್ಚಿತ್ತ ಮಾಡಿಕೊಂಡ, ಘನಮಹಿಮನಾದರೂ ಹತಭಾಗ್ಯನಾದ ಒಯ್ದಿಪೌಸ್ ದೊರೆಯ ಕರುಣಾಜನಕವಾದ ಕಥೆ ಈ ನಾಟಕದ ವಸ್ತು, ಭಾಷೆ ಹಳಗನ್ನಡ ನಡು - ಹೊಸಗನ್ನಡಗಳ ಮಿಶ್ರ ಪ್ರಯೋಗದಲ್ಲಿದೆ ; ವಿವಿಧ ಮಾತಾಛಂದಸುಗಳಲ್ಲಿರುವ ಮೇಳಗೀತಗಳು ಹೊರತು ನಾಟಕದ ಉಳಿದ ಭಾಗ ಸರಳರಗಳೆಯಲ್ಲಿದೆ.

**೪. ಅರಿಸ್ಟೋಫನೇಸ್ ಕವಿಯ ಕಪ್ಪೆಗಳು' (The Frogs) :** ನಾಟಕದ ತಿರುಳು ಸಾಹಿತ್ಯವಿಷಯಕವಾದ್ದು. ಅದರ ಗೀತಗಳಲ್ಲಿ ಉಕ್ಕಿ ಹರಿಯುವ ಉತ್ಕಟ ದೇಶಪ್ರೇಮವೇ ಮುಖ್ಯ ಕಾರಣವಾಗಿ ಅದು ಜನಮೆಚ್ಚಿಗೆ ಗಳಿಸಿತೆಂದು ಕೆಲವರು ವಿಮರ್ಶಕರ ಗ್ರಹಿಕೆ. ರುದ್ರನಾಟಕದ ಅಧಿದೇವತೆಯಾದ ದಿಯೊನೂಸೊಸ್ ತನ್ನ ನೆಚ್ಚಿನ ಕವಿ ಯೂರಿಪಿದೇಸಿನ ಮರಣಕ್ಕಾಗಿ ಶೋಕಿಸಿ, ಅವನನ್ನು ಅಧೋ ಲೋಕದಿಂದ ಮೇಲಕ್ಕೆ ಕರೆತರಲು ಹೋಗುತ್ತಾರೆ. ಅಲ್ಲಿ ಅನಿರೀಕ್ಷಿತವಾಗಿ ಯೂರಿಪಿಸ್ ಮತ್ತು ಅಯ್‌ಸ್ಖುಲೊಸರ ಪರಸ್ಪರ ಕಾವ್ಯಸಾಮರ್ಥ್ಯದ ನಿರ್ಣಯದಲ್ಲಿ ತೀರ್ಪುಗಾರನಾಗಬೇಕಾಗುತ್ತದೆ. ತೀರ್ಪು ಕೊಡುವುದು ಕಷ್ಟವಾಗಿ, ಕೊನೆಗೆ ತನಗೆ ಇಷ್ಟವಾದವನನ್ನು

ಆರಿಸಿಕೊಳ್ಳುತ್ತೇನೆಂದು ಹೇಳಿ ಅಯ್‌ಸ್ಸುಲೊಸ್ಸನ್ನು ಕರೆದುಕೊಂಡು ಬರುತ್ತಾನೆ. ಗೀತಗಳ ಭಾಗ ಮಾತ್ರಾಗಣದ ವಿವಿಧಬಂಧಗಳಲ್ಲಿದ್ದು, ಗದ್ಯದ ಭಾಗ ಹೊಸಗನ್ನಡ ಗದ್ಯದಲ್ಲಿದೆ.

**೫. ಸೊಫೋಕ್ಲೇಸ್ ಮಹಾಕವಿಯ ಒಯ್ದಿಪೌಸ್ ಕೊಲೊನೊಸ್ಸಿನಲ್ಲಿ (OdipuS at Colonus) :** ಒಯ್ದಿಪೌಸ್ ತನ್ನ ಕೊನೆಯ ದಿನಗಳನ್ನು ಥೀಬ್ಸ್‌ನಲ್ಲೇ ಕಳೆಯಲಿಚ್ಛಿಸಿದನಾದರೂ ದೊರೆ ಕ್ರಯೋನ್ ಅದಕ್ಕೆ ಅವಕಾಶ ಕೊಡಲಿಲ್ಲ. ಗಂಡುಮಕ್ಕಳ ಸಹಾಯವೂ ಸಿಕ್ಕಲಿಲ್ಲ. ಹೆಣ್ಣುಮಕ್ಕಳೊಂದಿಗೆ ಅಥೆನ್ಸ್ ಹತ್ತಿರದ ಕೊಲೊನೊಸ್ಸಿಗೆ ಬಂದು ಅಲ್ಲಿಯೇ ನೆಲೆನಿಂತ. ಮತ್ತೆ ಥೀಬ್‌ಗೆ ಒಯ್ದಿಪೌಸನ್ನು ಕರೆತರುವ ಕ್ರಯೋನ್ ಪ್ರಯತ್ನ ಫಲಿಸಲಿಲ್ಲ. ಅಥೆನ್ಸ್ ದೊರೆ ಥೆಸ್ಯೂಸ್ ಅವನನ್ನು ರಕ್ಷಿಸಿ, ಕ್ರಯೋನನ ಸೆರೆಯಿಂದ ಒಯ್ದಿಪೌಸನ ಹೆಣ್ಣುಮಕ್ಕಳು ಅಂತಿಗೊನೆ ಇಸ್ಮೇನೆಯರನ್ನು ಬಂಧಮುಕ್ತಗೊಳಿಸಿದನು. ತನ್ನ ವಿಚಾರಕ್ಕೆ ವಿಹಿತವಾಗಿ ನಡೆದುಕೊಳ್ಳದ ತನ್ನ ಗಂಡುಮಕ್ಕಳು ಪರಸ್ಪರವಾದ ಕಾದಾಟದಲ್ಲಿ ಹತರಾಗುವಂತೆ ಒಯ್ದಿಪೌಸ್ ಶಪಿಸಿದನು. ತನ್ನ ಅಂತಿಮದಿನ ಸನ್ನಿಹಿತವಾಗಿದೆಯೆಂದು ತಿಳಿದಾಗ, ಮಿತ್ರ ಥೆಸ್ಯೂಸ್‌ನನ್ನು ಕರೆಸಿ ತನ್ನ ಹೆಣ್ಣುಮಕ್ಕಳನ್ನು ಅವನ ರಕ್ಷಣೆಗೆ ಒಪ್ಪಿಸಿ ತಾನು ಯಾವುದೋ ನಿಗೂಢವಾದ ರೀತಿಯಲ್ಲಿ ತನ್ನ ಬದುಕಿಗೆ ಕೊನೆಯನ್ನು ಕಂಡನು. “ಅತ್ಯಂತ ದುಃಖಿಯಾದವನು ಮಾನವನಿಗೆ ಎಟುಕಬಹುದಾದ ಅತಿಶ್ರೇಷ್ಠತೆಯನ್ನೂ ಮೀರಿ ಲೋಕಾತೀತಪುರುಷನಾಗಬಹುದು, ದೇವತ್ವದ ಎಲ್ಲೆಯನ್ನೂ ಮುಟ್ಟಬಹುದು.” ಇದು ಈ ನಾಟಕದ ದರ್ಶನವೆಂದು ಹೇಳಬಹುದು. ತುಂಬ ದಾರುಣವಾದ ಸನ್ನಿವೇಶಗಳು ತುಂಬಿ ಸೂಸುವ ಈ ನಾಟಕ ಒಂದು ಸೊಬಗಿನ ಸೋನೆ; ಕೊರೆಯುವ ಹಿಮಪಾತ, ಸರಳರಗಳೆಯ ಧೀರಗಂಭೀರಗತಿಯಲ್ಲಿ ಇಲ್ಲಿಯ ಛಂದೋಬಂಧಗಳು ಲಲಿತವಾಗಿ, ಚೇತೋಹಾರಿಯಾಗಿ ಸಾಗುತ್ತವೆ.

**೬. ಸೊಫೋಕ್ಲೇಸ್‌ಮಹಾಕವಿಯ 'ಏಲೆಕ್ತ್ರ' (Electra)** : ಮಾನವೀಯವಾದ ತೀಕ್ಷ್ಣಭಾವಗಳಿಂದ ಕುದಿಗೊಂಡ ಒಂದು ಭಾಂಡ ಏಲೆಕ್ತ್ರ ನಾಟಕ, ಟ್ರಾಯ್ ಯುದ್ಧಕ್ಕೆ ಮುನ್ನ ಮಗಳನ್ನು ಬಲಿಗೊಟ್ಟ, ಪತಿಯ ಮೇಲೆ ಪತ್ನಿಯ ರೋಷ, ಯುದ್ಧದ ಬಳಿಕ ಅವನ ಕೊಲೆಗೆ ಉಪಪತಿಯ ಸಹಕಾರದೊಂದಿಗೆ ಅವನನ್ನು ಕೊಲ್ಲುವ ಸಂಚು, ಪತಿಯ ದಾರುಣವಾದ ಕೊಲೆ, ಮಗ ಪ್ರತೀಕಾರಕ್ಕೆ ಸಂಕಲ್ಪಿಸುವಂತೆ ಅಪೋಲೋ ದೇವತೆಯ ಪ್ರಚೋದನೆ, ತಂದೆಯ ಸಮಾಧಿಯಲ್ಲಿಗೆ ಸೋದರ ಬಂದಿರಬಹುದಾದ್ದನ್ನು ಗುರುತಿಸಿದ ಸೋದರಿಯೊಂದಿಗೆ ಸೋದರಿಯ ಸಮಾಗಮ, ಪಿತೃಘಾತಕರ ಮೇಲೆ ಸೇಡು ತೀರಿಸಿಕೊಳ್ಳುವ ಛಲ, ಛಲದ ಪೂರೈಕೆ - ಇವು ತೆರೆಯೆದ್ದು ತೆರೆಬಿದ್ದ ರೀತಿಯಲ್ಲಿ ಒಂದರ ಬಳಿಕ ಮತ್ತೊಂದು ಕಾಣಿಸಿಕೊಳ್ಳುತ್ತ ಹೋಗುತ್ತದೆ. ವಿವರವಾದ ಪಾತ್ರಚಿತ್ರಣ ಮತ್ತು ಚತುರ ದೃಶ್ಯಸಂವಿಧಾನಗಳು ಇಲ್ಲಿಯ ಆಕರ್ಷಣೆ. ಕಥನಗತಿಗೆ ಒಪ್ಪುವ ಸರಳರಗಳೆಯ ಮಾತ್ರಾಬಂಧದಲ್ಲಿರುವ ಈ ನಾಟಕದಲ್ಲಿ ಕ್ಷಿಪ್ರನ್ಯಾಯದ ವಿತರಣೆ, ಧರ್ಮಭ್ರಷ್ಟರ ಮೇಲೆ ಕೊಲೆ ಎರಗಿದರೆ ಅಧರ್ಮ ತಗ್ಗುತ್ತದೆ ಎನ್ನುವ ಸಂದೇಶ ಎದ್ದುಕಾಣುತ್ತವೆ.

**೭. ಸೊಫೋಕ್ಲೇಸ್ ಮಹಾಕವಿಯ ಫಿಲೊಕ್ತೇತೇಸ್ (Philoctetes) :** ಗ್ರೀಕ್ ಯೋಧ ಫಿಲೊಕ್ಲೇತೇಸ್ ಟ್ರೋಜನ್ ಯುದ್ಧದಲ್ಲಿ ನೇರವಾಗಿ ಭಾಗವಹಿಸುವ ಅವಕಾಶದಿಂದ ವಂಚಿತನಾದ ಟ್ರಾಕಿಯ ದೊರೆ, ಬಿಲ್ಗಾರ.

ದೇವತೆಯೊಬ್ಬಳಿಗೆ ಬಲಿಯರ್ಪಿಸಲು ಹೋದಾಗ ಘಟಸರ್ಪವೊಂದು ಅವನಿಗೆ ಕಚ್ಚಿ, ವ್ರಣವಾಗಿ, ಎಲ್ಲರಿಂದಲೂ ತ್ಯಾಜ್ಯಪದಾರ್ಥವಾಗುತ್ತಾನೆ. ಲೆಮ್ನಾಸ್ ದ್ವೀಪದಲ್ಲಿ ನರಳುತ್ತ ಬಿದ್ದಿರುತ್ತಾನೆ. ಟ್ರಾಯ್ ಯುದ್ಧ ಆರಂಭವಾಗಿ ಹತ್ತು ವರ್ಷಗಳು ಉರುಳಿದರೂ ಗ್ರೀಕರಿಗೆ ಅದರಲ್ಲಿ ಜಯ ದೊರೆಯಲಿಲ್ಲ. ಅದು ಸಾಧ್ಯವಾಗಬೇಕಾದರೆ ಈ ವ್ಯಾಧಿಗ್ರಸ್ತ ಯೋಧನನ್ನು ಕರೆತರುವ ಕಣಿಯ ನಿಬಂಧನೆ ಕಾರ್ಯಗತವಾಗಬೇಕಾಗಿರುತ್ತದೆ. ಅದಾದ ಮೇಲೆ ಯುದ್ಧದಲ್ಲಿ ಜಯ ದೊರೆಯುತ್ತದೆ. ತನ್ನನ್ನು ನಿರ್ಜನದ್ವೀಪದಲ್ಲಿ ನಿರ್ದಯವಾಗಿ ತೊರೆದುಹೋಗಿದ್ದ ನಿರ್ಘೃಣರಾದ ನಾಯಕರೇ ತಮ್ಮ ಹಿಂದಿನ ಘೋರವಾದ ಅನ್ಯಾಯದಿಂದ ರೋಸಿಹೋಗಿದ್ದ ಫಿಲೊಕ್ತೇತೇಸನನ್ನು ಒಲಿಸಿ ಕರೆತರಬೇಕಾದ ಸನ್ನಿವೇಶದ ಕಲ್ಪನೆ ತುಂಬ ಮಾರ್ಮಿಕವಾಗಿ ಇಲ್ಲಿ ಬಂದಿದೆ. ಇಲ್ಲಿ ನಾಯಕವ್ಯಕ್ತಿ ಸಾವು ಇಲ್ಲವಾದರೂ ಸಾವಿನಂಥ ನೋವು ಅನುಭವಿಸಿ ನಾಟಕದ ದುರಂತತೆಗೆ ಕಾರಣನಾಗಿದ್ದಾನೆ. ಇದೊಂದು ಪಾತ್ರಪ್ರಮುಖವಾದ ನಾಟಕವಾಗಿದ್ದು, ನಾಯಕವ್ಯಕ್ತಿಯ ಯಾತನೆ ಆತ್ಮಾಭಿಮಾನದ ಘನತೆ ಇವುಗಳ ಚಿತ್ರಣ ಹೃದ್ಯವಾಗಿದೆ.

ಈವರೆಗೆ ಕ.ವೆಂ. ರಾಘವಾಚಾರ್ಯರು ಗ್ರೀಕ್ ಮೂಲದಿಂದ ನೇರವಾಗಿ ಕನ್ನಡಕ್ಕೆ ಭಾಷಾಂತರಿಸಿದ ಏಳು ನಾಟಕಗಳ ಸಾಮಾನ್ಯಪರಿಚಯವನ್ನು ಮಾಡಿಕೊಂಡದ್ದಾಯಿತು. ಈ ನಾಟಕಗಳೂ ಇವುಗಳ ಸಹಾಯಕಸಾಹಿತ್ಯವೂ ಆಚಾರ್ಯರಿಗೆ ಹೊಸಗನ್ನಡ ಸಾಹಿತ್ಯದ ಇತಿಹಾಸದಲ್ಲಿ ಮಸುಳದ ಕೀರ್ತಿಯನ್ನು ದೊರಕಿಸಿಕೊಟ್ಟಿವೆ ಎನ್ನಬಹುದು. ಇವುಗಳ ಸಿದ್ಧತೆಯಲ್ಲಿ ಅವರು ವಿವಿಧ ಸಂಪಾದಿತ ಮೂಲಪಠ್ಯಗಳನ್ನು ಕಷ್ಟಪಟ್ಟು ದೊರಕಿಸಿಕೊಂಡು ತುಲನೆಮಾಡಿ ಬಳಸಿರುವುದು ಅವರ ಶ್ರದ್ಧೆ ಶ್ರಮಗಳನ್ನು, ದಕ್ಷತೆ ಪ್ರಾಮಾಣಿಕತೆಗಳನ್ನು ಎತ್ತಿ ತೋರಿಸುತ್ತವೆ. ಹಳಗನ್ನಡ ಮಾತ್ರಾಛಂದಸ್ಸುಗಳಿಂದ ಹೊಸಗನ್ನಡ ಗದ್ಯದವರೆಗೆ ಭಾಷಾಶೈಲಿಯ ಹದ ಹರವು ಇದ್ದರೂ, ಒಲವು ಬಿಗಿ ಬಿಕ್ಕಟ್ಟುಗಳಿಂದ ಬೀಗುವ ಪದಬಂಧದ ಕಡೆಗೇ ಹೊರಳುತ್ತದೆ. ದೇಸಿ ಮಾರ್ಗಗಳ ಮೇಲಾಟದಲ್ಲಿ ದೇಸಿಗೇ ಗೆಲವು, ಗದ್ಯ ಪದ್ಯಗಳ ಮೇಲಾಟದಲ್ಲಿ ಪದ್ಯಕ್ಕೆ ಸಲವು. ಸ್ವಭಾವದಂತೆ ನುಡಿ ನುಡಿಕಾರ ಸಾಣೆಗೊಡ್ಡದ ವಜ್ರ, ಹಲವೊಮ್ಮೆ ತೊಳೆಯದ ಮುತ್ತು.

ಇಲ್ಲಿಂದ ಮುಂದೆ ಆಚಾರ್ಯರು ತಮ್ಮ ನಾಟಕಗಳ ಸಂಬಂಧದಲ್ಲಿ ಒದಗಿಸಿರುವ ಸಹಾಯಕಸಾಹಿತ್ಯ, ಅಧ್ಯಯನಸಾಮಗ್ರಿ ಇವುಗಳ ಬಗೆಗೆ ಕೆಲವು ಮಾತುಗಳನ್ನು ನೋಡಬಹುದಾಗಿದೆ.

ಗ್ರೀಕ್ ನಾಟಕಕಾರರ ಪರಿಚಯದೊಂದಿಗೆ ಗ್ರೀಕ್ ರುದ್ರನಾಟಕದ ಹುಟ್ಟು ಬೆಳೆವಣಿಗೆ, ಪ್ರದರ್ಶನ, ಬಂಧ ಮತ್ತು ವಿಶೇಷಾಂಶಗಳು ಇವನ್ನು ಕುರಿತು ಆಚಾರ್ಯರು ಮುಖ್ಯಾಂಶಗಳನ್ನೆಲ್ಲ ಕ್ರೋಡೀಕರಿಸಿ ಬರೆದಿರುವ ಅಧ್ಯಯನಸಾಮಗ್ರಿ ಈ ಮೊದಲು ಕನ್ನಡದಲ್ಲಿ ಇಷ್ಟು ಪ್ರಮಾಣದಲ್ಲಿ, ಪರಿಷ್ಕಾರದಲ್ಲಿ ಬಂದಿರಲಿಲ್ಲವೆಂದು ಹೇಳಬಹುದು. ಶ್ರೀಯವರು ತಮ್ಮ 'ಅಶ್ವತ್ಥಾಮನ್' (೧೯೨೯) ಮತ್ತು 'ಪಾರಸಿಕರು' (೧೯೩೫) ಮೂಲಕವಾಗಿ ಮಾಡಿದ್ದ ಗುದ್ದಲಿಪೂಜೆ, ಮುಂದೆ ಕಟ್ಟಡ ಕಟ್ಟಲು ಕೊಟ್ಟ ಹುರುಪು, ಆಚಾರ್ಯರನ್ನು ಉಬ್ಬಿಸಿ ಎಬ್ಬಿಸಿತು. ನಾಟಕಗಳನ್ನು ಓದಿ ಸಂತೋಷಿಸುವುದಕ್ಕೂ ಅವುಗಳ ಅಧ್ಯಯನಕ್ಕೂ ಆಚಾರ್ಯರ ಪ್ರಯತ್ನಗಳು ಹೆದ್ದಾರಿಗಳನ್ನೇ ನಿರ್ಮಿಸಿದುವು. ಭಾಷಾಂತರದ ಕ್ಷೇತ್ರದಲ್ಲಿ ಹೊಸ ದಿಕ್ಕು ದೆಸೆಗಳು ಕಾಣುವಂತಾದುವು. ಶ್ರೀಯವರ ಅನಂತರದ

ಪೀಳಿಗೆಗಳು ಗ್ರೀಕ್ ನಾಟಕಗಳನ್ನು ಇಂಗ್ಲಿಷ್ ಮೂಲಗಳಲ್ಲಿ ಓದುವುದಕ್ಕೂ ತಮ್ಮ ವಿದ್ಯಾರ್ಥಿಗಳಿಂದ ಓದಿಸುವುದಕ್ಕೂ ತಾವೇ ನಾಟಕಗಳನ್ನು ಭಾಷಾಂತರಿಸುವುದಕ್ಕೂ ವಸ್ತುವಿಮರ್ಶೆಯನ್ನು ನಡೆಸುವುದಕ್ಕೂ ಆಚಾರ್ಯರ ಈ ದಿಕ್ಕಿನ ಸಾಧನೆಗಳು ದೊಡ್ಡ ಒತ್ತಾಸೆಯಾದುವು.

ಗ್ರೀಕ್ ರುದ್ರನಾಟಕಗಳ ಸರ್ವಾಂಗೀಣ ಸ್ವರೂಪವನ್ನು ಪರಿಚಯಿಸುವ ಪ್ರಯತ್ನವನ್ನು ತಮ್ಮ ಮೊದಲ ಭಾಷಾಂತರ “ಅಂತಿಗೊನೆ'ಯ ಜೊತೆಜೊತೆಗೇ ಕೈಕೊಂಡರು. ಗ್ರೀಕ್ ನಾಟಕದ ಹುಟ್ಟು ಬೆಳವಣಿಗೆ, ದಿಯೆನೂಸೊಸ್ ದೇವತೆ, ಉತ್ಸವ, ದಿಥುರಂಬೊಸ್ ಗೀತ, ಆರಿಯೋನ್ (ಮೇಳಗೀತವನ್ನು ಒಂದು ವ್ಯವಸ್ಥೆಗೆ ತಂದವನು), ಥೆಸ್‌ಪಿಸ್ (ರುದ್ರನಾಟಕದ ಜನಕ), ಅಯ್‌ಸ್ಖುಲೊಸ್ (ಎರಡನೆಯ ಮೆಟ್ಟಿಲು), ಸೊಫೋಕ್ಲೇಸ್ (ಮೂರನೆಯ ಮೆಟ್ಟಿಲು), ಯೂರಿಪಿದೇಸ್ (ಕೊನೆಯ ಮೆಟ್ಟಿಲು), ತರುವಾಯದ ಚರಿತೆ (ಇಯೋನ್, ಅಗಥೋನ್ ಮೊದಲಾದವರು) - ಈ ವಿಭಾಗಗಳಲ್ಲಿ ಈ ನಾಟಕಪ್ರಕಾರದ ಹಾಗೂ ಕವಿಗಳ ಸಾಧನೆ ಯಶಸ್ಸುಗಳನ್ನು ಮೊದಲು ನಿರೂಪಿಸಿದೆ; ವಸ್ತು ರೀತಿ ಪ್ರದರ್ಶನಗಳ ವಿಕಾಸಪಥವನ್ನು ಹೆಗ್ಗುರುತುಗಳಲ್ಲಿ ತೋರಿಸಿದೆ.

ಈ ಲೇಖನದ ಮುಂದುವರಿದ ಭಾಗವಾಗಿ ರುದ್ರನಾಟಕದ ಪ್ರದರ್ಶನ ಕುರಿತ ಪ್ರತ್ಯೇಕ ವಿಚಾರದ ಒಂದು ಪ್ರಬಂಧವಿದೆ. ಇದರಲ್ಲಿ ನಾಟಕದ ಏರ್ಪಾಡು, ಮೇಲ್ವಿಚಾರಣೆ, ಮೇಲಾಟದ ತೀರ್ಪು, ಪ್ರೇಕ್ಷಕರು, ನಾಟಕಶಾಲೆ, ರಂಗಸಲಕರಣೆಗಳು, ನಟರ ವೇಷ ಇವನ್ನು ಕುರಿತ ವಿಚಾರವಿದೆ.

ಮುಂದಿನದು ರುದ್ರನಾಟಕದ ಬಂಧ ಮತ್ತು ವಿಶೇಷಾಂಶಗಳು. ಇಲ್ಲಿ ಸಂವಾದ ಮತ್ತು ಮೇಳ ಎಂಬ ಎರಡು ಭಾಗಗಳಲ್ಲಿ ಅಂಕಗಳ ವ್ಯವಸ್ಥೆ, ಗೀತಭಾಗಗಳು, ಐಕ್ಯತ್ರಯಗಳು, ಅಪ್ರದರ್ಶ್ಯಗಳು ಇವುಗಳ ಪ್ರಸ್ತಾವವಿದೆ.

ಗ್ರೀಕ್ ರುದ್ರನಾಟಕದ ಸಂಬಂಧವಾಗಿ ಶ್ರೀಯವರ 'ಸಂಭಾವನೆ' ಗಾಗಿ ಬರೆದ ಬೇರೊಂದು ಲೇಖನವೂ ಉಂಟು (೧೯೪೧). ಐವತ್ತು ವರ್ಷಗಳ ಅವಧಿಯಲ್ಲಿ ಮೂವರು ಮಹಾಕವಿಗಳ ಕೃಷಿಯಿಂದ ಗ್ರೀಕ್ ರುದ್ರನಾಟಕ ಹೇಗೆ ಬೆಳೆದುಬಂದಿತು ಎಂಬುದರ ಒಂದು ವಿಹಂಗಮನೋಟವಿದೆ. ಈ ಬರಹದಲ್ಲಿ ದೊಂಬಿದಾಸರ ಕುಣಿತ, ಚೋಮನಕುಣಿತ, ಯಕ್ಷಗಾನ ಈ ದೇಶೀಯ ಪ್ರದರ್ಶನಗಳ ಪ್ರಸ್ತಾವವನ್ನೂ ತುಲನೆಗಾಗಿ ತಂದಿರುವುದು ಗಮನಿಸತಕ್ಕುದಾಗಿದೆ. ಮೊದಲ ಮುಖ್ಯ ಪ್ರಬಂಧದಲ್ಲಿ ಗ್ರೀಕ್ ರುದ್ರನಾಟಕದ ಹೊರಮೈ ವಿಚಾರಸಂಗ್ರಹವಾಗಿದ್ದರೆ, ಈ ಎರಡನೆಯದರಲ್ಲಿ ರುದ್ರನಾಟಕದ ಒಳಮೈವಿವರಗಳನ್ನು ಸ್ವಲ್ಪ ಕುರಿತಿದೆ. ಪಾಪ-ಪ್ರಾಯಶ್ಚಿತ್ತ, ಮನುಷ್ಯ - ದೇವತೆ - ವಿಧಿ, ದೇವತೆ - ಮನುಷ್ಯ - ಪ್ರಕೃತಿ ಈ ಕೂಟಗಳ ನಡುವೆ ಇರುವ ಸಂಬಂಧ ಸಂಘರ್ಷಗಳ ವಿಚಾರವನ್ನು ಗ್ರೀಕ್ ನಾಟಕಕಾರ ರತ್ನತ್ರಯರ ಸಾಧನೆಗಳ ಹಿನ್ನೆಲೆಯಲ್ಲಿ ಹೇಳಿದೆ.

ಇನ್ನು ನಾಟಕಕಥೆಗಳು: 'ಥೀಬ್ಸ್ ಮತ್ತು ಈಡಿಪಸ್' ಎಂಬುದು 'ಅಂತಿಗೊನೆ' ನಾಟಕದ ಪೀಠಿಕೆಗೆ ಸೇರಿ ಬಂದಿದೆ. ಗ್ರೀಸ್ ದೇಶದ ಬಹು ಪುರಾತನನಗರಗಳಲ್ಲಿ ಒಂದಾದ ಥೀಬ್ಸ್, ಅದರ ಇತಿಹಾಸ, ಬೇರೆ ಬೇರೆ ಕಥಾಪ್ರಸಂಗಗಳ ನಾಟಕಗಳಿಗೆ ಅವಕಾಶಮಾಡಿದ ಅಲ್ಲಿಯ ಮುಖ್ಯ ವ್ಯಕ್ತಿಗಳು, ವಿಶೇಷವಾಗಿ ಈಡಿಪಸ್ ದೊರೆಗೆ

ಸಂಬಂಧಿಸಿದ ಕಥೆ ಎಲ್ಲವೂ ಕಥಾರೂಪವಾಗಿ ಬಂದಿದೆ, ಇಲ್ಲಿ. ಈ ಕಥಾ ಪ್ರಸಂಗವನ್ನು ಈಚೆಗೆ ಭಾಷಾಂತರಿಸಿದ 'ಒಯ್ದಿಪೌಸ್‌ದೊರೆ' ನಾಟಕದ ಪ್ರಸ್ತಾವನೆಗಾಗಿಯೂ ಕೊಂಚಮಟ್ಟಿಗೆ ಪರಿಷ್ಕರಿಸಿ ಉಪಯೋಗಿಸಿದೆ, 'ಓಯ್ದಿಪೌಸ್ ಕಥೆ' ಎಂಬ ಶೀರ್ಷಿಕೆಯಲ್ಲಿ. ಈ ಸರಣಿಯಲ್ಲಿ 'ಒಯ್ದಿಪೌಸ್ ಕೊಲೊನೊಸ್ಸಿನಲ್ಲಿ' ಎರಡನೆಯದು, 'ಅಂತಿಗೊನೆ' ಮೂರನೆಯದು. ಇವಕ್ಕೆ ಕೂಡ ಆ ಮೊದಲಿನ 'ಥೀಬ್ಸ್ ಮತ್ತು ಈಡಿಪಸ್' ಕಥಾಚಿತ್ರವನ್ನು ಯಥೋಚಿತವಾಗಿ ಬಳಸಿದೆ. ಅಂತಿಗೊನೆಯಲ್ಲಿ ಕೃತಿವಿಮರ್ಶೆ, ಮುಖ್ಯಪಾತ್ರವಿಶ್ಲೇಷಣೆ ತನಿಯಾಗಿದ್ದು, ಗಾಢವಾದ ಒಳನೋಟಗಳಿಂದ ಕೂಡಿರುವುದು ಮೆಚ್ಚತಕ್ಕುದಾಗಿದೆ.

ಸೊಫೋಕ್ಲೇಸಿನ ಉಳಿದೆರಡು ನಾಟಕಗಳಲ್ಲಿ ಮೊದಲನೆಯದು "ಏಲೆಕ್ತ್ರ. ಅಯ್‌ಸ್ಖುಲೊಸ್ಸಿನ 'ತರ್ಪಣಧಾರಿಗಳು' ಮತ್ತು ಸೊಫೋಕ್ಲೇಸಿನ ಏಲೆಕ್ತ್ರ' ಎರಡು ನಾಟಕಗಳ ವಸ್ತು ಒಂದೇ ಆದ್ದರಿಂದ, 'ತರ್ಪಣಧಾರಿಗಳು' ನಾಟಕದ ಹಿನ್ನೆಲೆಯಲ್ಲಿ "ಏಲೆಕ್ತ್ರ' ನಾಟಕದ ಸ್ವಾರಸ್ಯ ಸ್ವಾದುವಾಗುವುದೆಂದೂ ಆದ್ದರಿಂದ ತರ್ಪಣಧಾರಿಗಳು ನಾಟಕದ ಸ್ಥೂಲವಿಶ್ಲೇಷಣೆಯನ್ನು ಮಾಡಿದರೆ ಸಾಕಾಗುವುದೆಂದೂ ಆಚಾರ್ಯರು ಭಾವಿಸಿದ್ದಾರೆ. ಹೋಲಿಕೆ ಪರಿಚಯಗಳಿಗಾಗಿ ಯೂರಿಪಿದೇಸಿನ 'ಏಲೆಕ್ತ್ರ'ವನ್ನು, ಅದರ ಕಟ್ಟಡ ಬೇರೆಯೆಂಬ ಕಾರಣಕ್ಕಾಗಿ, ಎತ್ತಿ ಅದರ ಕಥಾಸಂಗ್ರಹ ಮಾಡಿದ್ದಾರೆ. ಹೀಗಾಗಿ ಸೊಫೊಕ್ಲೇಸಿನ "ಏಲೆಕ್ತ್ರ'ದ ಭಾಷಾಂತರದೊಂದಿಗೆ ಅದರ ಕಥೆ ವಿಮರ್ಶೆಗಳು ಇಲ್ಲಿ ನೇರವಾಗಿ ನಿರೂಪಿತವಾಗಿಲ್ಲ. ಆದರೆ ಅವುಗಳ ಅಗತ್ಯವಿದ್ದಿತು ಎನ್ನುವುದನ್ನು ಯಾರಾದರೂ ಮನಗಾಣಬಹುದಾಗಿದೆ. 'ಏಲೆಕ್ತ್ರ' ನಾಟಕದ ಕಥೆಗೆ ಹಿನ್ನೆಲೆಯಾಗಿ ಬೇಕಾಗುವ, 'ತರ್ಪಣಧಾರಿಗಳು' ಎಂಬುದಕ್ಕೆ ಮೊದಲಲ್ಲಿ ಬರುವ, "ಅಗಮೆಮ್ನೋನ್' ನಾಟಕದ ಪೂರ್ವಕಥೆಯನ್ನೂ ನಾಟಕಕಥೆಯನ್ನೂ ಕಥೆಯ ಬೆಳವಣಿಗೆಯನ್ನೂ ಇಲ್ಲಿ ವಿಸ್ತಾರದಲ್ಲಿ ಭೂಮಿಕೆಯನ್ನಾಗಿ ಮಾಡಿರುವುದು ಕಥೆಯನ್ನು ಒಟ್ಟುನೋಟದಲ್ಲಿ ಅರ್ಥಮಾಡಿಕೊಳ್ಳಲು ಸಹಾಯಕವಾಗಿರುವುದೇನೋ ಸರಿ.

ಎರಡನೆಯ ಭಾಷಾಂತರ ನಾಟಕ 'ಫಿಲೊಕ್ತೇತೇಸ್'. ಇದರ ಪೀಠಿಕೆಗೆ ಹೊಸ ವಿಷಯಗಳನ್ನು ಹೆಕ್ಕಿ ತೆಗೆಯಲಾಗಿದೆ. ಹೋಮರನ ಮಹಾಕಾವ್ಯಗಳಲ್ಲಿಯೂ ಇತರತ್ರವೂ ಬರುವ ಫಿಲೊಕ್ತೇತೇಸ್ ಎಂಬ ಬಿಲ್ಗಾರನಾದ ವೀರಯೋಧನ ಸಂಬಂಧವಾದ ಕಥಾಂಶಗಳನ್ನೆಲ್ಲ ಮೊದಲು ಒಟ್ಟುಗೂಡಿಸಿ ಪ್ರಸಂಗದ ಸಾಮಾನ್ಯವಾದ ಚೌಕಟ್ಟನ್ನು ಆಚಾರ್ಯರು ನಿರೂಪಿಸಿದ್ದಾರೆ. ಹೀಗೆ ನಿರೂಪಿಸುವಾಗ, ಕಾವ್ಯಕಥನವನ್ನು ನಾಟಕವಸ್ತುವನ್ನಾಗಿ ಮಾರ್ಪಡಿಸುವಲ್ಲಿ ಮಾಡಿಕೊಂಡ ವ್ಯತ್ಯಾಸಗಳನ್ನು ಸ್ವಲ್ಪ ಹೇಳಿದ್ದಾರೆ. ತುಣುಕುಗಳಲ್ಲಿ ದೊರೆತಿರುವ ಅಯ್‌ಸ್ಖುಲೋಸ್‌ನ ಮತ್ತು ಯೂರಿಪಿದೇಸಿನ 'ಫಿಲೊಕ್ತೇತೇಸ್' ನಾಟಕಗಳ ವಸ್ತುವನ್ನು ವಿವರಿಸಿ, ಬಳಿಕ ಪೂರ್ಣವಾಗಿ ದೊರೆತಿರುವ ಈ ನಾಟಕ ಸೊಫೊಕ್ಲೇಸ್ ಕೈಯಲ್ಲಿ ಹೇಗೆ ಬಂದಿದೆಯೆಂದು ವಿವರಿಸಲು ತೊಡಗಿದ್ದಾರೆ. ಆದರೆ ಈ ವಿವರಣೆ ತಕ್ಕ ವಿಸ್ತಾರದಲ್ಲಿ ಇಲ್ಲದಿರುವುದು ದೊಡ್ಡ ಕೊರತೆಯಾಗಿದೆ. ಸಾಲುಗಳ ಕ್ರಮದಲ್ಲಿ ನಾಟಕದ ಕಟ್ಟಡವನ್ನೂ ವಸ್ತುವಿಶ್ಲೇಷಣೆಯನ್ನೂ ಕುರಿತಿರುವುದು ಆಯಾ ಭಾಗದ ಆಶಯವನ್ನು ವಿಶದವಾಗಿ ಗ್ರಹಿಸಲು ಸಹಾಯಮಾಡಿರುವುದಂತೂ ನಿಜ; ಹಾಗೆಯೇ ಲಘು ಟಿಪ್ಪಣಿಗಳ ಅನುಬಂಧ ಭಾಗದಿಂದ ಕೂಡ.

ಆಚಾರ್ಯರು ಸೊಫೋಕ್ಲೇಸಿನ ನಾಟಕಗಳ ಬಗೆಗೆ ವಿಶೇಷವಾದ ಒಲವರವನ್ನು ತೋರಿದ್ದಾರೆ. ಆದರೆ ಸಾಹಿತ್ಯ ಅಕಾಡೆಮಿಯ ಕೋರಿಕೆಯ ಮೇರೆಗೆ ಅಯ್‌ಸ್ಖುಲೊಸ್ಸಿನ ಹಾಗೂ ಅರಿಸ್ತೊಫನೇಸಿನ ಒಂದೊಂದು ನಾಟಕವನ್ನು ಕೂಡ ಭಾಷಾಂತರಿಸಿದ್ದಾರೆ. ಮೊದಲು ಅಯ್‌ಸ್ಖುಲೊಸ್: ಈ ಕವಿಯ ಇತಿವೃತ್ತ ವಿಚಾರ, ಆತನ ಏಳು ನಾಟಕಗಳು ಮತ್ತು ಅವುಗಳ ಹಸ್ತಪ್ರತಿಗಳು ಇವುಗಳ ಹಿನ್ನೆಲೆಯೊಂದಿಗೆ, ಪೂರ್ವಕಥೆ, ನಾಟಕಕಥೆ, ಮುಂದಿನ ಕಥೆ ಎಂಬ ಮೂರು ಖಂಡಗಳಲ್ಲಿ ಪೀಠಿಕೆಯ ಭಾಗವನ್ನು ಬರೆದಿದ್ದಾರೆ, ಕೊನೆಗೆ ಮೆಡಿಸಿಯನ್ ಹಸ್ತಪ್ರತಿಯಲ್ಲಿ ಬರೆದಿರುವಂತೆ 'ಅಗಮೆಮ್ನೋನ್' ನಾಟಕದ ಉಪೋದ್ಘಾತವನ್ನು ಕೊಟ್ಟು ತಮ್ಮ ಭಾಷಾಂತರವನ್ನು ಪ್ರಕಟಿಸಿದ್ದಾರೆ. ಇನ್ನು ಅರಿಸ್ತೊಫನೇಸಿನ 'ಕಪ್ಪೆಗಳು' ನಾಟಕ ಒಂದು ಹರ್ಷನಾಟಕವಾಗಿದ್ದು, ಕವಿವಿಚಾರವನ್ನೂ ವಸ್ತುವಿಚಾರವನ್ನೂ ಸಂಗ್ರಹವಾಗಿ ಕೆಲವೇ ಮಾತುಗಳಲ್ಲಿ ಹೇಳಿ ಮುಗಿಸಿದ್ದಾರೆ. ಟಿಪ್ಪಣಿಗಳ ಸಹಾಯವಂತೂ ವಿಶೇಷವಾಗಿ ಅಗಮೆಮ್ನೋನಿಗೆ ಸಂಬಂಧಿಸಿದೆ.

ಈ ಏಳು ನಾಟಕಗಳ ಅನುವಾದದಲ್ಲಿಯೂ ಆಯಾ ನಾಟಕಕರ್ತೃವಿನ ಇತಿವೃತ್ತ ವಿಚಾರವನ್ನು ಸಂಗ್ರಹವಾಗಿ ಸೇರಿಸಿದ್ದು, ಇವು ಪುನರಾವೃತ್ತಿಗೊಂಡಿದ್ದರೂ ಪ್ರತ್ಯೇಕವಾದ ಅಧ್ಯಯನಕ್ಕೆ ಸಹಾಯಕವಾಗುವುದು ವಿದಿತವೇ ಇದೆ. ಅಧ್ಯಯನಕ್ಕೆ ಬೇಕಾಗುವ ಅಂಕಿತನಾಮಾದಿಗಳ ಶಬ್ದಕೋಶಗಳೂ ಕಠಿನಪದಕೋಶಗಳೂ ಸೇರಿರುವುದು ಸಹ ಹೀಗೆಯೇ ಸಹಾಯಕ್ಕೆ ಬರತಕ್ಕವು. ಇಲ್ಲೆಲ್ಲ ಆಚಾರ್ಯರು ಗ್ರೀಕ್ ಭಾಷಾಸಾಹಿತ್ಯಗಳ ವ್ಯಾಸಂಗವನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ. ಇದಕ್ಕಾಗಿ ಅವರ ವಿನಿಯೋಗಿಸಿರುವ ಕಾಲ, ಪಟ್ಟಿರುವ ಕಷ್ಟ, ಅವರ ಶ್ರದ್ಧೆ ಪ್ರಾಮಾಣಿಕತೆಗಳ ಪ್ರತ್ಯಕ್ಷಸಾಕ್ಷಿಗಳಾಗಿವೆ. ಅವರು ಪ್ರತಿಯೊಂದು ನಾಟಕದ ಅನುವಾದವನ್ನೂ ಕೈಗೆತ್ತಿಕೊಳ್ಳುವಾಗ ವಿಭಿನ್ನ ಗ್ರಂಥಪಾಠದ ಪ್ರತಿಗಳನ್ನು ಪರಿಶೀಲಿಸಿದ್ದಾರೆ, ವಿಚಕ್ಷಣೆಯಿಂದ ಸೂಕ್ತ ಪಾಠಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಸಹಾಯಕ ಸಾಹಿತ್ಯವಾಗಿ ಬೇರೆ ಬೇರೆ ಅನುವಾದಗಳನ್ನೂ ಟಿಪ್ಪಣಿಗಳನ್ನೂ ಗಮನಿಸಿದ್ದಾರೆ. ಉದಾಹರಣೆಗೆ, ಅಯ್‌ಸ್ಖುಲೊಸ್ಸಿನ ಅಗಮೆಮ್ನೋನ್ ಭಾಷಾಂತರದಲ್ಲಿ, ಮುಖ್ಯವಾಗಿ ವೆರಾಲ್ ಅವರ ಪಾಠವನ್ನು (A.W. Verrall) ಅನುಸರಿಸಿರುವುದಾಗಿಯೂ ಡೆನಿಸ್ಟನ್ (John Dewar Denniston) ಮತ್ತು ಫ್ರಾಂಕೆಲ್ (Edward Fraenkel) ಅವರ ಪಾಠಗಳ ಸಹಾಯದಿದ ಅದನ್ನು ಪರಿಷ್ಕರಿಸಿರುವುದಾಗಿಯೂ ತಿಳಿಸಿರುವುದಲ್ಲದೆ, ಲೂಯಿ ಕ್ಯಾಂಪ್‌ಬೆಲ್ ಅವರ ಹಾಗೂ ಫಿಲಿಪ್ ವೆಲ್ಲಕಾಟ್ ಅವರ ಇಂಗ್ಲಿಷ್ ಭಾಷಾಂತರಗಳನ್ನೂ (World Classics, The Penguin Classics) ನೋಡಿಕೊಂಡಿರುತ್ತಾರೆ. ತಮ್ಮ ಭಾಷಾಂತರಗಳಿಗೆ ಅಧಿಕೃತತೆ ಮತ್ತು ಗಾಂಭೀರ್ಯಗಳನ್ನು ತಂದುಕೊಡಲು ಅವರು ನಿರ್ವಂಚನೆಯಾಗಿ, ಶ್ರದ್ಧಾಪೂರ್ವಕವಾಗಿ ಕೆಲಸಮಾಡಿರುವುದು ಇದರಿಂದ ತಿಳಿದುಬರುತ್ತದೆ. ಅವರ ರಚನೆಗಳಿಗೆ ಒಂದೇ ಬಗೆಯ ಯಶಸ್ಸು ದೊರೆತಿಲ್ಲದಿರಬಹುದು; ಆದರೆ ಅವರ ಸಾಧನೆ ಸಾಹಸಗಳು ಮಾತ್ರ ಏಕಪ್ರಕಾರವಾಗಿ ವಿನಿಯೋಗವಾಗಿರುವುದಂತೂ ನಿಜ, ಆಗಿರುವ ಕೊರತೆಗಳನ್ನು ಎಸ್.ವಿ. ರಂಗಣ್ಣನವರ 'ಪಾಶ್ಚಾತ್ಯ ಗಂಭೀರ ನಾಟಕಗಳು' (೧೯೭೦), ಎಲ್.ಎಸ್. ಶೇಷಗಿರಿರಾವ್ ಅವರ 'ಗ್ರೀಕ್ ರಂಗಭೂಮಿ ಮತ್ತು ನಾಟಕ' (೧೯೮೬) ಮೊದಲಾದ ಆಕರಗಳಿಂದ ತುಂಬಿಕೊಳ್ಳಬಹುದಾಗಿದೆ.

## ೬. ಅರಿಸ್ಟಾಟಲಿನ (ಅರಿಸ್ತೊತೆಲೇಸಿನ)

## ಕಾವ್ಯಮೀಮಾಂಸೆಯ ಕನ್ನಡ ಭಾಷಾಂತರ

### (ಅಪ್ರಕಟಿತ)

ಈ ಶಾಸ್ತ್ರಗ್ರಂಥವನ್ನು ತಮ್ಮ ಗ್ರೀಕ್ ಗುರುಗಳಾದ ಎಚ್.ಕೆ. ಮೌಲ್ಟನ್ ಅವರ ಹತ್ತಿರ ಕುಳಿತು ಅಧ್ಯಯನಮಾಡಿ, ಕ.ವೆಂ. ರಾಘವಾಚಾರ್ಯರು ೧೯೪೨ರ ಹೊತ್ತಿಗೇ ಕನ್ನಡಕ್ಕೆ ಭಾಷಾಂತರಿಸಿದ್ದರು. ಇದರ ಮೊದಲು ಸೊಫೊಕ್ಲೇಸಿನ 'ಅಂತಿಗೊನೆ' ನಾಟಕವನ್ನು ಅವರು ಕನ್ನಡಕ್ಕೆ ಭಾಷಾಂತರಿಸಿ, ೧೯೩೮ರಲ್ಲಿ ಪ್ರಕಟಿಸಿದ್ದರು. ಇದು ಮುಗಿಯುತ್ತಿದ್ದ ಹಾಗೆಯೇ, ಅರಿಸ್ಟಾಟಲಿನ 'ಕಾವ್ಯಮೀಮಾಂಸೆ' ಯನ್ನು ಅಧ್ಯಯನಮಾಡಲು, ಅನುವಾದಿಸಲು ಅವರು ಕೈಗೆ ತಗೆದುಕೊಂಡಿರಬೇಕೆಂದು ತೋರುತ್ತದೆ. ೧೯೪೨ರಲ್ಲಿ ಅನುವಾದ ಸಿದ್ಧವಾದ್ದು ಅವರ ಮಾತಿನಿಂದಲೇ ತಿಳಿಯುವುದು.

ಅನುವಾದಕ್ಕೆ ಆಚಾರ್ಯರು ಉಪಯೋಗಿಸಿದ್ದು ಬುಚರ್ ಅವರಿಂದ ಸಂಪಾದಿತವಾದ ಗ್ರಂಥಪಾಠವನ್ನು, ಅನುವಾದವನ್ನು ಪರಿಷ್ಕರಿಸಿ ಇನ್ನೇನು ಅಚ್ಚಿನ ಮನೆಗೆ ಕಳಿಸಬೇಕು ಎಂದಿದ್ದಾಗ, ಇದಕ್ಕಿದ್ದಂತೆ ಮಂಜೇಶ್ವರದ ಗೋವಿಂದ ಪೈಗಳು ಕಳಿಸಿಕೊಟ್ಟ ಒಂದು ಪಾರ್ಸಲ್ ಬಂತು. ಅದು ಬೈವಾಟರ್ ಅವರಿಂದ ಸಂಪಾದಿತವಾಗಿದ್ದ ಗ್ರಂಥಪಾಠದ ಕಾವ್ಯಮೀಮಾಂಸೆಯ ಒಂದು ಪ್ರತಿಯಾಗಿತ್ತು. ಅದರ ಜೊತೆಗಿದ್ದ ಪತ್ರದಲ್ಲಿ ತಾವು ಕೆಲವು ದಿವಸಗಳ ಹಿಂದೆಯಷ್ಟೇ ಯಾವುದೋ ಕಾರ್ಯಾರ್ಥವಾಗಿ ಮದರಾಸಿಗೆ (ಈಗ ಚೆನ್ನೈ) ಹೋಗಿದ್ದಾಗ, ಒಂದು ಸಂಜೆ ಅಲ್ಲಿಯ ಮೂರ್ ಮಾರ್ಕೆಟ್ಟಿನಲ್ಲಿ ತಿರುಗಾಡುತ್ತಿರಬೇಕಾದರೆ ಗುಜರಿಯಲ್ಲಿ ಆ ಪ್ರತಿ ಕಣ್ಣಿಗೆ ಬಿದ್ದುದಾಗಿಯೂ ಅದರಿಂದ ಗ್ರಂಥಪರಿಷ್ಕರಣಕ್ಕೆ ಉಪಯೋಗವಾಗಬಹುದೆಂದು ಅದನ್ನು ಆಚಾರ್ಯರಿಗೆ ತೆಗೆದುಕಳಿಸಿರುವುದಾಗಿಯೂ ಅವರು ತಿಳಿಸಿದ್ದರು. ಅಚ್ಚಿನ ಮನೆಗೆ ತಮ್ಮ ಅನುವಾದವನ್ನು ಕಳಿಸಲಿದ್ದವರು ಪಾಠವ್ಯತ್ಯಾಸಗಳೇನಾದರೂ ಇರಬಹುದೇನೋ, ಒಮ್ಮೆ ತಾಳೆನೋಡಿ ಪರಿಷ್ಕರಿಸೋಣವೆಂದು ಅದನ್ನು ಕಳಿಸಿಕೊಡದೆ ಹಾಗೆಯೇ ಇಟ್ಟುಕೊಂಡರು.

ಬುಚರ್ ಮತ್ತು ಬೈವಾಟರ್ ಅವರು ಸಂಪಾದಿಸಿದ ಗ್ರಂಥಪಾಠದಲ್ಲಿಯೂ ಅನುವಾದದಲ್ಲಿಯೂ ಗಮನಾರ್ಹವಾದ ವ್ಯತ್ಯಾಸಗಳು ಕಂಡುಬಂದುದೇ ಕಾರಣವೇ ಮತ್ತೆ ಯಾವ ಅಡಚಣೆಯೋ 'ಕಾವ್ಯಮೀಮಾಂಸೆ'ಯ ಅನುವಾದ ಸಿದ್ಧವಾದುದು ಮುದ್ರಣಗೊಂಡು ಪ್ರಕಟವಾಗಲೇ ಇಲ್ಲ. ಈ ವಿಷಯವನ್ನು ಆಚಾರ್ಯರು ತಮ್ಮ 'ನಂದಾನೆನಪು'ವಿನ (೧೯೭೨) ಆತ್ಮವೃತ್ತದ ಭಾಗದಲ್ಲಿ ಹೀಗೆ ದಾಖಲಿಸಿದ್ದಾರೆ: "ಮೂವತ್ತು ವರ್ಷವಾಯಿತು. ಒಂದು ತಲೆಮಾರು. ಇನೂ ಕಾಲ ಒದಗಿಬಂದಿಲ್ಲ. ವಿಚಿತ್ರ, ಹಿರಿಯರ ಸದುದ್ದೇಶದ ಉಪಕಾರ

ವಿಧಿ ವೈಪರೀತ್ಯದಿಂದ ಈ ರೀತಿ ಅಪೋಪಕಾರವಾಗಿ ಪರಿಣಮಿಸಿತ್ತು. ತರುವಾಯ ಕಾಸರಗೋಡು ಸಮ್ಮೇಳನದಲ್ಲಿ ನಾವೆಲ್ಲ ಒಟ್ಟಿಗೆ ಕಲೆತಾಗ, ಈ ವಿಷಯವನ್ನು ಅವರಿಗೆ ತಿಳಿಸಿ ಇಬ್ಬರೂ ನಕ್ಕೆವು."

ಮತ್ತೆ ರಾಘವಾಚಾರರೂ ಗೋವಿಂದ ಪೈಗಳೂ ಕಲೆತು ಈ ವಿಷಯ ಪ್ರಸ್ತಾವಗೊಂಡದ್ದು ಕಾಸರಗೋಡಿನ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ; ಟಿ.ಟಿ. ಶರ್ಮರು ಅಧ್ಯಕ್ಷತೆವಹಿಸಿದ ವರ್ಷ ೧೯೪೮ರಲ್ಲಿ. ಆಚಾರ್ಯರು ತಮ್ಮ ಕೆಲಸದಲ್ಲಿ ಎಷ್ಟು ನಚ್ಚು, ಎಂಥ ಅಚ್ಚುಕಟ್ಟು ಎಂದು ಇದರಿಂದ ತಿಳಿಯುವುದು. ಅಲ್ಲಲ್ಲಿ ಗ್ರಂಥಪಾಠವನ್ನು ಹೋಲಿಸಿ, ಸರಿಪಡಿಸಿ ಮುದ್ರಣವನ್ನು ಕೈಗೂಡಿಸಿದ್ದ ಪಕ್ಷದಲ್ಲಿ ನೇರವಾಗಿ ಗ್ರೀಕ್‌ಮೂಲದಿಂದ ಬಂದು ಅಧಿಕೃತ ಆವೃತ್ತಿಯಾಗಿ ಕನ್ನಡಕ್ಕೆ ಒದಗಬಹುದಾಗಿದ್ದ ಕಾವ್ಯಮೀಮಾಂಸೆಯ ಗ್ರಂಥವೊಂದು ಅಷ್ಟು ಹಿಂದೆಯೇ ಒದಗಿ, ಪಾಶ್ಚಾತ್ಯ ಕಾವ್ಯಮೀಮಾಂಸೆಯ ಅಧ್ಯಯನಕ್ಕೆ ದೊಡ್ಡ ಸಹಾಯವಾಗುತ್ತಿತ್ತು. ೧೯೪೩-೪೭ರ ನಡುವೆ ಇಂಗ್ಲಿಷ್ - ಕನ್ನಡ ನಿಘಂಟು ಸಿದ್ಧತೆಯ ಕೆಲಸವನ್ನು ಹೊರತುಪಡಿಸಿ ಅವರ ಕೈಯಲ್ಲಿ ಬೇರೆ ಯಾವ ದೊಡ್ಡ ಕೆಲಸವೇನೂ ಇದ್ದಂತೆ ತೋರದು.

ಈಗ ರಾಘವಾಚಾರ್ಯರು ಸಿದ್ಧಪಡಿಸಿದ ಅರಿಸ್ಟಾಟಲಿನ ಕಾವ್ಯಮೀಮಾಂಸೆಯ ಹಸ್ತಪ್ರತಿ ಎಲ್ಲಿದೆಯೋ, ಯಾರ ಬಳಿಯಲ್ಲಿದೆಯೋ, ನಷ್ಟವೇ ಆಗಿಹೋಗಿದೆಯೋ ತಿಳಿಯದು. ಅವರ ಗ್ರಂಥಭಂಡಾರ ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಗೆ ಹೋಗಿದೆಯೆಂದು ತಿಳಿಯುವುದರಿಂದ, ಅಲ್ಲಿ ಶೋಧಿಸಿದರೆ ಸಿಕ್ಕಬಹುದೇ, ನೋಡಬೇಕು.

ಈಚೆಗೆ ಅರಿಸ್ಟಾಟಲಿನ ಕಾವ್ಯಮೀಮಾಂಸೆಯ ಬೇರೆ ಅನುವಾದವು ಪೀಠಿಕೆ ಟಿಪ್ಪಣಿ ಮೊದಲಾದವುಗಳೊಂದಿಗೆ ಪ್ರಕಟವಾಗಿರುವುದು (೧೯೫೯; ದ್ವಿಮು. ೧೯೯೧) ಸಮಾಧಾನದ ಸಂಗತಿ. ಇದನ್ನು ಸಿದ್ಧಪಡಿಸಿರುವವರು ಇಂಗ್ಲಿಷ್ ಕನ್ನಡ ಭಾಷೆಗಳಲ್ಲಿ ಒಳ್ಳೆಯ ವಿದ್ವಾಂಸರಾಗಿರುವ, ಗ್ರೀಕ್ ಭಾಷೆಯ ಪರಿಚಯವೂ ಇರುವ, ಆಚಾರ್ಯರಂತೆಯೇ ಕೆಲಸದಲ್ಲಿ ಅಚ್ಚುಕಟ್ಟು ಶ್ರದ್ಧೆ ಪ್ರಾಮಾಣಿಕತೆಗಳಿಗೆ ಹೆಸರಾಗಿರುವ ಪ್ರೊ. ಎನ್. ಬಾಲಸುಬ್ರಹ್ಮಣ್ಯ ಅವರು. ಇವರು ಬೈವಾಟರ್ ಅವರ ಗ್ರಂಥಪಾಠವನ್ನು ಮೂಲವಾಗಿಟ್ಟುಕೊಂಡು, ಬುಚರ್ ಬೈವಾಟರ್ ಮೊದಲಾದವರ ಇಂಗ್ಲಿಷ್ ಅನುವಾದಗಳನ್ನೂ ಆಶ್ರಯಿಸಿ ತಮ್ಮ ಗ್ರಂಥವನ್ನು ಸಿದ್ಧಪಡಿಸಿದ್ದಾರೆ ಎನ್ನುವುದನ್ನು ಇಲ್ಲಿ ಪ್ರಾಸಂಗಿಕವಾಗಿ ನೆನೆಯಬಹುದಾಗಿದೆ.

# ೭. ಯಶೋಧರಚರಿತೆ

ಜನ್ನ ಕವಿಯ 'ಯಶೋಧರಚರಿತೆ' (ನ್ಯಾಯವಾಗಿ ಕೃತಿನಾಮ 'ಯಶೋಧರ ಚರಿತ' ಎಂದಿರಬೇಕು) ಕ.ವೆಂ. ರಾಘವಾಚಾರ್ಯರಿಂದ ಸಂಪಾದಿತವಾಗಿ ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಮಾಲೆಯ ಪ್ರಕಟನೆಯಾಗಿ ೧೯೪೧ರಲ್ಲಿ ಹೊರಬಂದಿತು. ಎರಡನೆಯ ಮುದ್ರಣ ೧೯೪೩ರಲ್ಲಿ ಆಯಿತು. "ಪಾಠದಲ್ಲಿ ಒಂದೆರಡೂ ಮಿಕ್ಕೆಡೆ ಒಂದೆರಡೂ ಮಾಡಿರುವ ಮಾರ್ಪಾಟನ್ನು ಬಿಟ್ಟರೆ, ಇದು ಮೊದಲ ಮುದ್ರಣದ ಪುನರ್ಮುದ್ರಣ" ಎಂಬುದಾಗಿ ಆಚಾರ್ಯರೇ ಹೇಳಿದ್ದಾರೆ. ಮೂರನೆಯ ಮುದ್ರಣದಿಂದ (೧೯೪೯) ಮುಂದಕ್ಕೆ ಏನೂ ಬದಲಾವಣೆಯಾದಂತೆ ತೋರುವುದಿಲ್ಲ. ಈಚೆಗೆ ಬೇರೆ ಸಂಪಾದಕರ ಪರಿಷ್ಕರಣಗಳೂ ಸಹಾಯಕಸಾಹಿತ್ಯವೂ ಬೇಕಾದ ಹಾಗೆ ಬಂದಿದ್ದರೂ ಆಚಾರ್ಯರ ಸಂಪಾದನೆಗೆ ಇರುವ, ಸಹಾಯಕಸಾಹಿತ್ಯಕ್ಕೆ ಸಲ್ಲುವ ಮೌಲ್ಯವಾಗಲಿ, ಪ್ರಸಾರವಾಗಲಿ ತಗ್ಗಿಲ್ಲವೆಂದೇ ಹೇಳಬೇಕು. ಇದು ಅವರ ಕೆಲಸದ ರೀತಿಯನ್ನೂ ಪಾಂಡಿತ್ಯದ ಶಕ್ತಿಯನ್ನೂ ತೋರಿಸುತ್ತದೆ.

ಸಂಪಾದನೆಯ ಕೆಲಸ ಆಚಾರ್ಯರ ಪಾಲಿಗೆ ಬಂದ ಸಂದರ್ಭವನ್ನು ಅವರೇ ತಮ್ಮ ನೆನಪುಗಳಲ್ಲಿ (ನಂದಾನೆನಪು, ಪು. ३೯೨) ಹೀಗೆ ದಾಖಲಿಸಿದ್ದಾರೆ: "೧೯३೮-३೯ರ ಸಮಯ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಕಟನ ಸಭೆಯನ್ನು ಮುಗಿಸಿಕೊಂಡು ಬೆಂಗಳೂರಿಗೆ ಹಿಂದಿರುಗಿದವರೆ ಶ್ರೀಯವರು ನನಗೆ ಹೇಳಿ ಕಳಿಸಿದರು. ಮನೆಗೆ ಹೋಗಿ ಕಂಡಾಗ ಅವರು, 'ಒಂದು ಸಂತೋಷದ ಸುದ್ದಿ. ಯಶೋಧರ ಚರಿತೆಯ ಸಂಗ್ರಹದ ಕೆಲಸವನ್ನು ನಿಮಗೆ ವಹಿಸಲು ತೀರ್ಮಾನಿಸಿದೆ. ಅದನ್ನು ಚೆನ್ನಾಗಿ ಮಾಡಬೇಕು. ಆ ಕೆಲಸವನ್ನು ನಾನೇ ವಹಿಸಿಕೊಳ್ಳಬೇಕೆಂದು ಸಮಿತಿಯವರ ಒತ್ತಾಯ. ನಾನು ಅವರಿಗೆ ಸಮಾಧಾನ ಹೇಳಿ, ನನ್ನ ವಿಶ್ವಾಸವಿರುವ ಸಮರ್ಥ ಶಿಷ್ಯನೊಬ್ಬನಿಂದ ಆ ಕೆಲಸವನ್ನು ಸಮರ್ಪಕವಾಗಿ ಮಾಡಿಸಿಕೊಡುತ್ತೇನೆಂದು ಭರವಸೆ ಕೊಟ್ಟು ನಿಮ್ಮ ಹೆಸರನ್ನು ಒಪ್ಪಿಸಿದ್ದೇನೆ. ನನ್ನ ನಂಬಿಕೆಯನ್ನು ಉಳಿಸಿ, ನನ್ನನ್ನು ಬಿಟ್ಟುಕೊಡಬೇಡಿ' ಎಂದು ಹೆಮ್ಮೆಯಿಂದ ಹೇಳಿದರೂ ಎಚ್ಚರಿಕೆಕೊಟ್ಟರು. ನಾನು 'ತಮ್ಮ ಆಶೀರ್ವಾದ; ಪ್ರಯತ್ನ ಮಾಡುತ್ತೇನೆ' ಎಂದು ಹೇಳಿ ಬಂದೆ. ತರುವಾಯ ಎರಡು ವರ್ಷದ ಮೇಲೆ ಹಸ್ತಪ್ರತಿಯನ್ನು ಒಪ್ಪಿಸಿದಾಗ, ಅದನ್ನು ಆಮೂಲಾಗ್ರವಾಗಿ ಓದಿ ಮೆಚ್ಚಿಕೊಂಡರು."

ಶ್ರೀಯವರು ತಮ್ಮ ಶಿಷ್ಯನನ್ನು ಗುರುತಿಸಿದ್ದು, ಪ್ರೋತ್ಸಾಹಿಸಿದ್ದು ಹೀಗೆ. ಆಚಾರ್ಯರು ತಮ್ಮ ಮೇಲಿನ ಅವರ ಭರವಸೆಯನ್ನು ಹುಸಿ ಮಾಡಲಿಲ್ಲ ಎನ್ನುವುದು ಸಂಪಾದಿತ ಕೃತಿಯನ್ನು ನೋಡಿದಾಗ ತಿಳಿಯುವುದು.

ಜನಪ್ರಿಯ ಹಳಗನ್ನಡಕಾವ್ಯಗಳಲ್ಲಿ ಯಶೋಧರಚರಿತೆಗೆ ಒಳ್ಳೆಯ ಸ್ಥಾನವಿದೆ. ಆಚಾರ್ಯರಿಗೆ ಮೊದಲೇ ಈ ಕೃತಿಯನ್ನು ಪದ್ಮರಾಜ ಪಂಡಿತರೂ (೧೮೯೪) ಮಂ. ಆ. ರಾಮಾನುಜಯ್ಯಂಗಾರರೂ (೧೯೧೧) ಸಂಪಾದಿಸಿ ಪ್ರಕಟಿಸಿದ್ದರು. ಪರಿಷ್ಕರಣವನ್ನು ಇನ್ನೂ ಉತ್ತಮಪಡಿಸಿ ಪ್ರೌಢವಿದ್ಯಾರ್ಥಿಗಳ ಸಲುವಾಗಿ ಒಂದು

ಸಂಗ್ರಹಗ್ರಂಥವನ್ನು ತಕ್ಕ ಪೀಠಿಕೆ ಸಹಾಯಕ ಸಾಹಿತ್ಯಗಳೊಂದಿಗೆ ಪ್ರಕಟಿಸಬೇಕೆನ್ನುವುದು ಪ್ರಕಟನ ಸಮಿತಿಯ ಅಪೇಕ್ಷೆಯಾಗಿದ್ದಿತು. ಆ ಅಪೇಕ್ಷೆಯನ್ನು ಆಚಾರ್ಯರು ಸಮರ್ಥವಾಗಿ ಪೂರೈಸಿದರು.

**ಸಂಪಾದಿತವಾದ ಕೃತಿಯ ಬಗ್ಗೆ ಕೆಲವು ಮಾತುಗಳು:** ತಮ್ಮ ಪರಿಷ್ಕರಣಕ್ಕೆ ಆಚಾರ್ಯರು ಪೂರ್ವೋಕ್ತವಾದ ಎರಡು ಮುದ್ರಿತಪ್ರತಿಗಳನ್ನೂ ಮೂರು ಓಲೆಯ ಪ್ರತಿಗಳನ್ನೂ ಬಳಸಿದ್ದಾರೆ. ಓಲೆಯ ಪ್ರತಿಗಳಲ್ಲಿ ಎರಡು ಮಂ.ಆ. ರಾಮಾನುಜಯ್ಯಂಗಾರರು ನೋಡಿದ್ದವು (ಗ., ಚ.), ಒಂದು ಸ್ವಾದಿಯ ಜೈನಮಠದ್ದು (ಸ.). ಇವುಗಳಲ್ಲಿ ಗ, ಮತ್ತು ಸ, ಪ್ರತಿಗಳು ಹೆಚ್ಚು ಹೋಲಿಕೆಯುಳ್ಳವೂ ಹಳೆಯವೂ ತಕ್ಕಮಟ್ಟಿಗೆ ಶುದ್ಧವೂ ಆದುವು. ಗ್ರಂಥಪಾಠದಲ್ಲಿ ಆದಷ್ಟುಮಟ್ಟಿಗೆ ಈ ಎರಡು ಪ್ರತಿಗಳನ್ನು ಅನುಸರಿಸಿದೆ" ಎಂಬುದಾಗಿ ಆಚಾರ್ಯರು ತಮ್ಮ ಆಧಾರ ಪ್ರತಿಗಳ ಬಗ್ಗೆ ಸ್ಪಷ್ಟಪಡಿಸಿದ್ದಾರೆ. ಅಲ್ಲದೆ, "ಹೆಚ್ಚಾಗಿ ವಿದ್ಯಾರ್ಥಿಗಳನ್ನೇ ಗುರಿಯಾಗಿಟ್ಟುಕೊಂಡು ಸಂಗ್ರಹವನ್ನು ಸಿದ್ಧಮಾಡಿರುವುದರಿಂದ ಅರ್ಥವ್ಯತ್ಯಾಸವಾಗಲಿ ಸಂದೇಹವಾಗಲಿ ಇದ್ದ ಹೊರತು ವೃಥಾ ಪಾಠಾಂತರಗಳನ್ನು ಕೊಡುವ ಗೋಜಿಗೆ ಹೋಗಿಲ್ಲ" ಎಂಬುದಾಗಿ ಅವರು ಹೇಳಿರುವುದು ಕೂಡ ಸರಿಯೇ. ಮೂಲಪಾಠವನ್ನು ಗೊತ್ತುಮಾಡುವಲ್ಲಿ ಬೇರೆ ಬೇರೆ ಎರಡು ಸ್ಥಳಗಳ ಪ್ರತಿಗಳನ್ನು ಹೋಲಿಸಿ ನೋಡಿ ಹೋಲಿಕೆಯುಂಟೆಂದು ಕಂಡಿರುವುದೇ ಅಲ್ಲದೆ ಅವುಗಳ ಪ್ರಾಚೀನತೆ ಶುದ್ಧತೆಗಳನ್ನು ಕೂಡ ಲಕ್ಷಿಸಿರುವುದು ಸಮರ್ಪಕವಾಗಿಯೇ ಇದೆ. ಆದರೆ ಬಾಹ್ಯಸಾಕ್ಷಿಗಳಿಗಾಗಿ 'ಸೂಕ್ತಿಸುಧಾರ್ಣವ,' 'ಶಬ್ದಮಣಿದರ್ಪಣ'ದಂತಹ ಗ್ರಂಥಗಳ ಉದ್ಧೃತಲಕ್ಷ್ಯಗಳನ್ನೂ ಗಮನಿಸಬಹುದಾಗಿದ್ದಿತು. ಆದರೆ ಇದು ದೊಡ್ಡ ಕೊರತೆಯೇನೂ ಅಲ್ಲ.

ಗ್ರಂಥ ಒಂದು ಸಂಗ್ರಹವಾಗಿ ಹೊರಬರಬೇಕಾಗಿದ್ದ ಕಾರಣ, ಈ ಪುಟ್ಟ ಕಾವ್ಯದಲ್ಲಿ ಕೂಡ ಅಷ್ಟೇನೂ ಆವಶ್ಯಕವಲ್ಲವೆಂದು ತೋರಿದ ಭಾಗಗಳನ್ನು ಕೈ ಬಿಡುವುದು ಆಚಾರ್ಯರಿಗೆ ಅನಿವಾರ್ಯವಾಗಿತ್ತು. "ಯಶೋಧರಚರಿತೆಯ ಗ್ರಂಥ ಆಕಾರದಲ್ಲಿ ಸಣ್ಣದು. ಅಲ್ಲದೆ ಬೇರೆಯ ದೃಷ್ಟಿಯಿಂದಲೂ ಬಿಡಬೇಕಾದಂಥ ಪದ್ಯಗಳು ಅದರಲ್ಲಿ ತೀರ ಕಡಮೆ. ಇದರಿಂದ ಸಂಗ್ರಹದ ಕೆಲಸ ಕೊಂಚ ಕಷ್ಟವೇ ಆಯಿತೆನ್ನಬೇಕು" ಎಂದು ಹೇಳಿಕೊಂಡರೂ ಒಂದು ಪರಿಹಾರೋಪಾಯವನ್ನು ಅವರೇ ಇದಕ್ಕೆ ಕಂಡುಕೊಂಡಿದ್ದಾರೆ. ಅದೆಂದರೆ, ನಾಲ್ಕು ಅವತಾರಗಳಲ್ಲಿಯೂ ಯಾವ ಯಾವ ಪದ್ಯಗಳ ನಡುವೆ ಯಾವ ಯಾವ ಪದ್ಯಗಳನ್ನು ಬಿಟ್ಟಿದೆ ಎಂಬುದು ತಿಳಿಯುವಂತೆ ಸಂಖ್ಯೆಗಳೊಂದಿಗೆ ಅವನ್ನು ಅನುಬಂಧದಲ್ಲಿ ಪ್ರತ್ಯೇಕಿಸಿ ತೋರಿಸುವುದು. ಇವು ಕೂಡ ಸಂಪಾದಿತವಾಗಿಯೇ ಇಲ್ಲಿ ಸ್ಥಾನ ಪಡೆದಿವೆ. ಕೈಬಿಟ್ಟಿರುವ ಪದ್ಯಗಳ ಸಂಖ್ಯೆ ಕ್ರಮವಾಗಿ ೨೭, ೧೮, ೩, ೧೩ (ಒಟ್ಟು ೬೧). ಹಾಗೆ ಕೈಬಿಡುವಲ್ಲಿ ಆಚಾರ್ಯರು ತೋರಿರುವ ಔಚಿತ್ಯದ ದೃಷ್ಟಿ ಮೆಚ್ಚುವಂಥದೇ. ಆದರೂ ಕೆಲವಾದರೂ ಮೂಲದೊಳಗೇ ಸೇರಬಹುದಾಗಿದ್ದ, ಸುಂದರವಾಗಿದ್ದ ಪದ್ಯಗಳೂ ಇದ್ದುವೆಂದು ತಿಳಿಯಲವಕಾಶವಿದೆ (ಮುಖ್ಯವಾಗಿ ೧ನೆಯ ಅವತಾರದಲ್ಲಿ), ಗ್ರಂಥ ಸಂಗ್ರಹವಾಗಿಯೇ ಪ್ರಕಟವಾಗಬೇಕೆಂಬ ಉದ್ದೇಶವಿರದಿದ್ದರೆ, ಈ ಪುಟ್ಟ ಕೃತಿಗೆ, ಕೈಬಿಟ್ಟ ೬೧ ಪದ್ಯಗಳು ಹೆಚ್ಚೇನೂ ಆಗುತ್ತಿರಲಿಲ್ಲ. ಅನುಬಂಧದ ಪದ್ಯಗಳಿಗೂ ಶಬ್ದಕೋಶದ ಸೌಕರ್ಯವನ್ನು ಒದಗಿಸಿದ್ದರೆ ಅನುಕೂಲವಾಗುತ್ತಿತ್ತು.

ಸಂಪಾದಿತ ಗ್ರಂಥದ ಸಂಪಾದಕೀಯ ಕೌಶಲವನ್ನು ಕುರಿತು ಅಲ್ಲಲ್ಲಿ ವಿಮರ್ಶೆಯ ಮಾತುಗಳು ಬಂದಿವೆ. ಕೆಲವು ಕಡೆ ಇನ್ನೂ ಪರಿಷ್ಕಾರಕ್ಕೆ ಅವಕಾಶವುಂಟೆಂದು ಹೇಳಬಹುದಾಗಿದೆ. ಉದಾಹರಣೆಗೆ: 'ಜೀವ ಕಪ್ಪಿನಿಂ' ಎಂಬ ಪಾಠಕ್ಕಿಂತ "ಜೀವಪಂಕದಿಂ' ಎಂಬ ಪಾಠ (೧-೩೭) ವ್ಯಾಕರಣಸಮ್ಮತ. 'ಇಂಪಾಗದು' ಎಂಬೆಡೆಗೆ 'ಇಂಬಾಗದು' (೧-೪೦) ಬಹುಶಃ ಸೂಕ್ತ ಎನ್ನುವುದು ಎರಡೂ ಶಬ್ದಗಳಿಗಿರುವ ಅರ್ಥಗಳನ್ನು ಲಕ್ಷಿಸಿದರೆ ತಿಳಿಯುತ್ತದೆ. ಕಳೆ[ಪಾ]ದೊಡೆ - ಕಳೆ[ವಾ]ದೊಡೆ (೧-೪೪) ಇಲ್ಲಿ ಪ್ರತಿಗಳ ಪಾಠ ಅತೃಪ್ತಿಕರ ಎನ್ನುವುದು ಸ್ಪಷ್ಟ. ಆದರೆ ಕಳೆ(ವು) ಸಂಭಾವ್ಯ; ಹಿಂಸೆಯ ಮೋ[ಹಂ] ಎಂಬ ಪಾಠಕ್ಕಿಂತ 'ಹಿಂಸೆಯಮೋಘಂ' (೩-೧೭) ಸೂಕ್ತ. 'ಅಮೋಘಂ' ಎಂಬ ಅವ್ಯಯವನ್ನು ಇಲ್ಲಿ ಒಪ್ಪಿ 'ಹಿಂಸೆಯು ತಪ್ಪದೆ / ಖಂಡಿತವಾಗಿ ಗ್ರಾಹ್ಯವೇ?' ಎಂದು ಅರ್ಥೈಸಬೇಕು. "ಮನೆಗೆ ಉಬ್ಬೆಗಮೆಳೆದೊಯ್ವಂದದೆ' ಎನ್ನುವೆಡೆ ವಿಸಂಧಿಪ್ರಯೋಗವಿರುವುದರಿಂದ "ಮನೆಗೆ ನಿರ್ವೇಗದೊಳೊಯ್ವಂದದೆ' ಗ್ರಾಹ್ಯವೆಂದು (೩-೧೭) ತೋರುತ್ತದೆ. 'ನೆ[ಲಂ] ನುಂಗಿದುದೋ' ಎಂಬಲ್ಲಿ ಸಂಪಾದಕೀಯ ಊಹಾಪಾಠ ಬಹುಶಃ ಅನಾವಶ್ಯಕವಾಗಿತ್ತು: "ನೆಗಳ್ ನುಂಗಿದುದೋ' ಎಂಬ ಪ್ರತಿಗಳ ಪಾಠ ಸೊಗಸಾದ ಅರ್ಥವನ್ನೇ ಕೊಡುತ್ತಿದೆ (೪-೧೧). 'ಏನು ಮೊಸಳೆ ನುಂಗಿಹಾಕಿತ್ತೋ?" ಎನ್ನುವ ನುಡಿಗಟ್ಟಿನಂತಹ ವ್ಯಂಗ್ಯೋಕ್ತಿ ಪದ್ಯದ ಆಶಯವನ್ನು ಬೆಳಸುತ್ತದೆ. ಮೂಗ ನ[ಡೆ]ಯೊತ್ತಿ' ಎಂಬುದರಲ್ಲಿ 'ಅಡೆಯೊತ್ತು' ಪದ ಅನ್ಯತ್ರ ಅಪರಿಚಿತ; 'ಮೂಗನೊಡೆಯೊತ್ತಿ' ಎಂದು ಪ್ರತಿಗಳ ಪಾಠದಲ್ಲಿ ಕಾಣುವಂತೆ (೪-೧೩) ಇದ್ದರೆ, 'ಒಡೆಯೊತ್ತು' ಪೂರ್ವಕವಿಪ್ರಯೋಗಗಳಿಂದಾಗಿ ಸಮರ್ಥನೀಯವಾಗುತ್ತದೆ.

ಹೀಗೆ ಕೆಲವು ಕಡೆ ಪಾಠಗಳ ಸುಧಾರಣೆಗೆ ಅವಕಾಶವಿದ್ದರೂ, ಅಂತಹ ಅವಕಾಶಗಳು ಸಿಕ್ಕುವುದು ಕಡಮೆಯೆಂದೇ ಹೇಳಬೇಕು.

ಈವರೆಗೆ ಪಾಠಪರಿಷ್ಕರಣವಿಚಾರವನ್ನು ಸ್ವಲ್ಪಮಟ್ಟಿಗೆ ನೋಡಿ ಆಯಿತು. ಇನ್ನು ಪೀಠಿಕೆ, ಮತ್ತು ಅನಂತರ ಅನುಬಂಧಗಳ ವಿಚಾರ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಕವಿಕಾವ್ಯಮಾಲೆಯ ಈ ತೆರನ ಸಂಗ್ರಹಗಳಲ್ಲಿ ಎಲ್. ಗುಂಡಪ್ಪನವರ 'ಆದಿಪುರಾಣ ಸಂಗ್ರಹ', ಡಿ.ಎಲ್. ನರಸಿಂಹಾಚಾರ್ಯರ 'ಪಂಪರಾಮಾಯಣ ಸಂಗ್ರಹ' ಇಂತಹ ಗ್ರಂಥಗಳಿಗೆ ಬರೆದ ಪೀಠಿಕೆಗಳ ದರ್ಜೆಗೆ ರಾಘವಾಚಾರ್ಯರ 'ಯಶೋಧರಚರಿತೆ'ಯ ಸಂಗ್ರಹಕ್ಕೆ ಬರೆದ ಪೀಠಿಕೆಯೂ ನಿಸ್ಸಂಶಯವಾಗಿ ಸೇರುತ್ತದೆ.

೭೫ ಪುಟಗಳ ಪರಿಮಿತಿಯಲ್ಲಿ ಕಾವ್ಯದ ಅಧ್ಯಯನಕ್ಕೆ ಬೇಕಾದ ಎಲ್ಲಾ ಸಾಮಗ್ರಿಯನ್ನೂ, ವಿಸ್ತೃತವಿಮರ್ಶೆಯನ್ನೂ ಒಳಕೊಂಡ ಹಾಗೆ ಇಲ್ಲಿ ತುಂಬಿಕೊಟ್ಟಿದೆ. ಕವಿ, (ಅವನ) ನಾಮಾಂತರಗಳು, ಕಾಲ, ದೇಶ, ಮನೆತನ, ವಿದ್ಯಾಭ್ಯಾಸ, ರಾಜಾಶ್ರಯ, ಬಿರುದುಗಳು, ಕವಿಪ್ರತಿಷ್ಠೆ, ಪೂರ್ವಕವಿಸ್ಮರಣೆ, ಕವಿತಾಶಕ್ತಿ ಈ ವಿಷಯಾನುಕ್ರಮದಲ್ಲಿ ಮೊದಲು ಕವಿವಿಚಾರ ಯಥೋಚಿತವಾಗಿ ಬಂದಿದೆ. ಅನಂತರದಲ್ಲಿ ಜನ್ನಕರ್ತೃತ್ವದ ಶಾಸನಗಳ ಸಾಮಾನ್ಯಪರಿಚಯವಿದೆ; ಇನ್ನೊಂದು ಕೃತಿ ಅನಂತನಾಥಪುರಾಣದ ಪರಿಚಯ ಪೂರ್ವಪೀಠಿಕೆ

ಕಥಾಸಾರಾಂಶ ಇವುಗಳನ್ನೊಳಗೊಂಡು ಎಡೆಪಡೆದಿದೆ. ಅದರ ಅನಂತರದಲ್ಲಿ ನೇರವಾಗಿ ಯಶೋಧರಚರಿತೆಯ ಕಡೆ ಬಂದು, ಇಲ್ಲಿಯೂ ಪೂರ್ವಪೀಠಿಕೆ ಕಥಾಸಾರಾಂಶಗಳನ್ನು ಕೊಟ್ಟು, ಕಥಾವಸ್ತುವಿನ ಸುಲಭ ಗ್ರಹಿಕೆಗೆ ಬೇಕಾಗುವ ಯಶೋಧರ ಚಂದ್ರಮತಿಯರ ಜನ್ಮಾಂತರವಿಚಾರವನ್ನು ಕುರಿತು ಬರೆದು, ಗ್ರಂಥವಿಮರ್ಶೆಯನ್ನು ಸವಿಸ್ತರವಾಗಿ ಮಾಡಿರುವುದು ಕಾಣುತ್ತದೆ. ಕೊನೆಗೆ ಕನ್ನಡವೂ ಸೇರಿದಂತೆ ವಿವಿಧ ಭಾರತೀಯ ಭಾಷೆಗಳಲ್ಲಿ ಯಶೋಧರಕಥಾ ಸಾಹಿತ್ಯ ಹೇಗೆ ಕಂಡುಬರುತ್ತದೆ ಎಂದು ಒಂದು ಒಟ್ಟುನೋಟದಲ್ಲಿ ತೋರಿಸಿದೆ.

ಕವಿಕಾವ್ಯವಿಚಾರದಲ್ಲಿ ಬಹುಕಾಲದಿಂದ ಸಾಮಾನ್ಯ ಅಂಗೀಕೃತ ಅಭಿಪ್ರಾಯವಾಗಿದ್ದ ಒಂದೆರಡು ಗ್ರಹಿಕೆಗಳು ಈಗ ಹೊಸ ಶೋಧಗಳಿಂದ ಬದಲಾಗಿವೆ. ಅಭಿನವ ಶರ್ವವರ್ಮ ನಾಗವರ್ಮನು ಜನ್ನನ ಗುರುವೆಂಬ, ಕವಿಸುಮನೋಬಾಣನು ಜನ್ನನ ತಂದೆಯೆಂಬ ಗ್ರಹಿಕೆಗಳೇ ಅವು, ಬದಲಾಗಿರುವಂಥವು. ಗ್ರಂಥವಿಮರ್ಶೆಯ ಭಾಗದಲ್ಲಿ ಹಿಂಸಾಪಾತಕ ಮತ್ತು ಪ್ರಾಯಶ್ಚಿತ್ತಗಳ ದೃಷ್ಟಾಂತಕಥೆಯಾಗಿ ಎತ್ತಿ ತೋರಿಸಿರುವ ಕೋಲ್‌ರಿಜ್ ಕವಿಯ 'ಪುರಾತನ ನಾವಿಕ' ಕವಿತೆ ವಿಮರ್ಶೆಗೆ ಒಂದು ಹೊಸ ಮಗ್ಗುಲನ್ನು ಜೋಡಿಸಿದೆ. ಇದೊಂದು ವಿಶೇಷ. ಆಚಾರ್ಯರ ಇಂಗ್ಲಿಷ್ ಭಾಷೆ ಸಾಹಿತ್ಯಗಳ ಪರಿಣತಿ ಇಲ್ಲಿ ಪ್ರಯೋಜನಕ್ಕೆ ಬಂದಿದೆ. ಕಥಾ ಸಾರಾಂಶ ನಿರರ್ಗಳಗತಿಯಲ್ಲಿ ಕಥನಕೌಶಲದಿಂದಲೂ ಕಥಾವಿಮರ್ಶೆ ಸೂಕ್ಷ್ಮವಾದ ಒಳನೋಟಗಳಿಂದ ಕಾವ್ಯಾತ್ಮಕ ಸೌಂದರ್ಯದಿಂದಲೂ ಕೂಡಿರುವುದು ಶ್ಲಾಘ್ಯವಾಗಿದೆ. ಶೈಲಿಯ ಸೊಗಸಂತೂ ಈ ಹಿಂದೆ ನಾವು ಗಮನಿಸಿರುವಂತೆ ವಿಶಿಷ್ಟವಾದ ನುಡಿನಿರಿಗೆಯಲ್ಲಿ ವೀರ್ಯವತ್ತಾಗಿ ವಿಜೃಂಭಿಸಿರುವಂಥದು. ಆಚಾರ್ಯರು ಪೀಠಿಕೆಯ ಭಾಗದಲ್ಲಿ ಜನ್ನನ ಇನ್ನೊಂದು ಕೃತಿಯಾದ 'ಅನಂತನಾಥಪುರಾಣ'ವನ್ನು ಪರಿಚಯಿಸುವುದಕ್ಕೂ ಹೆಚ್ಚಿನ ಉತ್ಸಾಹ ತೋರಿಸಿದ್ದಾರೆ. ಅದರಲ್ಲಿಯೂ ಅನಂತನಾಥ ಪುರಾಣವೆಂಬ ಕಾವ್ಯಾರಣ್ಯದೊಳಗಿನ ಚೆಲುವಿನ ಕೊಳ್ಳವೆಂದು ಖ್ಯಾತವಾಗಿರುವ ಚಂಡಶಾಸನ ಕಥಾಪ್ರಸಂಗವನ್ನು ಕುತೂಹಲ ಹುಟ್ಟುವಂತೆ ಮುನ್ನೆಲೆಗೆ ತಂದಿದ್ದಾರೆ. ಇದರಿಂದ ಎರಡೂ ಕಾವ್ಯಗಳ ವಿಭಿನ್ನ ಪ್ರಣಯಕಥೆಗಳನ್ನು ಒಟ್ಟಾಗಿ ನೋಡಲು, ತುಲನೆಮಾಡಲು ಅವಕಾಶ ದೊರೆತಿದೆ; ಆಚಾರ್ಯರೇ ಆ ಕೆಲಸಕ್ಕೆ ನಾಂದೀಪದವನ್ನು ತಮ್ಮ ವಿಮರ್ಶೆಯ ಮೂಲಕ ಹಾಡಿದ್ದಾರೆ.

ಈಗ ಅನುಬಂಧಗಳ ವಿಚಾರ : ೮೨ ಪುಟಗಳ ಅನುಬಂಧಗಳಲ್ಲಿ ಕ್ರಮವಾಗಿ ಯಶೋಧರ ಚರಿತೆಯ ಸಂಗ್ರಹದಲ್ಲಿ ಬಿಟ್ಟಿರುವ ಪದ್ಯಗಳು, ಜೀವದಯಾಷ್ಟಮಿ ನೋಂಪಿಯ ಕಥೆ, ಅನಂತನಾಥ ಪುರಾಣದ ಚಂಡಶಾಸನಕಥೆಯ ಸಂಗ್ರಹ, ಜನ್ನನ ಶಾಸನಗಳ ಸಂಕ್ಷೇಪಪರಿಚಯ ಇವು ಸ್ಥಾನ ಪಡೆದಿವೆ. ಈ ನಾಲ್ಕು ಅನುಬಂಧಗಳು ಮುಗಿದ ಕೂಡಲೇ ಯಶೋಧರಚರಿತೆಯ ಸಂಸ್ಕೃತ ವಾಕ್ಯವೇಷ್ಟನಗಳಿಗೆ ಕನ್ನಡದಲ್ಲಿ ಅರ್ಥ ಮತ್ತು ಶಬ್ದಕೋಶಗಳು ಬಂದಿವೆ. ಇಲ್ಲಿಯೂ ಆಚಾರ್ಯರು ಶ್ರದ್ಧೆ, ದಕ್ಷತೆ ಮತ್ತು ವಿದ್ವತ್ತೆಯ ಪ್ರೌಢಿಮೆಗಳನ್ನು ಮೆರೆದಿದ್ದಾರೆ.

೧. ಯಶೋಧರ ಚರಿತೆಯಲ್ಲಿ ಬಿಟ್ಟಿರುವ ಪದ್ಯಗಳನ್ನು ಅವು ಮೂಲಕಾವ್ಯದಲ್ಲಿ ಇರಬೇಕಾದ ಸ್ಥಾನಗಳಲ್ಲಿ ಇದ್ದದು ತಿಳಿಯುವಂತೆ ಸಂಖ್ಯಾನುಕ್ರಮದಲ್ಲಿ ತೋರಿಸಿದೆ. ಇಲ್ಲಿಯೂ ಸಂಪಾದನೆಯ ಕೆಲಸ ನಡೆದಿದೆ,

ಪಾಠಾಂತರಗಳನ್ನು ನಿರ್ದೇಶಿಸಿದೆ. ಅಲ್ಲದೆ ಜನ್ನನ ಶಾಸನಗಳಲ್ಲಿಯೋ ಅನಂತನಾಥ ಪುರಾಣದಲ್ಲಿಯೋ ಆ ಪದ್ಯಗಳು ಬಂದಿದ್ದರೆ, ಅವುಗಳ ಪಾಠಾಂತರಗಳನ್ನೂ ಸೂಚಿಸಿದೆ. ೨. ಜೀವದಯಾಷ್ಟಮಿ ನೋಂಪಿಯ ಕಥೆಯಲ್ಲಿ ಯಶೋಧರನ ಕಥೆಯೇ ವಸ್ತುವಾದ್ದರಿಂದ ಈ ಗದ್ಯ ಕಥೆಯನ್ನು ಅದರ ಸ್ವಾರಸ್ಯಕ್ಕಾಗಿಯೂ ಸಂದೇಶಕ್ಕಾಗಿಯೂ ಇಲ್ಲಿ ಪೂರ್ಣವಾಗಿ ಕೊಟ್ಟಿದೆ. ತುಲನಾತ್ಮಕವಾದ ವಿವೇಚನೆಗೂ ಇದರಿಂದ ಸಹಾಯವಾಗಿದೆ. ೩. ಅನಂತನಾಥ ಪುರಾಣದೊಳಗಿನ ಚಂಡಶಾಸನನ ಕಥೆ ಆ ಕಾವ್ಯದ ವಸ್ತು ಮತ್ತು ಶೈಲಿಗಳ ದೃಷ್ಟಿಯಿಂದ ಪ್ರಾಣಪದಕದ ಹಾಗೆ ಇರುವಂಥದು. ಅದನ್ನು ಕಥಾದೃಷ್ಟಿಯಿಂದ ಯಥೋಚಿತವಾಗಿ ಸಂಗ್ರಹಿಸಿ, ಆ ಹಿಂದಿನ ಮುದ್ರಿತ ಪರಿಷ್ಕರಣದ ಪಾಠವನ್ನು (ಓರಿಯಂಟಲ್ ರಿಸರ್ಚ್ ಇನ್ಸಿಟ್ಯೂಟ್, ಮೈಸೂರು, ೧೯೩೦) ಸಮರ್ಥವಾಗಿ ಉತ್ತಮಪಡಿಸಿದೆ (ಆದರೂ ಅದು ಇನ್ನೂ ಉತ್ತಮಗೊಳ್ಳಲು ಅವಕಾಶವೇನೋ ಇದೆ. ನೋಡಿ : 'ಕಾವ್ಯಸಂಚಯ', ಮೈ.ವಿ.ವಿ.ದ ಕನ್ನಡ ಅಧ್ಯಯನ ಸಂಸ್ಥೆ, ೧೯೭೧), ಇನ್ನೊಂದು ರೀತಿಯ ಅಧಾರ್ಮಿಕ ಪ್ರಣಯ ಕಥೆಯನ್ನು ಹೋಲಿಕೆಗಾಗಿ ಕೊಟ್ಟಿರುವುದು ಒಂದು ಪ್ರಯೋಜನವಾದರೆ, ಜನ್ನನ ಕಾವ್ಯಶಕ್ತಿ ಚಂಪೂಪದ್ಧತಿಯ ಬೇರೊಂದು ಕಾವ್ಯದಲ್ಲಿ ಹೇಗೆ ವಿಜೃಂಭಿಸಿದೆ ಎಂದು ತಿಳಿಯಲವಕಾಶವಾಗುವುದು ಇನ್ನೊಂದು ಪ್ರಯೋಜನ ಎಂದು ಹೇಳಬಹುದು. ೪. ಜನ್ನನ ಕರ್ತೃತ್ವದ ಎರಡು ಶಾಸನಗಳಲ್ಲಿ ಒಂದು, ಚನ್ನರಾಯ ಪಟ್ಟಣ ತಾಲ್ಲೂಕು ದಂಡಿಗನ ಹಳ್ಳಿ ಹೋಬಳಿ ಆನೆಕೆರೆ ಗ್ರಾಮದಲ್ಲಿ ದೊರೆತ ತಾಮ್ರಶಾಸನ; ೯ ಪತ್ರಗಳಲ್ಲಿ ೨೦೦ ಸಾಲುಗಳನ್ನು ಒಳಗೊಂಡಿದ್ದು, ಇನ್ನೊಂದು, ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯ ಶಿಲಾಶಾಸನ; ೧೨೦ ದೊಡ್ಡ ಸಾಲುಗಳನ್ನು ಮೀರಿರುವುದಾಗಿದ್ದು, ಅಲ್ಲಿಯ ಅಮೃತೇಶ್ವರ ದೇವಾಲಯದಲ್ಲಿರುವಂಥದು. ಇಲ್ಲಿ ಆಚಾರ್ಯರು ಪ್ರಾತಿನಿಧಿಕವಾಗಿ ಈ ಶಾಸನಗಳ ಪಾಠಗಳನ್ನು ತೀರ ಅಡಕಗೊಳಿಸಿ ಪ್ರಕಟಿಸಿದ್ದಾರೆ. ಸಂಪಾದಿತವಾದ ರೂಪದಲ್ಲಿಯೇ ಓದುಗರಿಗೆ ಅನುಕೂಲಿಸುವಂತೆ ಮುದ್ರಿಸಿದ್ದಾರೆ. ಶಾಸನದ ಕಾವ್ಯಭಾಗಗಳನ್ನು ಐತಿಹಾಸಿಕ ವಸ್ತುವಿವರಗಳೂ ಜನ್ನಕವಿಯ ಕಾವ್ಯಶಕ್ತಿಯೂ ಇನ್ನೂ ಪರಿಸ್ಫುಟಗೊಳ್ಳುವ ಹಾಗೆ ಇನ್ನಷ್ಟು ವಿಸ್ತಾರವಾಗಿ ಉದ್ಧರಿಸಿದ್ದರೆ ಚೆನ್ನಾಗಿದ್ದಿತೆಂದು ತೋರುವುದು. ಬಹುಶಃ ಗ್ರಂಥವಿಸ್ತರಭೀತಿಯಿಂದ ಹಾಗೆ ಮಾಡಿಲ್ಲದಿರಬಹುದು. ಮೊದಲನೆಯ ತಾಮ್ರಶಾಸನದಲ್ಲಿ ಆನೆಗನ ಕೆರೆ (ಆನೆಕೆರೆ) ಅಗ್ರಹಾರದ ನಾನಾ ಗೋತ್ರದ ಮಹಾಜನರಿಗೆ ವೀರಬಲ್ಲಾಳನಿಂದ ದತ್ತಿಯಾಗಿ ಕೊಡಲ್ಪಟ್ಟ ವಿಚಾರವಿದೆ; ಎರಡನೆಯ ಶಿಲಾಶಾಸನದಲ್ಲಿ ತರೀಕೆರೆಯ ಅಮೃತಾಪುರದ ಅಮೃತೇಶ್ವರ ದೇವಾಲಯದ ಪ್ರತಿಷ್ಠೆಯಾಗಿ ಪೂಜಾವ್ಯವಸ್ಥೆಗೆ ಆಸಂದಿನಾಡಿಗೆ ಸೇರಿದ ಗ್ರಾಮವೊಂದನ್ನು ವೀರಬಲ್ಲಾಳನು ದತ್ತಿ ಅಗ್ರಹಾರವಾಗಿ ಧಾರೆಯೆರೆದು ಕೊಟ್ಟುದನ್ನು ತಿಳಿಸಿದೆ. ಈ ಸುಂದರ ಕಾವ್ಯಕೃತಿಗಳಿಗೆ ಇನ್ನೂ ಹೆಚ್ಚಿನ ಪ್ರಚಾರ ಕವಿಕಾವ್ಯಮಹೋನ್ನತಿಯ ದೃಷ್ಟಿಯಿಂದ ಸಿಕ್ಕಬೇಕಾಗಿದೆ.

ಕೊನೆಯ ಎರಡು ಭಾಗಗಳಲ್ಲಿ, ಯಶೋಧರಚರಿತೆಯಲ್ಲಿ ಬಂದಿರುವ ಸಂಸ್ಕೃತ ವಾಕ್ಯವೇಷ್ಟನಗಳಿಗೆ ಕನ್ನಡದಲ್ಲಿ ಅರ್ಥವನ್ನು ಕೊಟ್ಟಿರುವುದೂ ಕಾವ್ಯದ ಕಠಿನಪದಗಳಿಗೆ ಸುಲಭವಾಗಿ ಅಭಿಪ್ರಾಯವಾಗುವಂತೆ ಶಬ್ದಾರ್ಥಗಳನ್ನು ಬರೆದಿರುವುದೂ ತೃಪ್ತಿಕರವಾಗಿ ನಡೆದಿದೆ. ಶಬ್ದಕೋಶದಲ್ಲಿ ಕೆಲವೆಡೆ ಪ್ರಶ್ನಚಿಹ್ನೆಗಳನ್ನಿಟ್ಟಿದೆ. ಇದು ಆಚಾರ್ಯರ ಪ್ರಾಮಾಣಿಕತೆಯನ್ನು ತೋರಿಸುವುದಲ್ಲದೆ, ಅವರ ಅಸಾಮರ್ಥ್ಯವನ್ನಲ್ಲ. ಈ ಕಾವ್ಯವನ್ನು ಅವರು

ಸಂಪಾದಿಸುವ ವೇಳೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಇನ್ನೂ ಸಿದ್ಧವಾಗಿರಲಿಲ್ಲವೆಂಬುದನ್ನು ನಾವು ಗಮನಿಸಬೇಕು. ಪದ್ಯಗಳ ಅಕಾರಾದ್ಯನುಕ್ರಮಣಿಯಿಲ್ಲದ್ದು ಇಲ್ಲಿಯ ಒಂದೇ ಕೊರತೆ.

ಒಟ್ಟಿನಲ್ಲಿ ಹೇಳಬಹುದಾದ ಮಾತು ಎಂದರೆ: ಕ.ವೆಂ. ರಾಘವಾಚಾರ್ಯರ 'ಯಶೋಧರ ಚರಿತೆ' ಒಂದು ಸುಸಂಪಾದಿತವಾದ ಕೃತಿ. ಅವರ ವಿದ್ವತ್ತೆಗೂ ರಸಿಕತೆಗೂ ಸಾಕ್ಷಿಯಾಗಿ ಅದು ಎಲ್ಲ ಕಾಲಕ್ಕೂ ನಿಲ್ಲುತ್ತದೆ. ಅವರಿಗೆ ಖ್ಯಾತಿ ತಂದುಕೊಟ್ಟಿರುವ ಕೆಲಸಗಳಲ್ಲಿ ಇದಕ್ಕೆ ಒಂದು ಮೇಲಾದ ಸ್ಥಾನವಿದೆ. ಈಚಿನ ಇತರ ಪರಿಷ್ಕರಣಗಳಿಗೂ ಇದು ಆಧಾರವಾಗಿ ಒದಗಿರುವುದು ಇದರ ಅನನ್ಯತೆಗೆ, ಹಿರಿಮೆಗೆ ಹೆಚ್ಚಿನ ಕಾರಣವಾಗಿದೆಯೆಂದು ಹೇಳಬೇಕು. ಲೋಕವ್ಯವಹಾರದಲ್ಲಿ ಯಶೋಧರಚರಿತೆಯೂ ರಾಘವಾಚಾರ್ಯರ ಹೆಸರೂ ಅನ್ಯೋನ್ಯಸಂಬಂಧವನ್ನು ಪಡೆದಿರುವುದು ಕೂಡ ಒಂದು ಸ್ವಾರಸ್ಯದ ಸಂಗತಿ.

---

## ೮. ಇತರ ಸಾಹಿತ್ಯ ಚಟುವಟಿಕೆಗಳು

### ವ್ಯಾಕರಣಗಳು : ಶಬ್ದಮಣಿದರ್ಪಣ

ಬೆಂಗಳೂರು ಐಬಿಎಚ್. ಪ್ರಕಾಶನ 'ಕವಿಕಾವ್ಯಪರಂಪರೆ'ಯ ೧೩ನೆಯ ಪುಸ್ತಕವಾಗಿ 'ವ್ಯಾಕರಣಗಳು' ('ಕನ್ನಡ ವ್ಯಾಕರಣಗಳು' ಎಂದಿರಬೇಕಾಗಿತ್ತು) ಎಂಬುದನ್ನು ೧೯೭೭ರಲ್ಲಿ ಪ್ರಕಟಿಸಿತು. ಇದರಲ್ಲಿ ಎರಡನೆಯ ಭಾಗ 'ಶಬ್ದಮಣಿದರ್ಪಣ'ವನ್ನು ಕುರಿತಿದೆ. ಇದನ್ನು ಕ.ವೆಂ. ರಾಘವಾಚಾರ್ಯರು (ಸಹ ಲೇಖಕರು : ಡಾ. ವಿನೋದ ಅವರು) ಬರೆದಿದ್ದಾರೆ; ಇಲ್ಲಿಯೇ ಒಂದು ರೀತಿಯಲ್ಲಿ ಅನುಬಂಧರೂಪವಾಗಿ ವರ್ಣಮಾಲೆ ಲಿಂಗವಿವಕ್ಷೆಗಳಿಗೆ ಸಂಬಂಧಿಸಿದ ಹಾಗೆ ತಮಿಳುವ್ಯಾಕರಣದ ಒಂದು ಸರಳವಾದ ಪರಿಚಯವನ್ನು ಕನ್ನಡಿಗರಿಗಾಗಿ ಅವರು ಮಾಡಿಕೊಟ್ಟಿದ್ದಾರೆ.

ಆಚಾರ್ಯರು ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕನ್ನಡ ವಿದ್ಯಾರ್ಥಿಗಳಿಗೆ 'ಶಬ್ದಮಣಿದರ್ಪಣ'ವನ್ನು ಬೋಧಿಸಿರಬಹುದು. ಇದು ಹೇಗೇ ಇದ್ದರೂ, ಅವರು ಈ ಕೃತಿಭಾಗವನ್ನು ಬರೆಯುವಲ್ಲಿ ಮಾಡಿರುವ ವಿಚಾರ ವಿಮರ್ಶೆಗಳು ಒಂದು ಪೂರ್ವಸಿದ್ಧತೆ ಪಕ್ವತೆಗಳನ್ನು ಪ್ರಕಟಿಸಿರುವುದಂತೂ ನಿಶ್ಚಯ. ಇದನ್ನು 'ಶಬ್ದಮಣಿದರ್ಪಣಸಾರ'ದ ಮೊದಲಿಗೆ ಬರೆದಿರುವ ಪೀಠಿಕೆಯಲ್ಲಿ ವಿಶೇಷವಾಗಿ ಗಮನಿಸಬಹುದಾಗಿದೆ. ಕೇಶಿರಾಜನು ಇತರ ಹಳಗನ್ನಡ ವೈಯಾಕರಣರಿಗಿಂತ ನಾಲ್ಕು ಹೆಜ್ಜೆ ಮುಂದೆ ಹೋಗಿ ಒಬ್ಬ ವರ್ಣನಾತ್ಮಕ ಭಾಷಾವಿಜ್ಞಾನಿಯ ಹಾಗೆ ಸ್ವತಂತ್ರವಾಗಿ ವಿಷಯವಿವೇಚನೆ ಮಾಡಿದ್ದಾನೆ ಎಂದು ಇಲ್ಲಿ ಅವರು ಸಯುಕ್ತಿಕವಾಗಿ ಮನವರಿಕೆಮಾಡಿಕೊಟ್ಟಿದ್ದಾರೆ. ಹಳಗನ್ನಡ ಭಾಷೆಯ ಸ್ವರೂಪವನ್ನೂ ಬೆಳವಣಿಗೆಯ ಹಂತದಲ್ಲಿ ಸ್ವಾಭಾವಿಕವಾಗಿ ತಲೆದೋರಿದ ಶೈಥಿಲ್ಯಗಳನ್ನೂ ಆ ವಿಷಯದಲ್ಲಿ ಅವನ ನಿಲವು ನಿರ್ಣಯಗಳನ್ನೂ ಇಲ್ಲಿ ಅವರು ಚೆನ್ನಾಗಿ

ಗುರುತಿಸಿದ್ದಾರೆ. ವಿವೇಚನೆ ಅಸಮಗ್ರವಾಗಿದ್ದರೂ ವೈಯಾಕರಣನ ದೃಷ್ಟಿವಿಶೇಷವಂತೂ ಇದರಿಂದ ವಿದಿತವಾಗುವುದು ಸಾಧ್ಯವಿದೆ.

'ಶಬ್ದಮಣಿದರ್ಪಣ'ದ ವಸ್ತುವಿಮರ್ಶೆಗೆ ಹಿನ್ನೆಲೆಯಾಗಿ ವ್ಯಾಕರಣದ ಸಾಮಾನ್ಯ ಸ್ವರೂಪ, ಕಾರ್ಯ ಮತ್ತು ಪ್ರಯೋಜನಗಳು, ವ್ಯಾಕರಣದ ಇತಿಮಿತಿಗಳು, ತಮಿಳು-ಕನ್ನಡ ವ್ಯಾಕರಣಗಳ ನಿರೂಪಣವಿಧಾನದಲ್ಲಿ ಕಂಡುಬರುವ ಪ್ರತ್ಯೇಕತೆಗಳು ಇವನ್ನೆಲ್ಲ ಈ ಹಿನ್ನೆಲೆಯ ಭಾಗದಲ್ಲಿ ಚೊಕ್ಕವಾಗಿ ಸ್ಪಷ್ಟಪಡಿಸಿದ್ದಾರೆ.

ಆರಂಭದ ವಾಕ್ಯಪುಂಜವನ್ನು ನಿದರ್ಶನವಾಗಿ ಇಲ್ಲಿ ಉದಾಹರಿಸಬಹುದಾಗಿದೆ:

"ಭಾಷಾಕ್ಷೇತ್ರದಲ್ಲಿ ಮಾನವನ ಪ್ರಯೋಗಪರೀಕ್ಷೆ ಅನುಭವಗಳಿಂದ ಮಾತುಗಳ ಬಳಕೆಯ ಬಗ್ಗೆ ತೇರಿ ಮೂಡಿದ ಸಾಮಾನ್ಯತತ್ತ್ವ ನಿಯಮಗಳೇ ವ್ಯಾಕರಣ. ಭಾಷಾವ್ಯವಹಾರಕ್ಕೆ ಆ ಭಾಷೆಯನ್ನು ಆಡುವ ಜನರಲ್ಲಿ ಒಂದು ಸರ್ವಸಮ್ಮತವಾದ ಸಂಕೇತ, ವಿಧಾನ, ನಿಯಮ ಅಗತ್ಯ. ಇದಕ್ಕಾಗಿಯೇ ಪದಗಳ ರೂಪದಲ್ಲೂ ಅರ್ಥದಲ್ಲೂ ಆ ಪದಗಳ ಪ್ರಯೋಗದಲ್ಲೂ ಒಮ್ಮತ, ಕಟ್ಟು ಇರಬೇಕಾದ್ದು, ಈ ಕಟ್ಟಿಗೆ ಒಳಪಟ್ಟು ಬಳಕೆ ಸಾಧುವೆಂದೂ ಕಟ್ಟುಮೀರಿದ್ದು ಅಥವಾ ಕಟ್ಟುಕಾಣದ್ದು ಅಸಾಧುವೆಂದೂ ಸಾಮಾನ್ಯವಾಗಿ ವ್ಯವಹಾರವಾಗುತ್ತದೆ. ಈ ಕಟ್ಟಿನ ಕಾಪಾಟ ಒಂದು ದೃಷ್ಟಿಯಲ್ಲಿ ಆಡುಮಾತಿಗಿಂತ ಬರಹದಲ್ಲಿ ಹೆಚ್ಚು ಅಗತ್ಯ, ವ್ಯಾಕರಣದ ಸಹಾಯ, ಪ್ರಯೋಜನ ಇಲ್ಲಿ. ವ್ಯಾಕರಣ ನುಡಿಯ ಜಾಯಮಾನ ಜಾಡುಗಳನ್ನು ತೋರಿಸುತ್ತದೆ. ಭಾಷೆ ಮುಂದು, ವ್ಯಾಕರಣ ಹಿಂದು. ವ್ಯಾಕರಣ ಮುಂದಿನ ಕಟ್ಟಿಗಿಂತ ಹೆಚ್ಚಾಗಿ ಭಾಷೆ ತುಳಿದುಬಂದ ಹಾದಿಯನ್ನು ಗುರುತಿಸುವ ಗೆರೆಗಟ್ಟು, ವ್ಯಾಕರಣ ನಿಯಮದರ್ಶಕವೇ ಹೊರತು ನಿಯಮಕರ್ತೃವಲ್ಲ. ನಿಯಮಕರ್ತೃ ಜನರ ಭಾಷಾಬುದ್ಧಿ, ಭಾಷಾಸಂಸ್ಕಾರ. ಭಾಷೆ ಸಜೀವ, ಸಚೇತನ. ಕಾಲ ಕಾಲಕ್ಕೆ ಅದು ಮಾರ್ಪಡುತ್ತಲೇ ಇರುತ್ತದೆ. ಮಾರ್ಪಟ್ಟಂತೆಲ್ಲ ಹಳಕಟ್ಟುಗಳು ಸಡಿಲಿ, ಕಳಚಿ, ಹೊಸಕಟ್ಟುಗಳು ಏರ್ಪಡುತ್ತವೆ. ಮಾರ್ಪಡುವುದು ಬಲುಮಟ್ಟಿಗೆ ಹೊರರೂಪ, ಪ್ರಕಾರಗಳು; ಜೀವಾಳಸೂತ್ರ ಯಾವ ಕಾಲಕ್ಕೂ ಒಂದೇ. ಹಾವು ಪರೆಯುರ್ಚಿ ಹೊಸ ಹರೆಯ ತಾಳುವಂತೆ ನುಡಿಯೂ ಹಳ ಹೆಕ್ಕಳಿಕೆಗಳನ್ನು ಕಳಚಿ ಒಗೆಯುತ್ತ, ಹೊಸ ಹೊಸ ಕಳೆಗಳನ್ನು ತಳೆಯುತ್ತ ಚಿರಯೌವನಶಾಲಿಯಾಗಿರುತ್ತದೆ. ಇದನ್ನು ಅನುಸರಿಸಿ ವ್ಯಾಕರಣವೂ ಹೊಸಹೊಸ ರೂಪ ತಾಳುತ್ತಿರುತ್ತದೆ"

ವ್ಯಾಕರಣದ ಸ್ವರೂಪ, ಕಾರ್ಯ ಪ್ರಯೋಜನಗಳನ್ನು ಇಲ್ಲಿ ಆಚಾರ್ಯರು ಹೇಳಿರುವುದಕ್ಕಿಂತ ಸೊಗಸಾಗಿ, ಪರಿಷ್ಕಾರವಾಗಿ ಹೇಳುವುದು ಸಾಧ್ಯವೆಂದು ತೋರದು. ಮುಂದುವರಿದು, ಕೇಶಿರಾಜನು ಶಾಸನಪ್ರಯೋಗಗಳನ್ನು ಲಕ್ಷಿಸದಿರುವ ಕೊರತೆ, ಭಟ್ಟಾಕಳಂಕನ ಶಾಸ್ತ್ರಪ್ರಾಮಾಣ್ಯದ ಸಂದಿಗ್ಧತೆ ಇವನ್ನು ಅವರು ಸರಿಯಾಗಿಯೇ ಗುರುತಿಸಿದ್ದಾರೆ. ಶಬ್ದಮಣಿದರ್ಪಣದ ವ್ಯಾಕರಣವಿವರಣೆಗೆ ತೊಡಗುವ ಮೊದಲು, ಕವಿರಾಜಮಾರ್ಗದ ವ್ಯಾಕರಣ ವಿಷಯಗಳು, ನಾಗವರ್ಮ ಭಟ್ಟಾಕಳಂಕರ ವ್ಯಾಕರಣಗಳ ಸಾಮಾನ್ಯಪರಿಚಯದ ಮಾತು ಮುಂದೆ ಬಂದಿದ್ದು, ಈ ಸಂದರ್ಭದಲ್ಲಿ ದ್ರಾವಿಡಭಾಷೆಗಳ ಮೊದಲ ವ್ಯಾಕರಣಗಳು ಸಂಸ್ಕೃತದಲ್ಲಿಯೇ ಏಕೆ ರಚಿತವಾದುವು ಎಂಬುದಾಗಿ ಒಂದು ಪ್ರಶ್ನೆಯನ್ನೆತ್ತಿಕೊಂಡು ಸಂಭಾವ್ಯವಾದ ಕೆಲವು ಉತ್ತರಗಳನ್ನು ಅದಕ್ಕೆ ಕಾಣಿಸಿರುವುದಂತೂ ಅವರ

ಪಾಂಡಿತ್ಯದ ಒಳನೋಟಗಳು ಪ್ರಖರವಾದವು ಎಂದು ಹೇಳುವಂತಿವೆ. ಹಾಗೆಯೇ ಕೇಶಿರಾಜನು ಲಕ್ಷ್ಯಗಳಿಗೆ ವಚನಸಾಹಿತ್ಯವನ್ನು ಏಕೆ ಪುರಸ್ಕರಿಸಲಿಲ್ಲ ಎಂಬ ಪ್ರಶ್ನೆಯನ್ನೆತ್ತಿ "ಮಾರ್ಗಸಾಹಿತ್ಯದ ಪಕ್ಷಪಾತದೃಷ್ಟಿಗೂ ಆಡುಮಾತಿನ ಸಾಹಿತ್ಯದ ಕಡೆಗಣಿಕೆಗೂ ಕಾರಣಗಳಿದ್ದಿರಬಹುದು. ಅದರ ಪ್ರಸ್ತಾಪಕ್ಕೆ ಇಲ್ಲಿ ತೊಡಗುವುದಿಲ್ಲ" ಎಂದು ಅಡಿಟಿಪ್ಪಣಿಯಲ್ಲಿ ತಿಳಿಸಿರುವುದು ಅವರ ದೃಷ್ಟಿಯಿಂದ ಸರಿಯಿರಬಹುದು. ಆದರೆ ಈ ಬಗ್ಗೆ ಅವರ ವಿಚಾರಗಳೇನೆಂದು ನಾವು ತಿಳಿಯುವಂತಿದ್ದಿದ್ದರೆ ಚೆನ್ನಾಗಿತ್ತು. - "ಈಗ ಕನ್ನಡಿಗರಿಗೆ ಕನ್ನಡ ವ್ಯಾಕರಣ ಎಂದರೆ ಶಬ್ದಮಣಿದರ್ಪಣ ಒಂದೇ" ಎಂಬ ಸೂತ್ರಪ್ರಾಯವಾದ ಮಾತಿನಿಂದ ತೊಡಗಿ, ಅಂತಹ ಕೃತಿಯ ರಚನೆಗೆ ಅವನಿಗಿದ್ದ ಅರ್ಹತೆಯನ್ನು ತೃಪ್ತಿಕರವಾಗಿ ವಿವರಿಸಿದ್ದಾರೆ, ಆಚಾರ್ಯರು. ವ್ಯಾಕರಣದೊಳಗೆ ಬಂದಿರುವ ಕೋಶಸದೃಶ ಪದಪಟ್ಟಿಗಳ ವಿಚಾರವಾಗಿ ಬರೆಯುತ್ತ, "ಪೂರ್ವಾರ್ಜಿತದ ಆಸ್ತಿ ತನ್ನ ಕಣ್ಣ ಮುಂದೆಯೇ ಕರಗುತ್ತಿರುವುದನ್ನು ನೋಡಿ, ಆ ಆಸ್ತಿಯ ಬೆಲೆಯನ್ನು ಬಲ್ಲವನು ಕೊರಗಿ ಪಟ್ಟ ಪಾಡು ಇದು" ಎಂದು ಹೇಳಿರುವುದು ಹೃದ್ಯವಾಗಿದೆ.

ಇಲ್ಲಿಂದ ಮುಂದೆ ಱ - ಕುಳ, ಲ-ಳಕಾರ, ಉಪಧೆ, ವ್ಯಂಜನಾಂತಪ್ರಕೃತಿಗಳು ಸ್ವರಾಂತಗಳಾಗುವುದು, ಕೆಲವು ವುಕಾರಾಂತ ನಾಮಪ್ರಕೃತಿಗಳು ಅಂತ್ಯವರ್ಣ ಲೋಪವನ್ನು ಪಡೆಯುವುದು, ಎತ್ತಣದು ಆರದು ಪೋದುದು ಆದುದು ಇವು ಎತ್ತಣ್ತು ಆರ್ತು ಪೋಯ್ತು ಆಯ್ತು ಎಂದು ಆಡುಮಾತಿನ ರೂಪಗಳಿಗೆ ಪರಿವರ್ತಿಸುವುದು, ಸಬಿಂದುಕ-ಅಬಿಂದುಕ-ವಿಕಲ್ಪಬಿಂದು ರೂಪಗಳು ಇತ್ಯಾದಿ ವ್ಯಾಕರಣವಿಷಯಗಳ ಶೈಥಿಲ್ಯಗಳನ್ನೂ ಮಾರ್ಪಾಡುಗಳನ್ನೂ ಕೇಶಿರಾಜನು ಹೇಗೆ ಗುರುತಿಸಿದ್ದಾನೆ, ಅವಕ್ಕೆ ಸಮಾಧಾನಗಳೇನು ಎಂಬುದನ್ನು ಆಚಾರ್ಯರು, ಅಲ್ಲಲ್ಲಿ ತಮಿಳಿನ ಸಹಾಯವನ್ನೂ ಪಡೆದು, ವಿವರಿಸಿದ್ದಾರೆ.

ಮುಂದಿನ 'ಶಬ್ದಮಣಿದರ್ಪಣಸಾರ' ಕೃತಿವಸ್ತುವಿನ ಒಂದು ಒಟ್ಟುನೋಟ; ನಡುನಡುವೆ ಲಘುಟಿಪ್ಪಣಿಗಳಿಂದ ವ್ಯಾಕರಣಾಂಶದ ವಿಶದೀಕರಣ. ಈ ವಿಶದೀಕರಣ ಇನ್ನೂ ಅನೇಕ ಕಡೆಗಳಲ್ಲಿ ಬೇಕಾಗಿತ್ತು. ಪರಿಚಯದ ಹಾಗೂ ಟಿಪ್ಪಣಿಗಳ ಭಾಗಗಳಲ್ಲಿ ಅಭಿಪ್ರಾಯಭೇದಗಳಿಗೆ ಅವಕಾಶವಿದ್ದರೂ ಸಾಮಾನ್ಯಾಂಶಗಳನ್ನು ತಕ್ಕಮಟ್ಟಿಗೆ ತೃಪ್ತಿಕರವಾಗಿ ಒಗ್ಗೂಡಿಸಿದೆ. ಭಾಷಿಕವಾಗಿ ವ್ಯತ್ಯಾಸಗಳನ್ನು ನಿರೂಪಿಸುವುದು, ಅದರಲ್ಲಿಯೂ ಸಂಗ್ರಹವಾಗಿ ನಿರೂಪಿಸುವುದು ಕಷ್ಟವೆಂಬ ಕಾರಣದಿಂದ ಅಪಭ್ರಂಶ ಪ್ರಕರಣವನ್ನು ಕೈಬಿಟ್ಟಿರುವುದು ಸರಿಯಾಗಿಯೇ ಇದೆ. ತಮಿಳು ವ್ಯಾಕರಣದ ದಿಗ್ದರ್ಶನಕ್ಕಾಗಿ ವರ್ಣಮಾಲೆ ಲಿಂಗವಿವಕ್ಷೆಗಳ ಕೆಲವಂಶಗಳೊಂದಿಗೆ ವಿವೇಚನೆ ಮುಗಿದಿದೆ. ತಮಿಳುವ್ಯಾಕರಣದ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಡಬೇಕೆಂಬ ಪ್ರಥಮಪ್ರಯತ್ನ ನಡೆದುದು ಎ.ಎನ್. ನರಸಿಂಹಯ್ಯನವರಿಂದ; ಆದರೆ ಅದು ಆರಂಭದಲ್ಲಿಯೇ ನಿಂತಿತು. ಕ.ವೆಂ. ರಾಘವಾಚಾರ್ಯರು ಸಹ ಅದನ್ನು ಮುಂದುವರಿಸದೆಹೋದುದು ಕನ್ನಡಿಗರ ದುರ್ದೈವ.

ಮುದ್ರಿತಕೃತಿಯ ಈ ಭಾಗದಲ್ಲಿ ಹೇರಳವಾದ ಅಚ್ಚಿನ ತಪ್ಪುಗಳು ಬಿದ್ದಿರುವುದರಿಂದ ಅಭ್ಯಾಸಿಗಳು ಗೊಂದಲಕ್ಕೆ ಸಿಕ್ಕಿಕೊಳ್ಳುವಂತಾಗಿರುವುದಕ್ಕೆ ವಿಷಾದಿಸಬೇಕಾಗಿದೆ. ಆಚಾರ್ಯರೇ ಕರಡಚ್ಚುಗಳನ್ನು ನೋಡಿದ್ದರೆ, ಹೀಗಾಗುತ್ತಿರಲಿಲ್ಲ.

## “ಕನ್ನಡದ ಬಾವುಟ' ಪುಸ್ತಕದ ಸಿದ್ಧತೆ

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿಷ್ಠಿತ ಪ್ರಕಟನೆಗಳಲ್ಲಿ 'ಕನ್ನಡದ ಬಾವುಟ' ಸಹ ಒಂದು. ೧೯೩೮ರಲ್ಲಿ ಇದರ ಮೊದಲನೆಯ ಮುದ್ರಣ ಹೊರಬಂದ ಮೇಲೆ, ಉದ್ದಕ್ಕೆ ಹಲವು ಮುದ್ರಣಗಳಾಗುತ್ತ, ಇದು ತನ್ನ ಜನಪ್ರಿಯತೆಯನ್ನು ಹಾಗೆಯೇ ಉಳಿಸಿಕೊಂಡಿದೆ. ಕನ್ನಡ ನಾಡು ನುಡಿಗಳಲ್ಲಿ ಆಸಕ್ತರಾದ ಸಾಮಾನ್ಯರಿಂದ ಮೊದಲುಗೊಂಡು ವಿದ್ವಜ್ಜನರವರೆಗೆ ಪ್ರಿಯವಾದ ಕಾವ್ಯಸಂಕಲನವಾಗಿಯೂ ಪರೀಕ್ಷೆಗಳ ಪಠ್ಯಗ್ರಂಥವಾಗಿಯೂ ಅದು ಮನ್ನಣೆ ಪಡೆದಿದೆ. ಇದರ ಸಂಪಾದಕರು ಶ್ರೀಯವರೇ ಆಗಿದ್ದರೂ, ಇದರ ಸಿದ್ಧತೆ ಪ್ರಕಟನೆಗಳಲ್ಲಿ ಅವರಿಗೆ ಬಹುವಾಗಿ ನೆರವಾದವರೆಂದರೆ, ವಿ. ಸೀತಾರಾಮಯ್ಯನವರು ಮತ್ತು ಕ.ವೆಂ. ರಾಘವಾಚಾರ್ಯರು.

ಈ ಗ್ರಂಥದ ಪ್ರಕಟನೆ ಸಾಧ್ಯವಾದ ಹಿನ್ನೆಲೆಯನ್ನು ರಾಘವಾಚಾರ್ಯರೇ ತಮ್ಮ 'ನಂದಾನೆನಪು'ವಿನಲ್ಲಿ ಸ್ವಲ್ಪಮಟ್ಟಿಗೆ ವಿವರಿಸಿದ್ದಾರೆ (ಪು. ೩೯೧). ಕವಿ ಕೃತಿಗಳ ಆಯ್ಕೆಯನ್ನು ಶ್ರೀಯವರೇ ಗುರುತಿಸಿಟ್ಟಿದ್ದರು. ಆ ಆಯ್ಕೆಯತ್ತ ಮತ್ತೊಮ್ಮೆ ಕಣ್ಣಾಡಿಸಿ, ಅಕಸ್ಮಾತ್ತಾಗಿ ಬಿಟ್ಟುಹೋದ ಭಾಗಗಳಿದ್ದರೆ ಸೇರಿಸಿ, ಸಂಕಲನದ ಹಸ್ತಪ್ರತಿಯನ್ನು ಸಿದ್ಧಪಡಿಸುವುದಿತ್ತು. ಶ್ರೀಯವರ ಆಶಯದಂತೆ ಈ ಸಂಕಲನದಲ್ಲಿ ಪೂರ್ವಕವಿಗಳ ಕಾವ್ಯಭಾಗಗಳನ್ನು ರಾಘವಾಚಾರ್ಯರೂ ಆಧುನಿಕ ಕವಿಗಳ ಕಾವ್ಯಭಾಗಗಳನ್ನು ವಿ.ಸೀ. ಅವರೂ ನೋಡಿಕೊಂಡರು. ಆಧುನಿಕ ಕವಿಗಳ ರಚನೆಗಳಿಗೆ ಅವರಿಂದ ಸಮ್ಮತಿ ತರಿಸಿಕೊಳ್ಳುವುದು, ಮೇಲ್ವಿಚಾರಣೆ ನೋಡಿಕೊಳ್ಳುವುದು, ಕರಡುಗಳನ್ನು ಪರಿಶೀಲಿಸುವುದು ಇವೆಲ್ಲ ಈ ಇಬ್ಬರ ಪಾಲಿಗೆ ಬಂದಿತು. ಒಂದು ವಾರದಲ್ಲಿ ಪುಸ್ತಕ ಬೆಂಗಳೂರು ಪ್ರೆಸ್ಸಿನಲ್ಲಿ ಅಚ್ಚಾಗಿ ಬಂದು, ಪರಿಷತ್ತಿನ ಐದನೆಯ ವಸಂತ ಸಾಹಿತ್ಯೋತ್ಸವ ಸಂದರ್ಭದಲ್ಲಿ ಬಿಡುಗಡೆಗೊಂಡಿತು. ಶ್ರೀಯವರು ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ (೧೭-೪-೧೯೩೮) ಈ ಇಬ್ಬರ ಸಹಾಯವನ್ನೂ ಸಂತೋಷದಿಂದ ನೆನೆದಿದ್ದಾರೆ.

## 'ಸಂಭಾವನೆ'ಯ ಸಂಪಾದನೆ

ಬಿ.ಎಂ. ಶ್ರೀಕಂಠಯ್ಯನವರು ತಮ್ಮ ೫೮ನೆಯ ವಯಸ್ಸಿಗೆ (೧೯೪೨) ನಿವೃತ್ತರಾಗಲಿದ್ದಾಗ, ಅವರಿಗೆ ಒಂದು ಸಂಭಾವನಗ್ರಂಥವನ್ನು ಒಪ್ಪಿಸಬೇಕೆಂದು ಅವರ ಶಿಷ್ಯರೂ ಅಭಿಮಾನಿಗಳೂ ಸಂಕಲ್ಪಿಸಿದರು. ಇದಕ್ಕೆ ಸೂತ್ರಧಾರರಾಗಿ ಮುಂದೆ ನಿಂತವರು ಮಾಸ್ತಿಯವರು. ಅವರ ಸಹಾಯಕ್ಕೆ ಆಗ ಒದಗಿದವರು ವಿ.ಸೀ. ಅವರು

ಮತ್ತು ರಾಘವಾಚಾರ್ಯರು, ಲೇಖನಗಳ ಸಂಗ್ರಹ, ಸಂಪಾದನ ಕಾರ್ಯದಲ್ಲಿ ಆಚಾರ್ಯರು ವಿಶೇಷವಾಗಿ ಶ್ರಮಿಸಿದರು. ಅಲ್ಲದೆ ಅಭಿನಂದನೆಯ ಕಾರ್ಯಕ್ರಮದ ನಿರ್ವಹಣೆಯಲ್ಲಿಯೂ ಅವರು ಉತ್ಸಾಹದಿಂದ ಭಾಗಿಗಳಾದರು. ಈ ಸಮಗ್ರ ಕಾರ್ಯಕ್ರಮದ ವರದಿಯನ್ನು ಸಿದ್ಧಪಡಿಸಿ, ಕಾರಕರ್ತರ ಪರವಾಗಿ ಸಭೆಗೆ ನಿವೇದಿಸಿದವರು ಕೂಡ ಆಚಾರ್ಯರೇ. ಇದರ ವರದಿ 'ಕನ್ನಡ ನುಡಿ'ಯಲ್ಲಿ ಪ್ರಕಟವಾಗಿದೆ (೧೯-೧-೧೯೪೧), ಕನ್ನಡದ ಸಂಭಾವನಗ್ರಂಥಗಳ ಪ್ರಕಟನೆಯ ಇತಿಹಾಸದಲ್ಲಿ ಶ್ರೀಯವರ ಸಂಭಾವನೆ'ಯ ಪ್ರಕಟನೆ ಮೊದಲನೆಯದು. ಅದರಿಂದಾಗಿ ಆಚಾರ್ಯರ ಪರಿಶ್ರಮವೂ ವರದಿಯ ನಿವೇದನೆಯೂ ಚರಿತ್ರಾರ್ಹವಾದ ಸಂಗತಿಗಳಾಗಿವೆ.

ಆಚಾರ್ಯರು ಈ ಸಂಬಂಧದಲ್ಲಿ ತಾವು ನಿರ್ವಹಿಸಬೇಕಾಗಿ ಬಂದ ಸಂಪಾದಕೀಯ ಜವಾಬ್ದಾರಿಗಳ ಬಗೆಗೆ 'ನಂದಾನೆನಪು'ವಿನಲ್ಲಿ ಸ್ವಲ್ಪಮಟ್ಟಿಗೆ ನೆನಪುಮಾಡಿಕೊಂಡಿದ್ದಾರೆ (ಪು. ೩೯೫-೯೬), ಇತರರ ಲೇಖನಗಳ ವಿಚಾರವಿರಲಿ, ಎಸ್.ವಿ. ರಂಗಣ್ಣನವರ ಲೇಖನವನ್ನು ಶೀರ್ಷಿಕೆಸಹಿತವಾಗಿ ತಿದ್ದಬೇಕಾಗಿ ಬಂದ ಸಂದರ್ಭವಂತೂ ಶ್ರೀಯವರ ಮೇಲಿನ ಆಚಾರ್ಯರ ಮಿಗಿಲಾದ ಗುರುಭಕ್ತಿಗೂ ವಿಲಕ್ಷಣ ಹಠ ಧೈಯ್ಯಗಳಿಗೂ ಸಾಕ್ಷಿ ಎನ್ನುವಂತಿದೆ. ಈ ಸಂಪುಟಕ್ಕೆ ಶಿಷ್ಯರಿಂದಲೂ ಅಭಿಮಾನಿಗಳಿಂದಲೂ ಲೇಖನಗಳನ್ನು ಬರಸುವಾಗ ಆಚಾರ್ಯರ ಸಲಹೆ ಸೂಚನೆಗಳು ನೇರವಾಗಿ ಒದಗಿರಬೇಕು ಎಂದು ಊಹಿಸುವುದಕ್ಕೆ ಅವರ ಗ್ರೀಕ್ ಗುರುಗಳಾದ ರೆ | ಎಚ್.ಕೆ. ಮೌಲ್ಟನ್ ಅವರ 'ಕ್ರೈಸ್ತಧರ್ಮದ ಐತಿಹಾಸಿಕತೆ' ಎಂಬ ಒಂದು ಲೇಖನ ಇಲ್ಲಿ ಸೇರುವಂತಾಗಿರುವುದೇ ಸಾಕ್ಷಿ. ಬಹುಶಃ ಅವರ ಇಂಗ್ಲಿಷ್ ಲೇಖನವನ್ನು ಆಚಾರ್ಯರೇ ಕನ್ನಡಿಸಿರುವುದು ಸಾಧ್ಯ. ಅಲ್ಲದೆ ತಮ್ಮದೇ 'ಗ್ರೀಕ್ ರುದ್ರನಾಟಕ' ಕುರಿತ ಲೇಖನದ ಕಾಣಿಕೆಯೂ ಉಂಟು.

## ಪ್ರಬುದ್ಧ ಕರ್ಣಾಟಕದ ಸಂಪಾದಕತ್ವ

ಮೈಸೂರು ವಿಶ್ವವಿದ್ಯಾನಿಲಯದ ಪ್ರತಿಷ್ಠಿತ ತ್ರೈಮಾಸಿಕಪತ್ರಿಕೆಗೆ ಒಂದು ಸಂಚಿಕೆಯ ಮಟ್ಟಿಗೆ (೨೯-೨,೧೯೪೭) ಸಂಪಾದಕರಾಗಿದ್ದರು. ಆದರೆ ಸಂಪಾದಕೀಯವಿಲ್ಲ. ಗೋವಿಂದ ಪೈ, ಕುವೆಂಪು ಮೊದಲಾದ ಗಣ್ಯರ ಬರಹಗಳಿವೆ. ಅವರು ಸಂಪಾದಕರಾಗಿ ಮುಂದುವರಿಯದಿರಲು ತಮ್ಮ ವರ್ಗಾವಣೆ ವಿಷಯದಲ್ಲಿ ಅವರಿಗೂ ರಿಜಿಸ್ಟ್ರಾರ್ ಅವರಿಗೂ ಕಹಿಯಾಗಿ ಮಾತುಕತೆ ನಡೆದುದೇ ಕಾರಣವೆಂದು 'ನಂದಾನೆನಪು'ವಿನಲ್ಲಿ ದಾಖಲಿಸಿದೆ (ಪು. ೪೧೧), ಆಚಾರ್ಯರು ತಮ್ಮ ಆತ್ಮಾಭಿಮಾನಕ್ಕೆ ಕುಂದು ಬಂದಾಗ ಕ್ಷಣಮಾತ್ರವೂ ಸಹಿಸುತ್ತಿರಲಿಲ್ಲವೆಂದು ಇಲ್ಲಿಯ ನಿರೂಪಣೆಯಿಂದ ತಿಳಿಯುವುದು. ಈ ಪತ್ರಿಕೆಯ ಚರಿತ್ರೆಯಲ್ಲಿ ಈ ಅಲ್ಪಕಾಲದ ಸಂಪಾದಕತ್ವವೂ ಒಂದು ದಾಖಲೆಯೇ.

## ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ - ಕನ್ನಡ ನಿಘಂಟುಯೋಜನೆ

ಮೈಸೂರು ಸರಕಾರದವರು ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಅಧಿಕೃತವಾದ ಒಂದು ಇಂಗ್ಲಿಷ್-ಕನ್ನಡ ನಿಘಂಟುವನ್ನು ಸಿದ್ಧಪಡಿಸಲು ೧೯೩೩ರಲ್ಲಿ ಆದೇಶ ಹೊರಡಿಸಿದರು. ಒಂದು ಸಂಪಾದಕಮಂಡಲಿ

ಏರ್ಪಟ್ಟಿತು: ಬೆಳ್ಳಾವೆ ವೆಂಕಟನಾರಣಪ್ಪನವರು (ಅಧ್ಯಕ್ಷರು ಮತ್ತು ಪ್ರಧಾನಸಂಪಾದಕರು); ಡಿ.ವಿ. ಗುಂಡಪ್ಪನವರು, ಬಿ.ಎಂ. ಶ್ರೀಕಂಠಯ್ಯನವರು, ಟಿ.ಎಸ್. ವೆಂಕಣ್ಣಯ್ಯನವರು, ಎ.ಆರ್. ಕೃಷ್ಣಶಾಸ್ತ್ರಿಗಳು, ಸಿ.ಕೆ. ವೆಂಕಟರಾಮಯ್ಯನವರು, ಬಿ. ಪುಟ್ಟಯ್ಯನವರು, ಡಿ.ಸಿ. ಸುಬ್ಬರಾಯಪ್ಪನವರು (ಸದಸ್ಯರು). ಆರಂಭದ ವರ್ಷಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಡದಲ್ಲಿಯೇ ಕಾರ್ಯಾಲಯ ಕೆಲಸ ಮಾಡುತ್ತಿತ್ತು. ಮುಖ್ಯವಾದ ಕಾರ್ಯಭಾರಕ್ಕೆ ಇಬ್ಬರು ಸಹಾಯಕಪಂಡಿತರನ್ನು ನೇಮಕ ಮಾಡಲಾಯಿತು. ಒಬ್ಬರು ಎಲ್. ಗುಂಡಪ್ಪನವರು, ಇನ್ನೊಬ್ಬರು ಕ.ವೆಂ. ರಾಘವಾಚಾರ್ಯರು.

ರಾಘವಾಚಾರ್ಯರ ಆಯ್ಕೆಯ ವಿಷಯದಲ್ಲಿ ಶ್ರೀಯವರಿಗೆ ದೃಢವಾದ, ಸುಮುಖವಾದ ಅಭಿಪ್ರಾಯವಿತ್ತು. ಅಲ್ಲದೆ ವಿಜ್ಞಾನವಿಷಯಗಳ ಪದವಿ, ಇಂಗ್ಲಿಷ್ ಭಾಷೆಯ ಪ್ರಭುತ್ವ ಮತ್ತು ಗ್ರೀಕ್ ಭಾಷಾವ್ಯಾಸಂಗ ಎಲ್ಲಾ ಅನುಕೂಲವಾಗಿ ಸೇರಿ ಬೆಳ್ಳಾವೆಯವರಿಗೂ ಅವರ ಆಯ್ಕೆ ಬೇಕಾಗಿತ್ತು. ಹೀಗಾಗಿ ಅವರ ಆಯ್ಕೆ ಸುಗಮವಾಗಿ ಆಯಿತು. ಅವರ ವೇತನ ತಿಂಗಳಿಗೆ ೬೦ ರೂ.

ಬೆಳ್ಳಾವೆಯವರು ಕೆಲಸದಲ್ಲಿ ದಕ್ಷತೆ ಪ್ರಾಮಾಣಿಕತೆ ಕಾಲನಿಷ್ಠೆಗಳನ್ನು ನಿರೀಕ್ಷಿಸುವ ಕಟ್ಟುನಿಟ್ಟಿನ ಮನುಷ್ಯರು, ಆಚಾರ್ಯರಿಗೂ ಇವೇ ಆದರ್ಶಗಳು. ಹೀಗಾಗಿ ಒಬ್ಬರನ್ನೊಬ್ಬರು ಇಷ್ಟಪಡುವಂತಾಯಿತು. ಬೆಳ್ಳಾವೆಯವರ ಕೈಕೆಳಗೆ ಕೆಲಸಮಾಡುತ್ತ ಹೋದ ಹಾಗೆ ಅವರ ವಿಷಯದಲ್ಲಿ ಅಮಿತವಾಗಿ ಗೌರವಾದರಗಳು ಬೆಳೆಯ ತೊಡಗಿ, ಪೂಜ್ಯಬುದ್ಧಿ ಮಿಗಿಲಾಯಿತು. ಬೆಳ್ಳಾವೆಯವರು ಆಚಾರ್ಯರ ಮೇಲೆ ಹೆಚ್ಚಿನ ವಿಶ್ವಾಸ ತೋರಿದರು; ತಾವೇ ಮಾಡಬೇಕಾದ ಕೆಲಸವನ್ನು ಮಾಡಲು ನಿರ್ವಾಹವಿಲ್ಲದಾಗ ಅವರಿಗೆ ವಹಿಸುವುದೂ ಇತ್ತು. ಶಬ್ದಾರ್ಥವಿಚಾರದ ಚರ್ಚೆಯಲ್ಲಿ ಅವರ ನಡುವೆ ಬಿರುಸಿನ ವಾಗ್ವಾದಗಳೂ ನಡೆಯುತ್ತಿದ್ದುದುಂಟು.

ನಿಘಂಟುಕಛೇರಿಯಲ್ಲಿ ೮ - ೯ ವರ್ಷಗಳು ಒಂದೇ ಸಮನೆ ಕೆಲಸ ಮಾಡುತ್ತಿದ್ದ ಆಚಾರ್ಯರಿಗೆ ಇದ್ದಕ್ಕಿದ್ದ ಹಾಗೆ ಈ ಕೆಲಸದಲ್ಲಿ ಏನೋ ಬೇಸರ ಹುಟ್ಟಿತು. ೧೯೪೨ರಲ್ಲಿ ಮೈಸೂರು ಮಹಾರಾಜ ಕಾಲೇಜಿನ ಅಧ್ಯಾಪಕರಾಗಿ ಹೋದರು. ಅಲ್ಲಿ ಅವರ ಸ್ಥಾನವಿತ್ತು. ಒಲ್ಲದ ಮನಸ್ಸಿನಿಂದಲೇ ಬೆಳ್ಳಾವೆಯವರು ಅವರನ್ನು ಕಳಿಸಿಕೊಡಬೇಕಾಯಿತು. ಇಷ್ಟರಲ್ಲೇ ೧೯೪೩ರಲ್ಲಿ ಬೆಳ್ಳಾವೆಯವರು ತೀರಿಕೊಂಡು, ಅವರ ಸ್ಥಾನಕ್ಕೆ ಎಂ.ಆರ್. ಶ್ರೀನಿವಾಸಮೂರ್ತಿಯವರು ಬಂದರು. ಅವರನ್ನು ಈ ಜವಾಬ್ದಾರಿಗೆ ಒಪ್ಪಿಸುವಂತೆ ಶ್ರೀಯವರು ಹೋದಾಗ, ರಾಘವಾಚಾರ್ಯರನ್ನು ಮತ್ತೆ ತಮ್ಮ ಕಛೇರಿಗೆ ಕಳಿಸಿಕೊಟ್ಟರೆ ತಾವು ಜವಾಬ್ದಾರಿಯನ್ನು ವಹಿಸಿಕೊಳ್ಳುವುದಾಗಿ ಅವರಿಗೆ ತಿಳಿಸಿದರಂತೆ. ಶ್ರೀಯವರ ಮಾತು ಮೀರಲಾಗದೆ ಆಚಾರ್ಯರು ಮತ್ತೆ ನಿಘಂಟುಕೆಲಸಕ್ಕೆ ಮರಳಿದರು.

ಎಂ.ಆರ್. ಶ್ರೀ.ಯವರು ರಾಘವಾಚಾರ್ಯರನ್ನು ವಿಶ್ವಾಸದಿಂದ ನಡೆಸಿಕೊಂಡರು. ಅವರ ಬಗ್ಗೆ ಬೆಳ್ಳಾವೆಯವರು ಬರೆದಿದ್ದ ರಹಸ್ಯವರದಿಯನ್ನು (Confidential report) ಅವರಿಗೆ ತೋರಿಸಿದರು. ವರದಿಯಲ್ಲಿ ಬೆಳ್ಳಾವೆಯವರು ಆಚಾರ್ಯರ ಬಗ್ಗೆ ತುಂಬ ಮೆಚ್ಚುಗೆಯ ಮಾತುಗಳನ್ನು ಬರೆದಿದ್ದರು. ಆಚಾರ್ಯರು ಹೇಳುತ್ತಾರೆ:

“ನಿಜವಾಗಿಯೂ ಬಂಗಾರದ ಮಾತುಗಳಾಗಿದ್ದುವು, ಅವು; ನನ್ನ ಯೋಗ್ಯತೆಗಿಂತ ನನ್ನ ದೇವರಾಗಿದ್ದ ಆ ಹಿರಿಯರ ದೊಡ್ಡತನವನ್ನೂ ವಾತ್ಸಲ್ಯವನ್ನೂ ತೋರಿಸುವಂಥವಾಗಿದ್ದುವು.

ಮತ್ತೆ ಮೂರು ವರ್ಷ ನಿಘಂಟುಕಾರ್ಯ ಮುನ್ನಡೆಯಿತು. ಈಗ ಆಚಾರ್ಯರು ಸಹಾಯಕ ಸಂಪಾದಕರ ಸ್ಥಾನದಲ್ಲಿ ಕೆಲಸ ಮಾಡಿದರು. (೧೯೪೩ - ೪೬). ಕೆಲಸ ಮುಗಿದು, ಎಂ.ಆರ್. ಶ್ರೀ ಅವರ ಪ್ರಧಾನಸಂಪಾದಕತ್ವದಲ್ಲಿ ೧೯೪೬ರ ಕೊನೆಗೆ ನಿಘಂಟು ಬಿಡುಗಡೆಗೊಂಡಿತು.

ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟುವಿನ ಯೋಜನೆಯಲ್ಲಿ ಕೆಲಸದ ಹಂತಗಳು ಹೇಗಿದ್ದುವು, ಅದರಲ್ಲಿ ವಿಶೇಷವಾಗಿ ಕ.ವೆಂ. ರಾಘವಾಚಾರ್ಯರ ಕಾರ್ಯಭಾರ ಯಾವ ರೀತಿಯದು ಇವನ್ನೆಲ್ಲ ಅಂದಿನ ಕಛೇರಿಯ ಕಡತಗಳನ್ನು ನೋಡಿಯೇ ಹೇಳಬೇಕಾಗುತ್ತದೆ. ಬಹುಶಃ ಮೊದಲ ಹಂತದಲ್ಲಿ ಎಲ್. ಗುಂಡಪ್ಪನವರೂ ಕ.ವೆಂ. ರಾಘವಾಚಾರ್ಯರೂ, ಅನಂತರದಲ್ಲಿ ಸಿಬ್ಬಂದಿ ವರ್ಗವನ್ನು ಸೇರಿದ ಎಂ.ವಿ. ಸೀತಾರಾಮಯ್ಯನವರೂ ಸಂಪಾದಕಮಂಡಲಿಯ ಚರ್ಚೆಗೆ ಅನುವಾಗಬೇಕಾಗಿದ್ದ ಸಭಾಪ್ರತಿಯನ್ನು ಸಿದ್ಧಪಡಿಸುತ್ತಿದ್ದರೆಂದು ತೋರುವುದು. ಈ ವಿಷಯವಾಗಿ 'ನಂದಾನೆನಪು'ವಿನ ನಿರೂಪಣೆಯಲ್ಲಿಯೇ ಸ್ಪಷ್ಟ ಸೂಚನೆಗಳಿವೆ (ಪು. ೩೭೭-೭೮). ಎಂದರೆ ನಿಘಂಟುವಿನ ಮುಖ್ಯ ಕಾರ್ಯಭಾಗವಾಗಿದ್ದ ಇಂಗ್ಲಿಷ್ ಪದಗಳು ಮತ್ತು ಅವುಗಳಿಗೆ ಕನ್ನಡದ ಪ್ರತಿಪದಗಳು ಇವು ಸಿದ್ಧವಾಗುತ್ತಿದ್ದುದು ಈ ಸಿಬ್ಬಂದಿಯಿಂದಲೇ ಎಂದು ತೋರುವುದು. ಒಂದು ಸಂಗತಿಯಂತೂ ಸ್ಪಷ್ಟ: ನಿಘಂಟುವಿನಲ್ಲಿ ಸೂಚಿತವಾಗಿರುವ ಹಲವು ಕ್ರಿಯಾರ್ಥಕ ನಾಮಾರ್ಥಕ ಅಚ್ಚಕನ್ನಡಪದಗಳು ಮತ್ತು ಸಮಾಸಗಳು ಬಲುಮಟ್ಟಿಗೆ ಆಚಾರ್ಯರ ಸೃಷ್ಟಿಯೇ ಎನ್ನುವುದು ಅವರ ಸ್ವಂತ ಬರೆವಣಿಗೆಯ ಭಾಷಾಶೈಲಿಯನ್ನು ನೋಡಿದವರಿಗೆ ಸುಲಭವಾಗಿ ತಿಳಿಯುತ್ತದೆ.

ಕೆಲಸ ಮುಗಿಯುತ್ತಿದ್ದ ಹಾಗೆಯೇ ೧೯೪೭ರಲ್ಲಿ ಆಚಾರ್ಯರು ಮತ್ತೆ ತಮ್ಮ ಕಾಲೇಜು ಅಧ್ಯಾಪಕ ಸ್ಥಾನಕ್ಕೆ ಹಿಂದಿರುಗಿದರು.

## ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡನಿಘಂಟುಯೋಜನೆ

ಕನ್ನಡ ಸಾಹಿತ್ಯ ಪರಿಷತ್ತಿಗೆ ಮಾಸ್ತಿ ವೆಂಕಟೇಶ ಅಯ್ಯಂಗಾರರು ಅಧ್ಯಕ್ಷರೂ ಕ.ವೆಂ. ರಾಘವಾಚಾರ್ಯರು ಕಾರ್ಯದರ್ಶಿಗಳೂ ಆಗಿದ್ದಾಗ, ಕನ್ನಡ ನಿಘಂಟು ಯೋಜನೆಯ ಕಾರ್ಯ್ಯನಿರ್ವಹಣೆಗೆ ನಾಲ್ಕು ಜನ ವಿದ್ವಾಂಸರ ಒಂದು ಸಂಪಾದಕ ಸಮಿತಿ ನೇಮಕವಾಯಿತು. ಎ.ಆರ್. ಕೃಷ್ಣಶಾಸ್ತ್ರಿಗಳು (ಅಧ್ಯಕ್ಷರು), ತೀ.ನಂ. ಶ್ರೀಕಂಠಯ್ಯನವರು (ಕಾರ್ಯದರ್ಶಿಗಳು), ಡಿ.ಎಲ್. ನರಸಿಂಹಾಚಾರ್ಯರು, ಕ.ವೆಂ. ರಾಘವಾಚಾರ್ಯರು (ಸದಸ್ಯರು) - ಹೀಗೆ ಆರಂಭವಾದ್ದು ಮೂಲಸಮಿತಿ. ಈ ಸಮಿತಿ ಸಭೆ ಸೇರಿ ನಿಘಂಟುವಿನ ರೂಪರೇಖೆಗಳು, ಗಾತ್ರ ಪ್ರಮಾಣಗಳು, ಲಕ್ಷಣ ಪ್ರಾಮಾಣ್ಯಗಳು ಈ ಮೊದಲಾದುವನ್ನು ಕೂಲಂಕಷವಾಗಿ ಪರಿಶೀಲಿಸಿತು. ವಿಷಯಗಳನ್ನು ಪರಿಶೀಲಿಸಿದ ಮೇಲೆ ಹಲವು ಹಿತಗಳ ಪ್ರಾತಿನಿಧ್ಯವಿರುವಂತೆ ಒಂದು ದೊಡ್ಡ ಸಮಿತಿಯ ರಚನೆಗೆ

ಸಲಹೆಮಾಡಿತು. ಮುಂದೆ ಕಾಲಕಾಲಕ್ಕೆ. ಕಾರ್ಯವಿಧಾನಗಳೂ ಸಂಪಾದಕಸಮಿತಿಗಳೂ ಸಿಬ್ಬಂದಿವರ್ಗವೂ ಮಾರ್ಪಾಡುಗಳನ್ನು ಪಡೆಯುತ್ತ ಹೋದುವು.

ಮೂಲಸಮಿತಿ ಏರ್ಪಟ್ಟ ಕಾಲದಿಂದ ಉದ್ದಕ್ಕೆ ಸಂಪಾದಕಸಮಿತಿಯ ಸದಸ್ಯರಾಗಿ ರಾಘವಾಚಾರ್ಯರು ತಮ್ಮ ಸಲಹೆ ಸಹಕಾರಗಳನ್ನು ಅಧ್ಯಕ್ಷರು ಮೊದಲಾದವರಿಗೆ ನೀಡುತ್ತ ಬಂದರು (೧೯೪೩-೬೯), ಸಂಪಾದಕಸಮಿತಿ ನಡಸುತ್ತಿದ್ದ ಶಬ್ದಾರ್ಥಚರ್ಚೆಯ ಕಲಾಪಗಳಲ್ಲಿ ಭಾಗವಹಿಸುತ್ತಿದ್ದರು. ನಡುವೆ ೧೯೫೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತರಾಗಿ ದೆಹಲಿ ವಿಶ್ವವಿದ್ಯಾನಿಲಯದ ಕನ್ನಡ ಭಾಷಾಧ್ಯಾಪಕ ಹುದ್ದೆಯನ್ನೊಪ್ಪಿ ಹೋಗುವ ಸಂದರ್ಭ ಬಂದಾಗ, ಆಗ ಸಮಿತಿಯ ಅಧ್ಯಕ್ಷರಾಗಿದ್ದ ತೀ.ನಂ. ಶ್ರೀಕಂಠಯ್ಯನವರ ಒತ್ತಾಯದಿಂದ ಸದಸ್ಯರಾಗಿ ಮುಂದುವರಿಯುವುದಕ್ಕೆ ಒಪ್ಪಿಕೊಂಡರು. ಅವಕಾಶವಾದಂತೆ ಶಬ್ದಾರ್ಥಚರ್ಚೆಯ ಕಲಾಪಗಳಲ್ಲಿ ಭಾಗವಹಿಸುತ್ತಿದ್ದರು. ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಅವರ ಸೇವೆ ಕೊನೆಗೊಂಡು ಅವರು ಎರಡನೆಯ ನಿವೃತ್ತಿಯನ್ನು ಪಡೆಯುವ ವರೆಗೆ (೧೯೫೯-೬೯) ಇದು ಸಾಗಿತು. ಬಳಿಕ ಮೈಸೂರಿನಲ್ಲಿ ನೆಲೆನಿಂತ ಮೇಲೆ ಸಮಿತಿಯ ಉಪಾಧ್ಯಕ್ಷರಾಗಿದ್ದರು (೧೯೬೯-೭೧). ಆಗ್ಗೆ ಯೋಜನೆಯ ಪ್ರಧಾನಸಂಪಾದಕರೂ (೧೯೫೪-೭೦) ಅಧ್ಯಕ್ಷರೂ (೧೯೬೬-೭೧) ಆಗಿದ್ದ, ಅವರಿಗೆ ಪರಮಮಿತ್ರರು ಕೂಡ ಆಗಿದ್ದ, ಡಿ.ಎಲ್. ನರಸಿಂಹಾಚಾರ್ಯರಿಗೆ ಸಹಾಯವೂ ಧೈರ್ಯವೂ ಒಡನಾಟ ಒತ್ತಾಸೆಗಳೂ ವಿಶೇಷವಾಗಿ ಬೇಕಾಗಿದ್ದುದರಿಂದ ಅವರಿಗೆ ಇದೊಂದು ಇಷ್ಟವಾದ ಸೇವೆಯೇ ಆಗಿತ್ತು. ಮೊದಲನೆಯ ಸಂಪುಟ ಮುದ್ರಣಗೊಂಡು ಪರಿಷತ್ತಿನ ಸುವರ್ಣಮಹೋತ್ಸವದ ಸಂದರ್ಭದಲ್ಲಿ ಬಿಡುಗಡೆಯಾಯಿತು (೧೯೭೦). ಇದಾದ ಮೇಲೆ ದುರ್ದೈವದಿಂದ ಕನ್ನಡನಿಘಂಟುಯೋಜನೆಯ ಆಧಾರಸ್ತಂಭವೇ ಉರುಳಿಬಿದ್ದಂತೆ ಡಿ.ಎಲ್. ನರಸಿಂಹಾಚಾರ್ಯರು ತೀರಿಕೊಂಡರು. ಕೆಲಸ ನಿಲ್ಲುವ ಹಾಗಿರಲಿಲ್ಲ. ಈಗ ಜೇಷ್ಠತೆಯ ಆಧಾರದ ಮೇಲೆ ಕ.ವೆಂ. ರಾಘವಾಚಾರ್ಯರು ಸಮಿತಿಯ ಅಧ್ಯಕ್ಷತೆಯ ಹಾಗೂ ಪ್ರಧಾನಸಂಪಾದಕತ್ವದ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತಾಯಿತು (೧೯೭೧).

ತಮ್ಮ ಕೈಗೆ ಜವಾಬ್ದಾರಿ ಬಂದ ಮೇಲೆ ಎಂದಿಗಿಂತ ಹೆಚ್ಚು ಸಮಯ ಕೊಟ್ಟು ಮಧ್ಯಾಹ್ನ ೧೨ ರಿಂದ ಸಂಜೆ ೬ ರ ವರೆಗೆ ಎಡೆಬಿಡದೆ ದುಡಿಯ ತೊಡಗಿದರು. ಕಚೇರಿಯ ಕೆಲಸಗಳಲ್ಲಿ, ಶಬ್ದಾರ್ಥಕಲಾಪಗಳಲ್ಲಿ ಮುದ್ರಣಪ್ರತಿಗಳ ಪರಾಮರ್ಶೆ ಮೊದಲಿಗಿಂತ ಚುರುಕುಗೊಂಡು ಎರಡು ಪಟ್ಟು ಹೆಚ್ಚಿತು. ಹೀಗೆ ಎರಡು ವರ್ಷ ನಿರಂತರವಾಗಿ ಶ್ರಮಿಸಿ (೧೯೭೧-೭೨), ನಿಘಂಟುವಿನ ಎರಡನೆಯ ಸಂಪುಟದ ಕೆಲಸ ತ್ವರೆಗೊಳ್ಳುವಂತೆ ಮಾಡಿದರು. ಈ ಸೇವೆ ಹೀಗೆ ಸಲ್ಲುತ್ತಿರುವಾಗಲೇ ವ್ಯಾವಹಾರಿಕವಿಷಯಗಳಲ್ಲಿ ಅವರಿಗೂ ಸರಕಾರ ಪರಿಷತ್ತುಗಳಿಗೂ ಕಹಿ ವಾತಾವರಣವೇರ್ಪಟ್ಟು ಅವರು ನಿಘಂಟುವಿನ ಎಲ್ಲಾ ಜವಾಬ್ದಾರಿಗಳಿಂದಲೂ ಬಿಡುಗಡೆ ಪಡೆದುಕೊಂಡರು. ಈ ಸಂಬಂಧದಲ್ಲಿ ನಡೆದ ಘಟನೆಗಳನ್ನು ಆಚಾರ್ಯರು ತಮ್ಮ 'ನಂದಾನೆನಪು' ಆತ್ಮವೃತ್ತದಲ್ಲಿ ದಾಖಲಿಸಿದ್ದಾರೆ (ಪು. ೪೨೯ - ೩೬). ಪ್ರಬುದ್ಧ ಕರ್ಣಾಟಕದ ಸಂಪಾದಕತ್ವದ ವಿಷಯದಲ್ಲಿ ನೋಡಿದ ಹಾಗೆಯೇ ಇಲ್ಲಿಯೂ ತಮ್ಮ ಆತ್ಮಾಭಿಮಾನಕ್ಕೆ ನ್ಯಾಯನಿಷ್ಠುರತೆಗೆ ಭಂಗವಾಗುವುದನ್ನು ಅವರು ಸಹಿಸಲಾರದೆ ಹೋದರು;

ಇಂಗ್ಲಿಷ್ ಗ್ರೀಕ್ ಭಾಷೆಗಳ, ಜೊತೆಗೆ ಸಂಸ್ಕೃತ ತಮಿಳು ಮತ್ತು ಕನ್ನಡ ಭಾಷೆಗಳ ಒಳ್ಳೆಯ ಪಾಂಡಿತ್ಯವಿದ್ದ ಘನವಿದ್ವಾಂಸರೊಬ್ಬರ ಮಾರ್ಗದರ್ಶನ ನಿಘಂಟುವಿನ ಸಿದ್ಧತೆಯಲ್ಲಿ ತಪ್ಪಿಹೋದುದು ಒಂದು ದುರದೃಷ್ಟಕರ ಸಂಗತಿ.

## ಕನ್ನಡ ಸಾಹಿತ್ಯ ಪರಿಷತ್ತಿಗೆ ಸಂದ ಸೇವೆ

ಕ.ವೆಂ. ರಾಘವಾಚಾರ್ಯರು ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ - ಕನ್ನಡ ನಿಘಂಟು ಸಿದ್ಧತೆಯ ಯೋಜನೆಯಲ್ಲಿ ಕೆಲಸಮಾಡುತ್ತಿದ್ದ ಅವಧಿಯಲ್ಲಿಯೇ ಅವರ ಪರಮಾಪ್ತ ಗುರುಗಳಾದ ಬಿ.ಎಂ. ಶ್ರೀಕಂಠಯ್ಯನವರು ಡಿ.ವಿ. ಗುಂಡಪ್ಪನವರ ತರುವಾಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷಸ್ಥಾನವನ್ನು ವಹಿಸಿಕೊಂಡರು. ಶ್ರೀಯವರಿಗೆ ತಮ್ಮ ವಿಶ್ವಾಸಕ್ಕೆ ಪಾತ್ರರಾದ, ಕಾರ್ಯದಕ್ಷರಾದ ಕಾರ್ಯಕರ್ತರ ಸಹಾಯವಿರಬೇಕೆಂದು ತೋರಿ, ಅವರು ಆಚಾರ್ಯರನ್ನು ಪರಿಷತ್ತಿನ ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗುವಂತೆ ಮಾಡಿರಬಹುದು. ೧೯೩೯ರಲ್ಲಿ ಪರಿಷತ್ತಿನ ಮೈಸೂರುಕರ್ನಾಟಕ ಪ್ರಾಂತಸಮಿತಿ ಪ್ರತಿನಿಧಿಮಂಡಲಿಯಲ್ಲಿ ಅವರು ಸದಸ್ಯರಾದರು. ಹಾಗೆಯೇ ೧೯೩೯ ಮತ್ತು ೧೯೪೦ ಈ ವರ್ಷಗಳಲ್ಲಿ ಕನ್ನಡ ನುಡಿ ಮತ್ತು ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಗಳ ಸಂಪಾದಕೀಯ ಕಾರ್ಯದ ರೀತಿನೀತಿಗಳ ಸಂಬಂಧದಲ್ಲಿ ಸಲಹೆಕೊಟ್ಟು ಸಹಕರಿಸಲು ಒಂದು ಸಹಾಯಕಮಂಡಲಿಯನೂ ಪ್ರಕಟನೆ ಆಡಳಿತದ ಕೆಲಸಗಳಿಗಾಗಿ ಒಂದು ಕಾರ್ಯಮಂಡಲಿಯನ್ನೂ ನಿಯೋಜಿಸಲಾಯಿತು. ಆಗ ಡಿ.ಸಿ. ಸುಬ್ಬರಾಯಪ್ಪ, ವಿ.ಸೀತಾರಾಮಯ್ಯ, ಎಂ.ವಿ. ಸೀತಾರಾಮಯ್ಯ ಅವರ ಜೊತೆಗೆ ಆಚಾರ್ಯರೂ ಒಬ್ಬರಾಗಿ ನೇಮಕವಾದರು. ೧೯೪೧ - ೧೯೪೨ ರಲ್ಲಿ ಕಾರ್ಯಸಮಿತಿಯಲ್ಲಿ ಮೈಸೂರು-ಕರ್ನಾಟಕಭಾಗದ ಒಬ್ಬ ಸದಸ್ಯರಾಗಿ ನಿಯುಕ್ತರಾದರು. ೧೯೪೨-೪೩ರಲ್ಲಿ ಮತ್ತೆ ಏರ್ಪಟ್ಟ ಪರಿಷತ್ಪತ್ರಿಕೆಯ ಸಂಪಾದಕಮಂಡಲಿಯಲ್ಲಿ ಎಂ.ಆರ್. ಶ್ರೀ, ವಿ.ಸೀ. ಅವರ ಜೊತೆಗೆ ತಾವೂ ಇರುತ್ತಿದ್ದರು. ಅಲ್ಲದೆ ವಿ.ಸೀ. ಅವರು ಮೈಸೂರಿಗೆ ವರ್ಗವಾದ ಪ್ರಯುಕ್ತ ೧೯೪೩ ರಲ್ಲಿ ಆಚಾರ್ಯರು ಒಬ್ಬರೇ ಪತ್ರಿಕೆಯ ಸಂಪಾದನೆಯ ಜವಾಬ್ದಾರಿಯನ್ನು ನಿರ್ವಹಿಸಿದರು. ಶ್ರೀಯವರ ಅಧ್ಯಕ್ಷತೆಯ ಅವಧಿಯಲ್ಲಿ 'ಕನ್ನಡ ನುಡಿ' ಪತ್ರಿಕೆಯಲ್ಲಿ ಶ್ರೀಯವರ ಕನಸಿನ ಕೂಸಾಗಿದ್ದ ಕನ್ನಡ ಲಿಪಿಯ ಸುಧಾರಣೆಯ ಪ್ರಯತ್ನಗಳ ಚರ್ಚೆಗಳೂ ಲೇಖನಮಾಲೆಗಳೂ ಪ್ರಕಟವಾಗತೊಡಗಿದುವು.

ಬಿ.ಎಂ. ಶ್ರೀಕಂಠಯ್ಯನವರೂ (೧೯೩೮ - ೪೨) ಅವರ ತರುವಾಯದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರರೂ (೧೯೪೩-೪೭) ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಕಾಲದಲ್ಲಿ ಮೂರು ಅವಧಿಗಳಿಗೆ, ನಡುವೆ ಸ್ವಲ್ಪ ವಿಚ್ಛಿತ್ತಿ ಇದ್ದೂ ಕಾರ್ಯದರ್ಶಿಗಳಾಗಿ ಆಚಾರ್ಯರು ಹೆಚ್ಚಿನ ಜವಾಬ್ದಾರಿಯನ್ನು ಹೊತ್ತುಕೊಂಡರು. ೧೯೪೨-೪೩, ೧೯೪೪-೪೫, ೧೯೪೬ (೫-೭-೧೯೪೬) ಇವೇ ಅವರ ಕಾರ್ಯದರ್ಶಿತ್ವದ ಕಾರ್ಯಾವಧಿಗಳು. ಈ ಅವಧಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ದ.ರಾ.ಬೇಂದ್ರೆಯವರು (೧೯೪೩ ಶಿವಮೊಗ್ಗ), ಶಿ.ಶಿ. ಬಸವನಾಳ (೧೯೪೪ ರಬಕವಿ) ಮತ್ತು ಟಿ.ಪಿ. ಕೈಲಾಸಂ (೧೯೪೫ ಮದರಾಸು) ಇವರು ಅಧ್ಯಕ್ಷರಾಗಿದ್ದರು. - ಆಚಾರ್ಯರು ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದ ಅವಧಿಗಳಲ್ಲಿ ಸಾಮಾನ್ಯ ಮತ್ತು ವಿಶೇಷ ಸಭೆಗಳನ್ನು ಕರೆಯುವುದು, ಮುಖ್ಯ

ಪತ್ರವ್ಯವಹಾರಗಳನ್ನು ನಡೆಸುವುದು, ಸ್ಪರ್ಧೆಗಳಿಗೆ ಪ್ರಕಟನೆ ಹೊರಡಿಸುವುದು, ಪರೀಕ್ಷೆಗಳನ್ನು ನಡೆಸುವುದು ಮತ್ತು ಫಲಿತಾಂಶಗಳನ್ನು ಪ್ರಕಟಿಸುವುದು, ವಿಶೇಷ ಪ್ರಕಟನೆಗಳನ್ನು ಕೊಡುವುದು, ಕನ್ನಡ ನುಡಿ ಪತ್ರಿಕೆಯ ಪ್ರಕಟನೆ ಇವೆಲ್ಲ ಕಾಲಕಾಲಕ್ಕೆ ದಕ್ಷತೆಯಿಂದ ನಡೆದ ಬಗ್ಗೆ ದಾಖಲೆಗಳಿವೆ. ೧೯೪೪ರ ದಾಖಲೆಗಳನ್ನು ಗಮನಿಸಿದರೆ, ಕನ್ನಡ ನಿಘಂಟು ಸಮಿತಿ, ಪರಿಷತ್ತಿನ ಪತ್ರಿಕೆಗಳ ಸಂಪಾದಕಮಂಡಲಿ, ಅಕ್ಷರಸಂಸ್ಕರಣಸಭೆ, ಸಾಹಿತ್ಯಪರೀಕ್ಷೆಗಳ ಸಮಿತಿ, ವಿಶ್ವವಿದ್ಯಾನಿಲಯದಲ್ಲಿ ಕನ್ನಡವನ್ನು ಬೋಧಕ ಭಾಷೆಯನ್ನಾಗಿ ಮಾಡುವ ವಿಷಯದ ಸಮಿತಿ, ಗಮಕಶಿಕ್ಷಣಸಮಿತಿ ಈ ಮೊದಲಾದವುಗಳ ಚಟುವಟಿಕೆಗಳಲ್ಲಿ ಅವರ ದುಡಿಮೆ ಪರಿಶ್ರಮಗಳಿರುವುದು ತಿಳಿಯುತ್ತದೆ. ಈ ಸಂಬಂಧದಲ್ಲಿ ಕನ್ನಡ ನುಡಿಯಲ್ಲಿ ವಿಶದವಾದ ವರದಿಗಳಿವೆ.

ಕೆಲವು ವಿಶೇಷಸಂದರ್ಭಗಲ್ಲಿ ಕಾರ್ಯನಿಮಿತ್ತ ಕರ್ನಾಟಕದ ನಾನಾ ಭಾಗಗಳಲ್ಲಿ ಸಂಚಾರದಲ್ಲಿರುವಾಗ, ಆಚಾರ್ಯರು ಬೇರೆ ಬೇರೆ ವಿಷಯಗಳನ್ನು ಕುರಿತು ಉಪನ್ಯಾಸ ನೀಡಿದ ವರದಿಗಳೂ ಇವೆ. ಉದಾಹರಣೆಗೆ, ಗುಲ್ಬರ್ಗದ ಕಡೆಗೆ ಬಂದಾಗ ಸುರಪುರದಲ್ಲಿ ಕನ್ನಡ ಶಾಸನಗಳನ್ನೂ ಸಾಕ್ರಟೀಸನನ್ನೂ ಯಶೋಧರ ಚರಿತೆಯನ್ನೂ ಕುರಿತು ನಾಡಹಬ್ಬದ ಅಂಗವಾಗಿ ಮಾತಾಡಿದ್ದಾರೆ (೧೬-೫-೧೯೪೪ ; ೧೭-೫-೧೯೪೪) ; ಭದ್ರಾವತಿಯ ಕರ್ಣಾಟಕ ಸಂಘದಲ್ಲಿಯೂ (೨೨-೫-೧೯೪೪), ಚಿತ್ರದುರ್ಗದ ಕರ್ಣಾಟಕ ಸಂಘದಲ್ಲಿಯೂ (೨೬-೧೧-೧೯೪೪) ತತ್ತ್ವಜ್ಞಾನಿ ಸಾಕ್ರಟೀಸನನ್ನು ಕುರಿತು ಉಪನ್ಯಾಸ ಮಾಡಿದ್ದಾರೆ. ಈ ಹಿಂದೆ ರಾಯಚೂರಿಗೆ ಹೋಗಿದ್ದಾಗಲೂ ಅವರಿಗೆ ಆಪ್ತವಾದ ವಿಷಯ ಸಾಕ್ರಟೀಸ್ ಜೀವನಕಥೆಯನ್ನು ಕುರಿತು ಭಾಷಣಮಾಡಿದ್ದರು (೧೮-೭-೧೯೪೨).

ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿದ್ದ ಚಟುವಟಿಕೆಯ ಅವಧಿಯಲ್ಲಿ ಕೆಲವು ಗಮನಾರ್ಹವಾದ ವಿದ್ಯಮಾನಗಳು ನಡೆದಿರುವುದು ಕನ್ನಡ ನುಡಿಯ ವರದಿಗಳಿಂದ ತಿಳಿದುಬರುತ್ತದೆ. ಉದಾಹರಣೆಗೆ: ಮಾಸ್ತಿಯವರಿಗೆ ರಾಜಸೇವಾಸಕ್ತ ಬಿರುದು ಬಂದ ಸಂದರ್ಭದಲ್ಲಿ ಶ್ರೀಯವರ ಅಧ್ಯಕ್ಷತೆಯಲ್ಲಿ ಒಂದು ಅಭಿನಂದನಸಭೆ ಸೇರಿತು. ಅದರಲ್ಲಿ ಆಚಾರ್ಯರು ಅಭಿನಂದನಭಾಷಣ ಮಾಡಿದರು (೧೩-೮-೧೯೪೨). ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕಸಂಘದ ರಜತೋತ್ಸವ ಸಂದರ್ಭದಲ್ಲಿ (೧೬-೧-೧೯೪೪) ಆಚಾರ್ಯರು ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟುಸಮಿತಿ ಮತ್ತು ಕಛೇರಿಯ ಪರವಾಗಿ ನಿಘಂಟುವಿನ ಅಧ್ಯಕ್ಷರಾಗಿದ್ದ ಬೆಳ್ಳಾವೆ ವೆಂಕಟನಾರಣಪ್ಪನವರ ಭಾವಚಿತ್ರವನ್ನು ಸಂಘಕ್ಕೆ ದಾನ ಮಾಡಿ, ಆ ಬಗ್ಗೆ ಭಾಷಣಮಾಡಿದರು (ಕನ್ನಡ ನುಡಿ ೨೧-೧-೧೯೪೪), ಒಂದು ಕಾಲಕ್ಕೆ ಸಾಹಿತ್ಯಸಮ್ಮೇಳನದ ಅಧ್ಯಕ್ಷಪದವಿಯ ಆಯ್ಕೆಯ ವಿಧಾನ ಹಾಗೂ ಸಾಹಿತಿಗಳ ಪ್ರತಿಕ್ರಿಯೆ ತಿಳಿಯುವಂತಿರುವ ಒಂದು ಪತ್ರವ್ಯವಹಾರ (ಕ.ನು. ೧೩-೧೦-೧೯೪೪) ಕುತೂಹಲಕರವಾಗಿದೆ. ಇದು ಶಿ.ಶಿ. ಬಸವನಾಳರು ಅಧ್ಯಕ್ಷರಾಗಿದ್ದ ೨೮ನೆಯ ಸಮ್ಮೇಳನಕ್ಕೆ ಸಂಬಂಧಿಸಿದ್ದಾಗಿದೆ.

ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳಿಗೆ ನೇರವಾಗಿ ಸಂಬಂಧಿಸಿದ್ದು ಆಗಿರದಿದ್ದರೂ ಅಲ್ಲಿಯ ಪ್ರಮುಖ ಕಾರಕರ್ತರು ಭಾಗವಹಿಸಿದ್ದ ಒಂದು ಮುಖ್ಯವಾದ ಪರ್ಯಾಲೋಚನಸಭೆಯಲ್ಲಿಯೂ ಆಚಾರ್ಯರು ಸಕ್ರಿಯವಾಗಿ ಭಾಗವಹಿಸಿದ್ದರು (೯-೩-೧೯೪೧), ಬೆಂಗಳೂರು ಕನ್ನಡ ಸಾಹಿತಿಗಳ ಸಂಘ ಗ್ರಂಥಕರ್ತರ ಮತ್ತು ಲೇಖಕರ ಕೃತಿಗಳನ್ನು ಸಂಕಲನಗಳಲ್ಲಿ ಪ್ರಕಟಿಸುವಾಗ ಅವರಿಗೆ ಸಲ್ಲಿಸಬೇಕಾದ ಸಂಭಾವನೆ ಕುರಿತು ಚರ್ಚಿಸಲು ಆ ಸಭೆ ನಡೆದಿತ್ತು. ಅದರಲ್ಲಿ ಶ್ರೀಯವರು, ಡಿ.ವಿ.ಜಿ. ಅವರು ಮತ್ತು ಇತರ ಗಣ್ಯರು ಭಾಗವಹಿಸಿದ್ದರು (ಕ.ನು. ೧೪-೩-೧೯೪೧).

---

# ೯. ವ್ಯಕ್ತಿತ್ವ

೨೦ನೆಯ ಶತಮಾನದ ಮೂರನೆಯ ದಶಕದಿಂದ ಏಳನೆಯ ದಶಕದವರೆಗೆ ಕ್ರಿಯಾಶಾಲಿಗಳಾಗಿದ್ದು, ಕನ್ನಡ ಭಾಷೆ ಸಾಹಿತ್ಯಗಳ ಸೇವೆಯನ್ನು ಅನನ್ಯವಾದ ರೀತಿಯಲ್ಲಿ ಮಾಡಿದ ಮಹನೀಯರು, ಕ.ವೆಂ.ರಾಘವಾಚಾರ್ಯರು. ನಿಘಂಟುಕಾರರಾಗಿ, ಭಾಷಾತಜ್ಞರಾಗಿ, ಗ್ರಂಥಸಂಪಾದಕರಾಗಿ, ಅನುವಾದಕರಾಗಿ, ಅಧ್ಯಾಪಕರಾಗಿ, ಸಂಘ ಸಂಸ್ಥೆಗಳ ಸಂಘಟಕರಾಗಿ, ವಾಗ್ಮಿಪ್ರವರರಾಗಿ ಅವರು ಮಾಡಿರುವ ಹತ್ತಾರು ಕೆಲಸಗಳು ಅವರ ಹೆಸರನ್ನು ಹೊಸಗನ್ನಡ ಸಾಹಿತ್ಯೇತಿಹಾಸದ ಪುಟಗಳಲ್ಲಿ ನೆಲೆನಿಲ್ಲುವಂತೆ ಮಾಡಿವೆ.

ಆಚಾರ್ಯರ ಶೀಲ ಸ್ವಭಾವಗಳು ಮೇಲುನೋಟಕ್ಕೆ ಕಠಿನಕರ್ಕಶವಾಗಿ, ವಿಲಕ್ಷಣವಾಗಿ ಕಂಡರೂ ಒಂದು ತೆರನ ಸುಹೃದ್ಭಾವ ಸಹಾನುಭೂತಿಪರತೆಗಳು, ನಯ ವಿನಯಗಳು ಅವರ ವ್ಯಕ್ತಿತ್ವದಲ್ಲಿ ಅಂತರ್ವಾಹಿನಿಯಾಗಿ, ಅಮೃತವಾಹಿನಿಯಾಗಿ ತುಂಬಿಕೊಂಡಿದ್ದುವು ಎನ್ನುವುದು ಅವರನ್ನು ಹತ್ತಿರದಿಂದ ಬಲ್ಲವರು ತಮ್ಮ ಅನುಭವದಿಂದ ಕಂಡುಕೊಂಡ ವಿಚಾರ.

ಪ್ರೊ. ಕ.ವೆಂ. ರಾಘವಾಚಾರ್ಯರು ವ್ಯಕ್ತಿಯಾಗಿ ಹಲವು ವಿಶಿಷ್ಟವೂ ಅಪೂರ್ವವೂ ಆದ ಗುಣಗಳ ಒಂದು ಸಮಾವೇಶ, ಅವರ ಒಡನಾಡಿಗಳೂ ಒಡನೋದಿಗಳೂ ವಿದ್ಯಾರ್ಥಿಗಳಾಗಿದ್ದ ಹಲವರೂ ಆ ವಿಲಕ್ಷಣವ್ಯಕ್ತಿತ್ವದ ಪರಿಚಯವನ್ನು ಪಡೆದವರೇ ಆಗಿದ್ದಾರೆ; ಏಕಕಾಲದಲ್ಲಿ ಎಚ್ಚರವನ್ನೂ ಅನುಭವಿಸಿದ್ದಾರೆ! ಶುಭ್ರಖಾದಿಯ ಒರಟು ಉಡುಗೆ; ಅಷ್ಟು ಎತ್ತರ, ಅಷ್ಟು ದೃಢ ಅಲ್ಲದ ಆಕೃತಿಯಿದ್ದೂ ಎಂಥ ಎತ್ತರದ ಎಂಥ ದಾರ್ಢ್ಯದ ವ್ಯಕ್ತಿಯ ನಡೆಯನ್ನೂ ಮೀರಿಸುವ ಚುರುಕುನಡಗೆ, ಎದುರುಗೊಂಡವರನ್ನೂ ಎದುರುಬಿದ್ದವರನ್ನೂ ಸಮಭಾವದಿಂದ ಸ್ವಾಗತಿಸುವ ರೇಗುಚಹರೆ, ತೀಕ್ಷ್ಣನೋಟ; ಕೊಂಚ ಹೊತ್ತಿನಲ್ಲಿ ಕರುಳು ಚುರುಕೆನ್ನುವ ಕೋಮಲಾಂತಃಕರಣ. ಅಷ್ಟು ನಯ, ಅಷ್ಟು ನಾಜೂಕು ಎಂದು ತೋರದ ಅಲಗುಮೊನೆಮಾತು; ಪರಿಣಾಮದಲ್ಲಿ ನಯ ನಾಜೂಕು ಎಂದು ತೋರುವ ಮಾತಿಗಿಂತ ಹೆಚ್ಚು ಮಧುರ, ಹೆಚ್ಚು ಹಿತಕರ. ತೋರಿಕೆಗೆ ತೊಗಟೆಯ ಗಡಸು, ಬಿಗಿ, ಬಿಕ್ಕಟ್ಟು; ಬಿಡಿಸಿದರೆ ತಿರುಳಿನ ಮೃದು, ಸರಳ, ಸಲೀಸು. ಪರವಾದಿಭಯಂಕರ, ಆದರೆ ಅಭಿಜನವತ್ಸಲ. ಸರಳ ಜೀವನ ಶೈಲಿ, ಆದರೆ

ಸಂಪನ್ನ ವಿಚಾರವೈಖರಿ. ಜಾತಿಜಂಜಡವಿದೂರ, ಆದರೆ ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನಪರ. ಕಾವ್ಯಸಂಸ್ಕೃತದ ಶುದ್ಧಸಂಸ್ಕಾರ; ಆದರೆ ಕನ್ನಡ ನುಡಿಯ ಕಟ್ಟಕ್ಕರೆ. ಎಪ್ಪತ್ತರ ಇಳಿಹರೆಯದ ಮೈಯಲ್ಲಿ ಇಪ್ಪತ್ತರ ಯುವೋತ್ಸಾಹ - ಹೀಗೆ ವಿರೋಧಾಭಾಸಗಳ ಸರಮಾಲೆ. ಭಾಷಾಶಾಸ್ತ್ರತಜ್ಞತೆ, ಹಳಗನ್ನಡ ಪ್ರಯೋಗಪಟುತ್ವ ಪೂರ್ವಪಶ್ಚಿಮಸಾಹಿತ್ಯಪ್ರೇಮ; ಗ್ರೀಕ್‌ಭಾಷಾಸಾಹಿತ್ಯಗಾಥಾವಗಾಹಿತ್ವ, ನಿಘಂಟುನಿರ್ಮಾಣಕ್ಷಮತ್ವ - ಹೀಗೆ ಪಾಂಡಿತ್ಯದ ಪರಿಕರಗಳು ಸುತ್ತೂ ಹತ್ತು ಹನ್ನೊಂದು. ಹಬ್ಬ ಹುಣ್ಣಿಮೆಯಂದು ಆಪ್ತೇಷ್ಟರಿಗೆ ಆಮಂತ್ರಣ, ಅಗ್ರದೆಲೆಯ ಭೂರಿಭೋಜನ; ಪರಿಕರಗಳು ಸುತ್ತೂ ಹತ್ತು ಹನ್ನೊಂದು. ಸ್ನೇಹ ಸಜ್ಜನಿಕೆಗಳ ಹಿತಮಿತಸಲ್ಲಾಪ, ಸಿಡಿದಲ್ಲಿ ಮಾತ್ರ ಖಂಡತುಂಡ ವಾಗ್ವಾದ. ಮೈಸೂರಿಗೂ ದೆಹಲಿಗೂ ಅಡುಮನೆ-ನಡುಮನೆ ಲೆಕ್ಕದ ಓಡಾಟ. ಪ್ರಾಮಾಣಿಕತೆಯ ಹರಿತದಿಂದ ಗರಿಗಟ್ಟಿದ ಶಿಸ್ತು, ಶೀಲ; ಪ್ರಾಣಕ್ಕಿಂತ ಪ್ರಾಮಾಣಿಕತೆಗೆ, ಸ್ಥಾನಕ್ಕಿಂತ ಮಾನ ಹೆಚ್ಚೆಂದು ಘೋಷಿಸುವ, ಪಾಲಿಸುವ ಆತ್ಮಬಲ, ಚಲ, ನಿಷ್ಠುರ ಸಮಯಪ್ರಜ್ಞೆ ಭುಜವೊಡ್ಡಿ ಸೈಯೆಂದು ಸಡ್ಡು ಹೊಡೆದರೆ, ತಿಕ್ಕಿ ತೀಡುವ ಜಗಳಗಂಟಿಗತನದ ಜಾಗರ; ಇಲ್ಲವೆ ತೆಪ್ಪಗೆ ತನ್ನಲ್ಲೇ ಆತ್ಮಾರಾಮನಾಗಿರುವ ಒಂಟಿಗತನದ ಅಜಗರ. ಸ್ನೇಹ, ವ್ಯವಹಾರ ಎರಡರಲ್ಲೂ ನಾರಿಕೇಳಪಾಕ. ಪರಿಸ್ಥಿತಿ ಬಿಗಡಿಸಿದಾಗ ಅಷ್ಟಿಷ್ಟು ಹೊಂದಿಕೊಳ್ಳೋಣ, ಕೆಲಸ ಗೆಲ್ಲಲು ಸ್ವಲ್ಪ ಸೋಲೋಣ ಸರಿಯೋಣ, ಮೊದಲಷ್ಟು ದೈನ್ಯಪಟ್ಟು ಬಳಿಕ ಧಿಮಾಕು ತೋರೋಣ, ಗಾಳಿ ಬಂದಾಗ ತೂರಿಕೊಳ್ಳೋಣ-ಇವಕ್ಕೆ 'ಸಿಡಿಲನ್ನಂ, ಸಿಂಗದನ್ನಂ!'

ಆಚಾರ್ಯರ ಈ ಗುಣಸಮ್ಮಿಶ್ರಪಾಕ ಯಾವ ಯಾವ ಪರಿಕರಗಳಿಂದ ಸಿದ್ಧವಾಯಿತು ಎಂಬುದನ್ನು ಪಟ್ಟಿಮಾಡುವುದು ಕಷ್ಟ. ಹುಟ್ಟು ಹುಡುಗತನಗಳ ಕಾಲದಿಂದ ಅವರ ಬದುಕು ಸರಳರೇಖೆಯ ಋಜುಪಥದಲ್ಲಿ ಬಹುಶಃ ಸಾಗದೆ, ಜಟಿಲ ಜ್ಯಾಮಿತಿಯ ಋಜುಕುಟಿಲರೇಖೆಗಳ ಚಿತ್ರಪಥದಲ್ಲಿ ಸಾಗಿದ್ದು ಒಂದು ಕಾರಣ; ಗಾಂಧಿ ಗಾಂಧೀವಾದ ಗಾಂಧೀಸಾಹಿತ್ಯ ಗಾಂಧೀಭಕ್ತರ ಉತ್ಕಟಪ್ರಭಾವ ಕಾಂತಿಯ ವರ್ಚಸ್ಸಿಗೆ ಬಿದ್ದು ವ್ಯಕ್ತಿತ್ವ ಉಕ್ಕುಗೊಂಡದ್ದು ಇನ್ನೊಂದು ಕಾರಣ. ಇದಕ್ಕೆ ಅತೀತವಾದ ಒಂದು ಕಾರಣವೂ ಇರಬಹುದು: ಅದು ಅವರ ಜೀವನವಿಧಿ! ಈ ವಿಧಿ ರೂಪಿಸಿದ ನಿಷ್ಠೆ ನಿರ್ದಾಕ್ಷಿಣ್ಯಗಳು ತೋರಿಕೆಗೆ ಅಷ್ಟೇ ಬೇರೆ ಬೇರೆ; ದಿಟವಾಗಿ ಅವು ಅಭಿನ್ನ; ಆಚಾರ್ಯರ ನಡೆನಾಣ್ಯದ ಎರಡು ಮುಖಗಳು. ನೈತಿಕ ಔದ್ಯಮಿಕ ಸಾಮಯಿಕ ನಿಷ್ಠೆಗಳನ್ನು ಗುರಿ ತಪ್ಪದೆ ಬದುಕಿನುದ್ದಕ್ಕೆ ಸಾಧಿಸಿಕೊಂಡು ಬರುವ ಯತ್ನದಲ್ಲಿ, ಕಷಾಯಕಲುಷಿತ ಅಲಸಿ ಲೋಕದೊಂದಿಗೆ ಸವಾಲುಹಾಕಿ ಸೆಣಸಾಡುವಲ್ಲಿ, ಆತ್ಮಪ್ರತ್ಯಯಸ್ಫೂರ್ತವಾದ ನಿರ್ದಾಕ್ಷಿಣ್ಯ ಕೊಸರಾಟಕ್ಕೆ ಒಲ್ಲದ ಅಪರಿಹಾರ್ಯವಾದ ನಿಷ್ಠೆಯೊಡನೆ ತಕ್ಕೆಗೊಂಡಿದೆ, ಇಲ್ಲಿ. ಈ ಎರಡರ ವಿಶಿಷ್ಟವಾದ ಅದ್ವೈತವೇ ಅವರ ಬಾಳ ಬಟ್ಟೆಯ ಪರಮಾಗಮ! ಈ ಶಿಸ್ತಿನ ಸಿಪಾಯಿಯ, ತಕರಾರಾಸಾಮಿಯ ಮರ್ಜಿಯನ್ನು ತಿಳಿದವರಷ್ಟೇ ಅವರ ಹತ್ತಿರ ಸುಳಿಯಬಲ್ಲರು, ಏಗ ಬಲ್ಲರು; ಮಿಕ್ಕವರು - ತಮ್ಮವರು, ಹೆರವರು ಯಾರೇ ಸರಿ - ತಮಗೆ ಇವರ ಗೋಜೇ ಬೇಡ, ಇವರದು ದುರ್ವಾಸಗೋತ್ರ ಎಂದು ದೂರವೇ ಉಳಿದರೆ ಅದರಲ್ಲಿ ಅಚ್ಚರಿಯೇನಿಲ್ಲ. ಅವರಿಗೂ ಇವರು ಅಷ್ಟೇ. ಹೊತ್ತಿಗೆ ಸರಿಯಾಗಿ ಪಾಠಕ್ಕೆ ಹಾಜರಿರದಿದ್ದರೆ ವಿದ್ಯಾರ್ಥಿ ತರಗತಿಯಿಂದ ಹೊರಗೇ; ಒಪ್ಪಿದ ಮಾತಿಗೆ ತಪ್ಪಿದರೆ, ನಿಷ್ಠೆ ಜಾರಿದರೆ, ನಿಯಮ ಸಡಲಿದರೆ ಚಿರಂಜೀವಿ ಸಹಸ್ರಾಯು ಇರಲಿ, ಮಹಾರಾಜಶ್ರೀ ಇರಲಿ ಕೆಂಡಗಣ್ ನೋಟ,

ಕೆರಳು, ರೇಗು, ರಂಪ, ಒಂದೆರಡು ಕ್ಷಣ; ಸಿಡಿಮದ್ದಿನ ಸ್ಫೋಟ ಸ್ತಬ್ದ, ಏರೇರಿಕೆಯ ಕಹಳೆದನಿ ತಗ್ಗಿ, ಮಿದುಹದಗೊಂಡ ಸ್ನೇಹ ವಾತ್ಸಲ್ಯಗಳ ವೀಣೆಯುಲಿ. ಕೈ ಮೈಗಳ ಹಾಸುಬೀಸಿನ ಕತ್ತಿವರಸೆ ಮುಗಿದು, ಮುಗುಳ್ನಗೆ ಸೂಸುವ ಎಳೆಗೂಸಿನ ಪ್ರಸನ್ನ ಸುಮನಸ್ಕತೆ. ಒಟ್ಟಿನಲ್ಲಿ ಒಂದು ಅಪೂರ್ವವಾದ ವೈಯಕ್ತಿಕತೆ!

ಆಚಾರ್ಯರು ತಮ್ಮ ನೆನಪುಗಳನ್ನು ತಾವೇ ಸ್ವಲ್ಪಮಟ್ಟಿಗಾದರೂ ತಮ್ಮ 'ನಂದಾನೆನಪು'ವಿನ ಪುಟಗಳಲ್ಲಿ ದಾಖಲಿಸದೆ ಹೋಗಿದ್ದರೆ, ಅವರ ಬಾಲ್ಯ ವಿದ್ಯಾಭ್ಯಾಸಗಳ ವಿವರಗಳೂ ಶೀಲ ಸ್ವಭಾವಗಳ ಪದರಗಳೂ ನಮಗೆ ಅಷ್ಟಾಗಿ ತಿಳಿಯದೆ ಹೋಗುತ್ತಿದ್ದುವು; ಅವರ ಒಡನಾಟಕ್ಕೆ ಬಂದ, ಅವರ ಮೇಲೆ ಪ್ರಭಾವ ಪರಿವೇಷವನ್ನು ನಿರ್ಮಿಸಿದ ಗುರು ಹಿರಿಯರ ವಿಚಾರಗಳೂ ಕಣ್ಮರೆಯಾಗಿ ಹೋಗುತ್ತಿದ್ದುವು. ಈಗ ಆ ಕೊರತೆ ಕೆಲಮಟ್ಟಿಗಾದರೂ ಕಡಮೆಯಾಗಿದೆ.

ಆಚಾರ್ಯರು ವಿದ್ಯಾವಂತ ವೈದಿಕ ಕುಟುಂಬದಲ್ಲಿ ಹುಟ್ಟಿದರೂ, ಸಣ್ಣ ವಯಸ್ಸಿನಿಂದಲೇ ಆರೈಕೆಯಲ್ಲಿ ಕಷ್ಟನಷ್ಟಗಳನ್ನು ಕಂಡವರು. ಹೀಗಾಗಿ ತಮಗೆ ನೆರವಾದವರನ್ನೂ, ಪಾಠ ಹೇಳಿದವರನ್ನೂ ಕೊನೆಯ ತನಕ ಮರೆಯದೆ ನೆನಪಿಟ್ಟುಕೊಂಡರು. ತರಗತಿಯಲ್ಲಿ ಬುದ್ಧಿವಂತವಿದ್ಯಾರ್ಥಿಯೇ ಆಗಿದ್ದರೂ ಒಳ್ಳೆಯ ಅಧ್ಯಾಪಕರಲ್ಲಿ ಕಲಿತರೂ ಪಾಡುಪಡುವುದು ತಪ್ಪಲಿಲ್ಲ. ಆದರೆ ಈ ಅನುಭವಗಳಿಂದ ಅವರು ಉತ್ತರೋತ್ತರವಾಗಿ ಕಲಿಕೆಯಲ್ಲಿ, ಬದುಕಿನಲ್ಲಿ ಗಟ್ಟಿಯಾಗುತ್ತ ಹೋದರು.

ಹೈಸ್ಕೂಲು ಅಭ್ಯಾಸದ ಕಾಲದಲ್ಲಿಯೇ ಸ್ವಾತಂತ್ರ್ಯ ಚಳವಳಿಯ ಏರಾಟ ಹೋರಾಟಗಳನ್ನು ಕಂಡರು; ದೇಶಾಭಿಮಾನದ ಗೀಳು ಹಚ್ಚಿಕೊಂಡರು. ಅದರ ಸಂಕೇತವಾಗಿ ಒರಟುಖಾದಿಯ ಬಟ್ಟೆಯನ್ನೇ ಉಟ್ಟರು, ತೊಟ್ಟರು, ಬದುಕಿನ ಕೊನೆಯವರೆಗೆ, ಬಾಲ್ಯಕಾಲದಿಂದಲೇ ಬೆನ್ನಂಟಿ ಬಂದ ಹಠ, ಆತ್ಮಾಭಿಮಾನ, ನಿರ್ಭಿಡೆ ಅವರ ಬದುಕಿನುದ್ದಕ್ಕೆ ಹಿಂಬಾಲಿಸಿದ ನಚ್ಚು ಮೆಚ್ಚುಗಳಾದುವು. ಇದರಿಂದ ತಮಗೆ ಸರಿಕಾಣದ ಸಂದರ್ಭಗಳಲ್ಲಿ ಸಮೀಪಬಂಧುಗಳನ್ನೂ ಅಧ್ಯಾಪಕರನ್ನೂ ಪ್ರಶ್ನಿಸುವುದು, ಎದುರಿಸುವುದು ಅವರಿಗೆ ಸಾಧ್ಯವಾಯಿತು. ತಮ್ಮ ನಿಲವನ್ನು ಸಕಾರಣವಾಗಿ ಸಮರ್ಥಿಸಿಕೊಳ್ಳುವ ಎದೆಗಾರಿಕೆ ಅವರಲ್ಲಿತ್ತು. ಕನ್ನಡ ಪಂಡಿತ ಕೃಷ್ಣಪ್ಪನವರನ್ನೂ 'ಸಾಬೂನು ರಾದ್ಧಾಂತ'ದಲ್ಲಿ ಸ್ವಂತ ಚಿಕ್ಕಪ್ಪನವರನ್ನೂ ಮುಂದೆ ಇಂಗ್ಲಿಷ್ ಅಧ್ಯಾಪಕ ಕೆ. ಅನಂತರಾಮಯ್ಯನವರನ್ನೂ ಅವರು ದಿಟ್ಟತನದಿಂದ ಎದುರಿಸಿದ್ದು ಹೀಗೆ. ಮನೆ ಮಾರಿದ ಮೇಲೆ ತಂದೆಯ ಕಾಲದ ಹಳೆಯ ಬಾಕಿಯನ್ನು ಮಾರವಾಡಿಗೆ ಚುಕ್ತ ಮಾಡಿದ್ದು ಅವರ ಪ್ರಾಮಾಣಿಕವರ್ತನೆಗೆ ಒಂದು ಉದಾಹರಣೆ. ಬೆಂಗಳೂರಿನ ಗವೀಪುರ ಬಡಾವಣೆಯಲ್ಲಿ ಅವರು ಕಟ್ಟಿ ಬೆಳಸಿದ (೧೯೨೦-೨೮) ಕೋಹಿನೂರ್ ಸಂಘದ ಚಟುವಟಿಕೆಗಳು ಅವರ ಸಂಘಟನೆಯ ಸಾಮರ್ಥ್ಯ, ನಾಯಕತ್ವದ ಲಕ್ಷಣಗಳಿಗೆ ಒಳ್ಳೆಯ ದೃಷ್ಟಾಂತ. ಇಲ್ಲಿಯ ವೈವಿಧ್ಯಮಯ ಕಾರ್ಯಕ್ರಮಗಳನ್ನು ಅವರು ಹೇಗೆ ಉತ್ಸಾಹದಿಂದ, ದಕ್ಷತೆಯಿಂದ ನಿರ್ವಹಿಸುತ್ತಿದ್ದರು ಎನ್ನುವುದನ್ನು ನೋಡಿದರೆ, ಅವರ ಬದುಕಿನ ಪಥದಲ್ಲಿ ಅದೊಂದು ದಿಕ್ಸೂಚಿ ಎನ್ನಬೇಕು.

ಈ ಉತ್ಸಾಹ ದಕ್ಷತೆಗಳೇ ಅವರನ್ನು ಹಿಂದುಸ್ತಾನಿ ಸೇವಾದಳದ ಸ್ವಯಂಸೇವಕ ಶಿಕ್ಷಣಕ್ಕೆ ಕರೆದೊಯ್ದುವು. ೧೯೨೪ರಲ್ಲಿ ಗಾಂಧೀಜಿಯವರು ಮೈಸೂರು ರಾಜ್ಯಕ್ಕೆ ಬಂದು ನಂದಿದುರ್ಗದಲ್ಲಿದ್ದಾಗ, ಬಳಿಕ ಕುಮಾರಪಾರ್ಕ್ ಬಂಗಲೆಯಲ್ಲಿದ್ದಾಗ, ಅವರ ಸಮೀಪಸೇವೆಯ ಅಪೂರ್ವವಾದ ಅವಕಾಶವನ್ನು ಪಡೆದುಕೊಂಡರು. ಅದೇ ವರ್ಷ ಮದರಾಸು ಅಧಿವೇಶನ ನಡೆದಾಗಲೂ ಅವರ ಹಾಜರಿ, ಸೇವೆ ಮುಂದುವರಿಯಿತು. ಆಚಾರ್ಯರ ಬದುಕಿನಲ್ಲಿ ಗಾಂಧೀಜಿಯವರ ದೃಢನಿಶ್ಚಯ, ಸರಳಜೀವನಪದ್ಧತಿ, ಶಿಸ್ತುಪಾಲನೆ, ಕಾಲನಿಷ್ಠೆ ಎಲ್ಲವೂ ಒಂದಿಷ್ಟು ಪ್ರಮಾಣದಲ್ಲಿ ರಸವಾಗಿ ಬೆರೆತುಹೋದುವು.

ಆಚಾರ್ಯರ ಬಿ.ಎ. ಪದವಿ ವ್ಯಾಸಂಗದ ಅವಧಿಯ ಅನುಭವಗಳು ಸ್ವಾರಸ್ಯಕರವಾದವು. ಅವರ ಅಧ್ಯಾಪಕರಲ್ಲಿ ಅನೇಕರು ಶ್ರೇಷ್ಠರೇ ಇದ್ದರೂ ಅವರ ಸ್ವಭಾವದ ಕೆಲವು ವೈಚಿತ್ರ್ಯಗಳನ್ನೂ ವೈಪರೀತ್ಯಗಳನ್ನೂ ಒಂದು ಬಗೆಯ ನಿರ್ದಾಕ್ಷಿಣ್ಯದಿಂದ ತಮ್ಮ ಸ್ಮೃತಿಚಿತ್ರಗಳಲ್ಲಿ ದಾಖಲಿಸಿದ್ದಾರೆ. ತಮ್ಮ ಇಂಗ್ಲಿಷ್ ಪಾಠದ ತರಗತಿಯಲ್ಲಿ ಸೈಲಾಸ್ ಮಾರ್ನರ್ ಪಠ್ಯದ ಸಂಬಂಧವಾಗಿ ಅವರು ಬರೆದ ಒಂದು ಪ್ರಬಂಧ ಅವರ ಅಧ್ಯಾಪಕರಿಗೆ ಪ್ರಸಿದ್ಧ ಲೇಖಕರೊಬ್ಬರ ಪ್ರಕಟಿತ ಪ್ರಬಂಧದ ನಕಲಾಗಿರಬಹುದೇ ಎಂಬ ಭ್ರಮೆಯನ್ನುಂಟುಮಾಡಿತಂತೆ; ನಿಜ ತಿಳಿದ ಮೇಲೆ, ಅವರ ಪ್ರಬಂಧದ ಭಾಷೆ ವಿಷಯ ಎಲ್ಲವೂ ಉತ್ತಮಮಟ್ಟದಲ್ಲಿವೆ ಎಂದು ಪ್ರಶಂಸಿಸಿದರಂತೆ. ದಿಟವಾಗಿ ಇದೊಂದು ಹೃದಯಂಗಮವಾದ ಸನ್ನಿವೇಶ. ಮುಂದೆ ಗ್ರೀಕ್ ನಾಟಕಗಳನ್ನು ಅನುವಾದಿಸಿದ, ಅವಕ್ಕೆ ಪೀಠಿಕೆ ಟಿಪ್ಪಣಿಗಳ ವಿಪುಲ ಸಹಾಯಕಸಾಹಿತ್ಯವನ್ನು ಒದಗಿಸಿದ, ಸ್ವತಂತ್ರವಾಗಿ ಇಂಗ್ಲಿಷಿನಲ್ಲಿಯೇ ಲೇಖನಗಳನ್ನು ಬರೆದ ಅವರ ಶಕ್ತಿಗೆ ಮೊದಲ ಅರುಣಕಿರಣಗಳು ಇಂಥವು.

ಆಚಾರ್ಯರಿಗೆ ಇಂಗ್ಲಿಷಿನಲ್ಲಿ ಒಳ್ಳೆಯ ಪ್ರಭುತ್ವವಿದ್ದ ಕಾರಣ, ಬಿ.ಎ. ಮುಗಿದ ಮೇಲೆ ಇಂಗ್ಲಿಷ್ ಎಂ.ಎ. ಮಾಡುವುದು ಎಂದುಕೊಂಡಿದ್ದರು. ಆದರೆ ಬಿ.ಎಂ. ಶ್ರೀಕಂಠಯ್ಯನವರು ವಿಶ್ವವಿದ್ಯಾನಿಲಯದಲ್ಲಿ ರಿಜಿಸ್ಟ್ರಾರ್ ಆಗಿ, ಗೌರವ ಕನ್ನಡ ಪ್ರಾಧ್ಯಾಪಕರಾಗಿ ಕನ್ನಡ ಎಂ.ಎ. ಪಾಠಗಳನ್ನು ಮಾತ್ರ ತೆಗೆದುಕೊಳ್ಳುತ್ತಿದ್ದುದರಿಂದ, ಅವರ ಶಿಷ್ಯನಾಗುವ ಒಂದೇ ಉದ್ದೇಶದಿಂದ ಕನ್ನಡ ಎಂ.ಎ. ತರಗತಿಗೆ ಸೇರಿಕೊಂಡರು. ಓದಿಗಾಗಿ ತಮ್ಮ ಆಸ್ತಿಯ ಒಂದೂವರೆ ಎಕರೆ ಗದ್ದೆಯನ್ನು ತಮ್ಮ ದೂರದ ನೆಂಟರೊಬ್ಬರಿಗೆ ೨೫೦ ರೂಪಾಯಿಗಳಿಗೆ ಆಧಾರ ಮಾಡ ಬೇಕಾಯಿತು. ತಮ್ಮ ಕಾಲ ಮೇಲೆ ತಾವು ನಿಂತು ತಮ್ಮ ಓದು ಮುಂದುವರಿಸುವ ಛಲ ಸಾಮಾನ್ಯವಾದ್ದೇನಲ್ಲ. ಕನ್ನಡ ಎಂ.ಎ. ತರಗತಿಯಲ್ಲಿ ತಮಗೆ ಪಾಠಮಾಡಿದ ಅಧ್ಯಾಪಕರ ನಡೆನುಡಿ, ಪಾಠಕ್ರಮ ಪಾಂಡಿತ್ಯಗಳನ್ನು ಆಚಾರ್ಯರು ಸ್ವಲ್ಪ ಪ್ರಸ್ತಾವಿಸಿರುವುದರಿಂದ, ಕಳೆದುಹೋಗಬಹುದಾಗಿದ್ದ ಆ ವಿವರಗಳು ಸ್ವಲ್ಪವಾದರೂ ಅಚ್ಚಿನಲ್ಲಿ ಉಳಿಯವಂತಾಗಿವೆ. ಬಿ.ಟಿ. ಪದವಿಗೆ ಸೇರಿದಾಗಲೂ ಅವರಿಗೆ ಇನ್ನೊಬ್ಬರ ಸಹಾಯ ಬೇಕಾಯಿತು. ಆ ಪುಣ್ಯಾತ್ಮರ ಮಗಳಿಗೆ ಮನೆಯ ಪಾಠ ಹೇಳಿ ಋಣಸಂದಾಯ ಮಾಡೋಣವೆಂದುಕೊಂಡಾಗ, ಕುಟುಂಬನಿರ್ವಹಣೆಗೆ ಹಣ ಸ್ವೀಕರಿಸಬೇಕಾದ ಸಂದರ್ಭ ಬಂದಿತು. ಸಹಾಯವನ್ನು ಮಾಡಿದ ಪುಣ್ಯಾತ್ಮರು ಹಿಡಿದ ಹಠದಿಂದಾಗಿ ಅದನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆಚಾರ್ಯರು ಹಣಕಾಸಿನ ವಿಚಾರದಲ್ಲಿ ಎಂದೂ ಲೆಕ್ಕಾಚಾರದವರು. ಅವರ ವ್ಯವಹಾರದ ಪಾರದರ್ಶಕತೆಗೆ ಅನೇಕ ನಿದರ್ಶನಗಳು ಅವರ ಸ್ಮೃತಿಮಾಲಿಕೆಯಲ್ಲಿ ದಾಖಲಾಗಿವೆ. ಶ್ರೀಯವರ ಸಂಭಾವನಗ್ರಂಥದ ಪ್ರಕಟನೆ ಮತ್ತು ಉತ್ಸವ, ಮೈಸೂರು ಸಾಹಿತ್ಯಸಮ್ಮೇಳನದ ನಿರ್ವಹಣೆ ಈ ಕೆಲವು ಅಂತಹ ನಿದರ್ಶನಗಳು, ಬೇರೆಯವರಿಗೆ ಸಹಾಯಮಾಡಬೇಕಾದ ಸಂದರ್ಭಗಳಲ್ಲಿ ತಾವೇ ಇತರರಿಂದ ಸಾಲ ಬೇಡಿ ಪಡೆದು ಸಹಾಯಮಾಡಿರುವುದೂ ಉಂಟು.

ಆಚಾರ್ಯರು ೧೯೩೩ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟು ಕಛೇರಿಯಲ್ಲಿ, ಐದಾರು ವರ್ಷಗಳ ಬಳಿಕ ಮಹಾರಾಜ ಕಾಲೇಜಿನಲ್ಲಿ ಉದ್ಯೋಗದ ಮೇಲೆ ನಿಲ್ಲುವಂತಾದಾಗ, ಅವರ ಬದುಕು ಒಂದು ನೆಲೆಗೆ ಬಂದಂತಾಯಿತು. ಈ ನಡುವೆ ಒಂದೆರಡು ವರ್ಷಗಳ ಕಾಲ ಅವರು ತಮಿಳು ಮತ್ತು ಗ್ರೀಕ್ ಭಾಷೆಗಳ ಅಭ್ಯಾಸಕ್ಕೆ ಮನಸ್ಸು ಮಾಡಿದ್ದು ಅವರ ವ್ಯಕ್ತಿತ್ವ ವಿದ್ವತ್ತೆಗಳು ಬೆಳೆಯಲು, ಮುಂದೆ ಅವರಿಂದ ಕನ್ನಡ ಭಾಷೆ ಸಾಹಿತ್ಯಗಳಿಗೆ ಉತ್ತಮಸೇವೆ ಸಲ್ಲಲು, ಅವರ ಬದುಕಿನ ತಿರುವುಘಟ್ಟಗಳಲ್ಲಿ ತೆಗೆದುಕೊಂಡ ಒಳ್ಳೆಯ ಸಂಕಲ್ಪವೆನ್ನಬಹುದಾಗಿದೆ.

ನಿಘಂಟು ಕಛೇರಿಯ ಕೆಲಸವಂತೂ ಆಚಾರ್ಯರನ್ನು ಒಬ್ಬ ನಿಘಂಟುತಜ್ಞರನ್ನಾಗಿ ರೂಪಿಸಿತು; ಜೊತೆಗೆ ಕನ್ನಡ - ಕನ್ನಡ ನಿಘಂಟುವಿನ ಕೆಲಸಕ್ಕೂ ಅವರನ್ನು ಸಜ್ಜುಗೊಳಿಸಿತು. ಈ ಎರಡೂ ಕೆಲಸಗಳಲ್ಲಿ ಆದ್ಯರಾದವರ ಕೈಕೆಳಗೆ ಅವರು ಪಡೆದ ಶಿಸ್ತಿನ ಶಿಕ್ಷಣ, ಜೀವನಪಾಠಗಳು ಅವರನ್ನು ಒಂದು ಆಕೃತಿಗೆ ತಂದುವು, ಆದರ್ಶಾನುಸಂಧಾನಕ್ಕೆ ತೈಲಧಾರೆಗಳಾದುವು. ಆಗ್ಗೆ ಅರ್ಹತೆಯಿದ್ದೂ ಕೆಲಸ ಸಿಕ್ಕುವುದು ಕಷ್ಟ ಎನ್ನುವ ಕಾರ್ಪಣ್ಯದ ದಿನಗಳು. ಆಚಾರ್ಯರು ೯ ವರ್ಷಗಳ ಕಾಲ ತಿಂಗಳಿಗೆ ೬೦ ರೂಪಾಯಿ ಸಂಬಳದ ಮೇಲೆ ಅವಿಶ್ರಾಂತವಾಗಿ ದುಡಿದರು! ಇದೇನೇ ಇದ್ದರೂ, ಇಂಗ್ಲಿಷ್-ಕನ್ನಡ ನಿಘಂಟುಯೋಜನೆ ೭೫ ವರ್ಷಗಳಿಗೂ ಹಿಂದೆ ಕೈಗೆತ್ತಿಕೊಂಡ ದೊಡ್ಡ ಯೋಜನೆಯೇ ಆಗಿದ್ದು, ಅದು ನಡೆದು ಬಂದ ಪರಿ, ಅದಕ್ಕಾಗಿ ದುಡಿದ ಹಿರಿಯ ವಿದ್ವಾಂಸರ ಪರಿಶ್ರಮ, ಅದು ಮುಕ್ತಾಯ ಕಂಡ ಕಥೆ ಈ ಎಲ್ಲದರ ಒಂದು ಹಕ್ಕಿನೋಟವನ್ನು ಆಚಾರ್ಯರ ಕಥನದಿಂದ ತಿಳಿಯಬಹುದಾಗಿದೆ.

ನಿಘಂಟುಕಛೇರಿಯ ಕೆಲಸದಲ್ಲಿದ್ದಾಗಲೇ ಶ್ರೀಯವರ, ಮಾಸ್ತಿಯವರ ಸೆಳೆತಕ್ಕೆ ಸಿಕ್ಕು ಸ್ವಲ್ಪಕಾಲ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿ, ಸಮಿತಿ ಉಪಸಮಿತಿಗಳ ಸದಸ್ಯರಾಗಿ ತುಂಬ ಶ್ಲಾಘ್ಯವಾದ ಕೆಲಸಗಳನ್ನು ಮಾಡಿದರು. ಕನ್ನಡ ನುಡಿ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಗಳ ಪುಟಗಳನ್ನು ತಿರುವಿಹಾಕಿದರೆ, ಅದರ ಒಂದು ಸ್ಥೂಲಪರಿಚಯ ನಮಗೆ ಸಾಧ್ಯವಾಗುತ್ತದೆ. ತಮ್ಮ ಕೆಲಸಗಳಲ್ಲಿ ಅವರಿಗಿದ್ದ ಶ್ರದ್ಧೆ, ಶ್ರಮಸಹಿಷ್ಣುತೆ, ಅಚ್ಚುಕಟ್ಟು, ವಿವೇಕ ವಿದ್ವತ್ತೆಗಳು ಯಾವ ಪ್ರಕಾರದವು ಎನ್ನುವುದು ತಮ್ಮಿಂದ ತಾವೇ ತೆರೆದುಕೊಳ್ಳುತ್ತವೆ. ವಿ.ಸೀ. ಅವರ ಕೆಳೆತನದೊಂದಿಗೆ ಕನ್ನಡದ ಬಾವುಟದ ಸಿದ್ಧತೆ, ಸಂಭಾವನೆಯ ಪ್ರಕಟನೆ ಉತ್ಸವಗಳ ಸಂಭ್ರಮ ಇವೆಲ್ಲ

ತಿಳಿಯಬೇಕಾದ ಸಂಗತಿಗಳು. ಇವು ಇಲ್ಲಿಯೂ ಸ್ಮೃತಿಚಿತ್ರಮಾಲಿಕೆಯಲ್ಲಿಯೂ ಕಥನಗೊಂಡು ಈ ಸಂಬಂಧದ ಇತಿಹಾಸದ ರಚನೆಗೆ ಹಂದರಗಳಾಗಿವೆ.

೧೯೪೭ ರಿಂದ ೧೯೫೫ ರವರೆಗೆ ಆಚಾರ್ಯರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ, ಭಾಷಾಶಾಸ್ತ್ರವಿಭಾಗದ ಮುಖ್ಯರಾಗಿ ಕೆಲಸಮಾಡಿದ ಅವಧಿ ಅವರಿಗೆ ಸಾಕಷ್ಟು ನೆಮ್ಮದಿಯನ್ನು ತಂದುಕೊಟ್ಟಿತ್ತು. ಆಗ ಅವರ ವಿದ್ಯಾರ್ಥಿಗಳಿಗೆ ಅವರ ಬೋಧನಪಟುತ್ವದ ಪರಿಚಯವಾಯಿತು.

ಆಚಾರ್ಯರು ತಮ್ಮ ಸ್ವಭಾವದ ದೌರ್ಬಲ್ಯಗಳನ್ನು ದಾಟಲಾರದವರಾಗಿದ್ದರೂ, ತಮ್ಮ ಮಿತಿಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. “ನನ್ನದು ಒಂದು ರೀತಿಯ ವ್ಯಾಘ್ರಸ್ನೇಹವೆಂಬುದು ನನ್ನನ್ನು ಅರಿತವರಿಗೆಲ್ಲಾ ಗೊತ್ತು” ಎಂದೂ “ನಿಷ್ಠುರವಾದಿಯೆಂದು ಆ ವೇಳೆಗಾಗಲೇ ದುಷ್ಪ್ರಸಿದ್ಧನಾಗಿದ್ದ ನಾನು ಹೇಳಿ ಕೇಳಿ ಒರಟ” ಎಂದೂ “ಯಾವಾಗಲೂ ತಕರಾರು ಆಸಾಮಿ ನಾನು” ಎಂದೂ “ಎಲ್ಲಿಯೂ ಆವಶ್ಯಕವೋ ಅನಾವಶ್ಯಕವೊ ಮೊಂಡಾಟ ತಕರಾರುಗಳೆ ನನ್ನ ಜಾತಕದಲ್ಲಿ ಬರೆದಿರುವಂತೆ ತೋರುತ್ತದೆ” ಎಂದೂ ಸಂದರ್ಭಸಿಕ್ಕಾಗ ತಮ್ಮ ವರ್ತನೆಯನ್ನು ತಾವೇ ಪುನರಾಲೋಕನಮಾಡಿಕೊಂಡು ಅಸಹಾಯಕವಾಗಿ ಸಮರ್ಥಿಸಿಕೊಂಡಿದ್ದಾರೆ. ಹಿರಿಯರಾದ ಗೋವಿಂದ ಪೈಗಳನ್ನು ಬೆಂಗಳೂರಿಗೆ ಬರಮಾಡಿಕೊಂಡದ್ದು, ಪ್ರಬುದ್ಧ ಕರ್ಣಾಟಕದ ಸಂಪಾದಕತ್ವವನ್ನು ನಿರಾಕರಿಸಿದ್ದು, ಕುವೆಂಪು ಅವರ ಒಂದು ಅಭಿನಂದನ ಸಮಾರಂಭದ ವೇಳೆ ವಂದನಾರ್ಪಣೆ ಮಾಡುವಾಗ ಮುಖ್ಯಮಂತ್ರಿಗಳ ಒಂದು ಸೂಚನೆಯನ್ನು ಅಲಕ್ಷಿಸಿದುದು, ಕರ್ನಾಟಕ ವಿಶ್ವವಿದ್ಯಾಲಯದ ಉತ್ತರಪತ್ರಿಕೆಗಳ ನಕಲುಪ್ರಸಂಗವನ್ನು ರಿಜಿಸ್ಟ್ರಾರಿಗೆ ತಿಳಿಸಿದುದು, ಮೈಸೂರು ವಿದ್ಯಾಭ್ಯಾಸ ಇಲಾಖೆಗಾಗಿ ಪಠ್ಯಪುಸ್ತಕವೊಂದನ್ನು ಸಿದ್ಧಮಾಡುವಾಗ ಹಗರಣವಾದುದು, ಕನ್ನಡ ನಿಘಂಟುವಿನ ಕೆಲಸದ ಸಂಬಂಧದಲ್ಲಿ ಆಡಳಿತವರ್ಗದೊಂದಿಗೆ ಬಂದ ಭಿನ್ನಾಭಿಪ್ರಾಯಕ್ಕೆ ರಾಜೀನಾಮೆ ನೀಡಿದುದು ಈ ಹಲವಾರು ಪ್ರಸಂಗಗಳಲ್ಲಿ ಅವರು ಮುಲಾಜಿಲ್ಲದೆ ಕಠಿಣವಾಗಿ ನಡೆದುಕೊಂಡಿದ್ದಾರೆ; ಹೇಗೋ ಹೊಂದಿಕೊಂಡು ಹೋದರಾಯಿತು ಎಂದು ನಡೆದುಕೊಂಡಿಲ್ಲ.

ಈ ಸಂದರ್ಭದಲ್ಲಿ, ವಿರಳವಾಗಿ ನಡೆದೊಂದು ಆಚಾರ್ಯರ ಅಭಿನಂದನ ಸಮಾರಂಭದಲ್ಲಿ ಅವರ ಗೆಳೆಯರಾದ ವಿ.ಸೀತಾರಾಮಯ್ಯನವರು ಭಾಷಣಮಾಡುತ್ತ ಹೇಳಿದ ಈ ಮಾತು ಮನೋಜ್ಞವಾಗಿದೆ:

“ರಾಘವಾಚಾರ್ಯರು ಪರಿಶುದ್ಧ ಚಿನ್ನ, ಈ ಮೃದುಲೋಹಕ್ಕೆ ತುಸುವಾದರೂ ತಾಮ್ರ ಬೆರೆತಿದ್ದರೆ ವ್ಯವಹಾರಜಗತ್ತಿನಲ್ಲಿ ಇವರೆಷ್ಟು ಯಶಸ್ವಿಯಾಗಿರುತ್ತಿದ್ದರು ಎಂದು ಅನೇಕ ವೇಳೆ ನಾನು ಪರಿತಪಿಸಿದ್ದುಂಟು.” - ಆಚಾರ್ಯರು ಬೆಳ್ಳಾವೆಯವರು, ಶ್ರೀಯವರು, ವೆಂಕಣ್ಣಯ್ಯನವರು, ಕೃಷ್ಣಶಾಸ್ತ್ರಿಗಳು, ಪೈಗಳು, ಡಿವಿಜಿ.ಯವರು, ಮಾಸ್ತಿಯವರು ಈ ಸಾಲಿನ ಹಿರಿಯರನ್ನು ತುಂಬ ಗೌರವಭಾವದಿಂದ ಕಾಣುತ್ತಿದ್ದರು. ಅವರ ಬದುಕಿನ ಪ್ರಸಂಗಗಳಲ್ಲಿ ಹೊನ್ನೆಳೆಗಳನ್ನು ಬಿಡಿಸಿ ತೋರಿಸಿ ಅವರ ಹಿರಿಮೆ ಗರಿಮೆಗಳು ಎದ್ದು ತೋರುವಂತೆ ಮಾಡಿದ್ದಾರೆ. ಆದರೆ ಇಲ್ಲಿಯೂ ಆ ಹಿರಿಯರೊಂದಿಗೆ ಎದ್ದ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನೂ ವಿರಸಗಳನ್ನೂ ನಿಸ್ಸಂಕೋಚವಾಗಿ ತಿಳಿಸಿ ತಮ್ಮ ನಿಲವನ್ನು ಸಮರ್ಥಿಸಿಕೊಂಡಿದ್ದಾರೆ.

ಹಣಕಾಸಿನ ವಿಚಾರದಲ್ಲಿ ಯಾವಾಗಲೂ ಆಚಾರ್ಯರು ಸುಭಿಕ್ಷವನ್ನು ಕಂಡವರಲ್ಲ. ಅಂದಿನ ಸಂಬಳ ಸಾರಿಗೆಗಳೇ ಹಾಗಿದ್ದುವು. ಅಲ್ಲದೆ ಸಂಸಾರದ ಜವಾಬ್ದಾರಿಗಳೂ ಹೆಚ್ಚಾಗಿರುತ್ತಿದ್ದುವು. ಹೀಗಿದ್ದೂ, ತಮಗೆ ಪರಿಚಯವಿಲ್ಲದ, ಪಂಗಡದವರೂ ಅಲ್ಲದ ಒಂದು ಕುಟುಂಬದ ಹಾವೇರಿಯ ಹೆಣ್ಣುಮಗಳೊಬ್ಬಳು ಎಸ್.ಎಸ್.ಎಲ್.ಸಿ. ಆದ ಮೇಲೆ ಮುಂದಕ್ಕೆ ಓದಲು ಆಸೆಪಟ್ಟಳು ಎಂದು, ಮೈಸೂರಿಗೆ ಕರಸಿಕೊಂಡು, ಮನೆಯಲ್ಲಿ ಹಲವು ವರ್ಷ ಇರಿಸಿಕೊಂಡು, ಎಂ.ಎ.ವರೆಗೆ ಓದಿಸಿ, ಪಿಎಚ್.ಡಿ.ಯನ್ನೂ ಮಾಡಿಸಿ, ಕೆಲಸವನ್ನೂ ಕೊಡಿಸಿದರು. ತಮ್ಮ ಬದುಕಿನುದ್ದಕ್ಕೆ ಆಕೆಯನ್ನು ಸ್ವಂತ ಮಗಳೆಂದೇ ನೋಡಿಕೊಂಡರು. ಇದು ಎಲ್ಲರಿಗೂ ಸಾಧ್ಯವಾದ್ದಲ್ಲ (ನೋಡಿ : ಎಸ್. ವಿನೋದಾ ಬಾಯಿ, 'ನನ್ನ ಪಾಲಿನ ಬಾಳ ಗುರು', ಶಿಷ್ಯರು ಕಂಡಂತೆ ಗುರುಗಳು, ಬೆಂಗಳೂರು, ಪು. ೧೭೧-೮೩), ವಿದ್ಯಾಭ್ಯಾಸಕ್ಕೆ ಕಷ್ಟಪಡುವವರಿಗೆ ಹಣದ ಸಹಾಯ ಮಾಡುವುದು, ವಾರಾನ್ನದ ಏರ್ಪಾಡು ಮಾಡಿಕೊಡುವುದು, ಫೀಜು ಮಾಫಿ ಮಾಡಿಸುವುದು ಇಂತಹ ಸಹಾಯವನ್ನು ತಾವಾಗಿಯೇ ಅವರು ಮಾಡುತ್ತಿದ್ದುದುಂಟು.

ಆಚಾರ್ಯರ ಸ್ವಭಾವದ ಇನ್ನೊಂದು ವಿಶೇಷಲಕ್ಷಣವನ್ನು ಇಲ್ಲಿ ಪ್ರತ್ಯೇಕವಾಗಿ ನೆನೆಯಬೇಕು. ಅವರು ಬ್ರಾಹ್ಮಣೋಚಿತವಾದ ನಿತ್ಯ ನೈಮಿತ್ತಿಕ ಕರ್ಮಗಳನ್ನೂ ರಾಮಾಯಣಪಾರಾಯಣ ಮೊದಲಾದ ವಿಧಿಗಳನ್ನೂ ಕ್ರಮವಾಗಿ ಇಟ್ಟುಕೊಂಡಿದ್ದರು. ಆದರೆ ಜಾತಿಜಂಜಡದ ಕಟ್ಟುಪಾಡುಗಳನ್ನು ದಾಟಿದ ಮಾನವತಾವಾದಿಯಾಗಿದ್ದರು. ಈ ವಿಷಯದಲ್ಲಿ ಅವರು ಗಾಂಧೀತತ್ತ್ವದ ಅನುಯಾಯಿಯಾಗಿ ಎಲ್ಲರೊಂದಿಗೆ ಜಾತಿಭೇದವಿಲ್ಲದೆ ಸಮಭಾವದಿಂದ ವ್ಯವಹರಿಸುತ್ತಿದ್ದರು. ವಿಶ್ವವಿದ್ಯಾನಿಲಯದ ಪರೀಕ್ಷೆಯೊಂದರಲ್ಲಿ ಅಂಕಸಂಕಲನಕಾರಕ್ಕೆ ತಮ್ಮೊಂದಿಗೆ ಜತೆಕೆಲಸಗಾರರಾಗಿದ್ದ ಅಧ್ಯಾಪಕ ಬಿಲ್ಲಯ್ಯ ಎಂಬವರನ್ನು ಮನೆಗೆ ಕರೆದುಕೊಂಡು ಹೋಗಿ, ಊಟದ ಕೋಣೆಯಲ್ಲಿ ಒಟ್ಟಿಗೆ ಕೂತು ಊಟಮಾಡಿದ್ದು, ಆಚಾರ್ಯಪತ್ನಿ ಬಿಲ್ಲಯ್ಯನವರ ಎಂಜಲತಟ್ಟೆ ತೊಳೆದದ್ದು ಆ ಕಾಲಕ್ಕೆ ಒಂದು ವಿಶೇಷ ವಿದ್ಯಮಾನವೇ ಆಗಿತ್ತು. ಆ ಸಂದರ್ಭದ ವಿವರಗಳು 'ನಂದಾನೆನಪು' ವಿನಲ್ಲಿವೆ.

ಆಚಾರ್ಯರ ಭೋಜನರಸಿಕತೆ ಪರುಠವಣೆಗಳ ವಿಚಾರ ಸಹ ಉಲ್ಲೇಖಿಸಬೇಕಾದ್ದು. ಇದರ ಒಂದು ಸುರಸಚಿತ್ರಣ ಅವರ 'ನಂದಾನೆನಪು'ವಿನ 'ಗೀಕ್ ಭೋಜನ' ಎಂಬ ಶೀರ್ಷಿಕೆಯಡಿಯಲ್ಲಿ ಬಂದಿದೆ. ಅವರ ಮನೆಯ ಕೃಷ್ಣಜನ್ಮಾಷ್ಟಮಿಯ ಕೃಷ್ಣಪ್ರಸಾದವನ್ನು ಸವಿದವರಿಗೂ ಅದರ ಪರಿಚಯವುಂಟು.

ಸಮಕಾಲೀನ ಭಾರತೀಯ ಸಾಹಿತ್ಯೇತಿಹಾಸದಲ್ಲಿ ಆಚಾರ್ಯರು ಗ್ರೀಕ್ ಮೂಲದಿಂದ ನೇರವಾಗಿ ಅಲ್ಲಿಯ ನಾಟಕಗಳನ್ನು ಕನ್ನಡಿಸಿದ್ದು ಅಭೂತಪೂರ್ವವಾದ ವಿದ್ಯಮಾನ. ಅದರ ಮಹತ್ತ್ವ ಮನವರಿಕೆಯಾದ್ದು ಅವರು ದೆಹಲಿ ವಿಶ್ವವಿದ್ಯಾನಿಲಯದಲ್ಲಿದ್ದಾಗ, ಕುಲಪತಿ ಎನ್.ಕೆ. ಸಿದ್ಧಾಂತ ಅವರಿಗೆ ತಮ್ಮ ವಿಶ್ವವಿದ್ಯಾನಿಲಯದಲ್ಲಿ ಒಬ್ಬ ಗ್ರೀಕ್ ವಿದ್ವಾಂಸರಿದ್ದುದು ಹೆಮ್ಮೆಯ ವಿಷಯವಾಗಿತ್ತು. ಆ ವಿಶ್ವವಿದ್ಯಾನಿಲಯದ ಆಧುನಿಕ ಭಾರತೀಯಭಾಷಾವಿಭಾಗದ ಮುಖ್ಯಸ್ಥರಾಗಿದ್ದ ಪ್ರಾಧ್ಯಾಪಕ ಆರ್.ಕೆ. ದಾಸಗುಪ್ತ ಅವರಿಗೆ, ಅವರ ಕಲಕತ್ತೆಯ

ಮಿತ್ರರೊಬ್ಬರು ತಾವು ಓದುತ್ತಿದ್ದ ಇಂಗ್ಲಿಷ್ ಗ್ರಂಥವೊಂದರಲ್ಲಿ ಅರ್ಥಕೊಡದೆ ಉದ್ಧರಿಸಿದ್ದ ಕೆಲವು ಗ್ರೀಕ್ ವಾಕ್ಯಖಂಡಗಳನ್ನು ಎತ್ತಿ ಬರೆದು ಅವುಗಳ ಅರ್ಥ ತಿಳಿಸುವಂತೆ ಕೇಳಿದ್ದರು. ತಮಗೆ ಅದರ ತಲೆಬುಡ ತಿಳಿಯದೆಂದು ಹೇಳಿ ಅವರು ಅದನ್ನು ಆಚಾರ್ಯರ ಕೈಗೆ ಕೊಟ್ಟರು. ಆಚಾರ್ಯರು ಆ ಒಂದೊಂದೂ ವಾಕ್ಯಖಂಡದ ಅರ್ಥವಿವರಣೆಯನ್ನು ಸಂದರ್ಭಸಹಿತ ನೀಡಿದರು. ಆಗ ದಾಸಗುಪ್ತ ಅವರು, "ಇದೀಗ ಪ್ರಾಚೀನ ಪದ್ಧತಿಯ ಪಾಂಡಿತ್ಯ ಕಣ್ಮರೆಯಾಗುತ್ತ ಬಂದಿದೆ. ನಮ್ಮ ವಿಶ್ವವಿದ್ಯಾನಿಲಯದ ಮರ್ಯಾದೆಯನ್ನು ಕಾಪಾಡಿದಿರಿ" ಎಂಬುದಾಗಿ ಮೆಚ್ಚುಮಾತಾಡಿದರು.

ಹೀಗೆಯೇ ಒಂದು ಸಂದರ್ಭದಲ್ಲಿ ಪ್ರಸಿದ್ಧ ಭಾಷಾವಿದ್ವಾಂಸ ಎಸ್.ಕೆ. ಚಟರ್ಜಿ ಅವರು ದೆಹಲಿಗೆ ಬಂದಿದ್ದಾಗ, ವಿಶ್ವವಿದ್ಯಾನಿಲಯಕ್ಕೆ ಕೂಡ ಬಂದರು. ಆಗ ದಾಸಗುಪ್ತ ಅವರು ಆಚಾರ್ಯರನ್ನು ಅವರಿಗೆ ಪರಿಚಯಿಸಿ, "ಇವರು ರಾಘವಾಚಾರ್ಯರು, ಗ್ರೀಕ್‌ನಾಟಕಗಳನ್ನು ನೇರವಾಗಿ ಗ್ರೀಕ್‌ಮೂಲದಿಂದಲೇ ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ನನಗೆ ತಿಳಿದಮಟ್ಟಿಗೆ ಬೇರೆ ಯಾರೂ ಹೀಗೆ ಮಾಡಿಲ್ಲ" ಎಂದರು. ಚಟರ್ಜಿಯವರು ವೇದಿಕೆಯಿಂದ ಕೆಳಗಿಳಿದು ಬಂದು, ಆಚಾರ್ಯರನ್ನು ಅಪ್ಪಿಕೊಂಡರು; "Really I am proud of you, Mr. Raghavachar ; you are really great" ಎಂದರು.

ಹೌದು, ಪ್ರೊಫೆಸರ್ ಕ.ವೆಂ. ರಾಘವಾಚಾರ್ಯರು ದಿಟವಾಗಿ ದೊಡ್ಡವರು; ಅವರನ್ನು ಪಡೆದ ಕನ್ನಡನಾಡಿನ, ನಾಡವರ ಭಾಗ್ಯವೂ ದೊಡ್ಡದು."

---

ಅನುಬಂಧಗಳು

---

೧. ಕ.ವೆಂ. ರಾಘವಾಚಾರ್ಯರ ಹಸ್ತಾಕ್ಷರದ ಮಾದರಿ

R. V. Raghavachar [illegible]
[illegible]
[illegible]

19/4 Thapar [illegible]
Shaktinagar
Delhi-7

[illegible]

My dear [illegible],

I am sure the receipt of this unexpected letter will cause you no small surprise. A few days back my [illegible] was blessed with a copy of your English rendering of the [illegible] Stotra by His Holiness Sri Sri [illegible] on the sacred occasion of his visit to the Delhi Regional Office of the [illegible] Bank. I thoroughly enjoyed the work and read [illegible] with the text and the translation. I can well appreciate the [illegible] and the [illegible] you have [illegible] to the holy task. The translation [illegible] the [illegible] flavour of the nineteenth century King's English, replete with the scholarly vocabulary derived from Greek and Latin, which the students of the previous generation were taught to appreciate and emulate as a model. We were led to believe that 'ignorance' was [illegible] while 'reticence' was [illegible], and that while the [illegible] the [illegible] 'genuflected' you will be [illegible] the [illegible] of this [illegible]. My daughter, who also went through the work and enjoyed it, asked me the meaning of these Latin derived words. When I explained to her their meaning, she [illegible] [illegible] [illegible]" I was not a little [illegible] at this remark. But I [illegible] replied "[illegible]". Then both of us laughed at the remark and the response, and the matter rested there. You have really done a great and valuable service in bringing out an authentic translation of the [illegible] Stotra along with the original text. Your esteemed friend, my namesake, [illegible] [illegible] on his persistently persuading, [illegible] and [illegible] you to undertake the sacred work and

accomplish it with such success. It is only one that has himself experienced the travails of translating from one tongue to another (alien) tongue that can appreciate the diligent labour and meticulous care of another translator.

I am sure you will not mistake me for the following minor observations and will take them in the right spirit.

i) Page 27: ಯದಿ ನಾಮ ನ ತಸ್ಯೈವ ವಶೇ ಸಕಲಂ ಜಗತ್ ತದಾ ಕಥಂ ನಿತ್ಯಸುಖಂ ನ ಪ್ರಾಪ್ನುಯಾತ್ ॥ = "If verily the entire universe should not be under His control, truly why should not eternal happiness be its lot?". The question seems to imply that Hari's overlordship of the world is a veritable impediment to universal salvation and eternal bliss. I wonder if it would be a sound postulate or dogma.

ii) Page 142: "ಸಾಧು ಮೋಹಹರಂ" = "which destroy the delusion of the virtuous". You have rendered ಸಾಧು as virtuous. No doubt you will have done so on good authority. But I submit that "learned" or "wise" would be a more suitable rendering. It is possible that one's learning or even wisdom may be tainted with delusion. But, how can virtue be tainted?

Notwithstanding the above inconsequential comments, please accept my hearty congratulations on the excellent and meritorious work you have achieved.

With best regards,

Yours sincerely,

K.V. Raghavachar

## ೨. ಪುಸ್ತಕಗಳು

೧. ಸೊಫೋಕ್ಲೇಸ್ ಮಹಾಕವಿಯ ಅಂತಿಗೊನೆ

ಪ್ರಬುದ್ಧ ಕರ್ಣಾಟಕ ೧೯-೧, ೧೯೩೮, ಪು. ೫೯-೮೨ ; ೧೯-೨,೩, ೧೯೩೮, ಪು. ೨೩-೬೧ ; ಮೊದಲ ಅಚ್ಚು ೧೯೩೮ ; ಎರಡನೆಯ ಅಚ್ಚು ೧೯೫೬, ಶ್ರೀರಾಮಚಂದ್ರ ಬುಕ್ ಡಿಪೋ, ಮೈಸೂರು

೨. ಯಶೋಧರಚರಿತೆ

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ವಿ. ವಿ, ೧೯೪೧, ೧೯೪೩ (ದ್ವಿಮು), ರಾಮಚಂದ್ರ ಬುಕ್ ಡಿಪೋ, ಮೈಸೂರು,೧೯೪೯ (ತೃ.ಮು.); ಕವಿಕಾವ್ಯಮಾಲೆ, ಶಾರದಾಮಂದಿರ, ಮೈಸೂರು ೧೯೬೧, ೧೯೬೯(ನಾಲ್ಕನೆಯ ಮತ್ತು ಐದನೆಯ ಮುದ್ರಣಗಳು)

೩. ಅಯ್‌ಸ್ಕುಲೊಸ್ - ಅಗಮೆಮ್ನೋನ್

'ಮೂರು ಗ್ರೀಕ್ ನಾಟಕಗಳು', ಸಾಹಿತ್ಯ ಅಕಾಡೆಮಿ, ಹೊಸ ದೆಹಲಿ, ೧೯೬೫

೪. ಸೊಫೋಕ್ಲೇಸ್ - ಒಯ್ದಿಪೌಸ್ ದೊರೆ

"ಮೂರು ಗ್ರೀಕ್ ನಾಟಕಗಳು, ಸಾಹಿತ್ಯ ಅಕಾಡೆಮಿ, ಹೊಸ ದೆಹಲಿ, ೧೯೬೫

೫. ಅರಿಸ್ತೊಫನೇಸ್ - ಕಪ್ಪೆಗಳು

"ಮೂರು ಗ್ರೀಕ್ ನಾಟಕಗಳು, ಸಾಹಿತ್ಯ ಅಕಾಡೆಮಿ, ಹೊಸ ದೆಹಲಿ, ೧೯೬೫

೬. ಸೊಫೋಕ್ಲೇಸ್ ಮಹಾಕವಿಯ ಒಯ್ದಿಪೌಸ್ ಕೊಲೊನೊಸ್ಸಿನಲ್ಲಿ

ಕರ್ಣಾಟಕ ಸಂಘ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೩

೭. ನಂದಾನೆನಪು (ಪೀಠಿಕೆಗಳು, ಲೇಖನಗಳು, ಭಾಷಣಗಳು ಮತ್ತು ಆತ್ಮವೃತ್ತ)
ಉಷಾಸಾಹಿತ್ಯಮಾಲೆ, ಮೈಸೂರು - ೧, ೧೯೭೩
೮. ಸೊಫೋಕ್ಲೇಸ್ ಮಹಾಕವಿಯ ಏಲೆಕ್ತ್ರ

ಉಷಾಸಾಹಿತ್ಯಮಾಲೆ, ಮೈಸೂರು - ೧, ೧೯೭೩

೯. ಸೊಫೊಕ್ಲೇಸ್ ಮಹಾಕವಿಯ ಫಿಲೊಕ್ತೇತೇಸ್

ಉಷಾಸಾಹಿತ್ಯಮಾಲೆ, ಮೈಸೂರು - ೧, ೧೯೭೩

೧೦. ಸೊಪೊಕ್ಲೇಸ್ ಮಹಾಕವಿಯ ಮೂರು ಗ್ರೀಕ್ ನಾಟಕಗಳು

ಕರ್ನಾಟಕ ಅನುವಾದಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೭

* ಕ್ರಮಸಂಖ್ಯೆ ೩, ೪ ಮತ್ತು ೫ 'ಮೂರು ಗ್ರೀಕ್ ನಾಟಕಗಳು' ಎಂಬ ಪುಸ್ತಕದಲ್ಲಿಯೂ ಕ್ರಮಸಂಖ್ಯೆ ೮ ಮತ್ತು ೯ 'ಸೊಫೋಕ್ಲೇಸ್ ಮಹಾಕವಿಯ ಏಲೆಕ್ತ್ರ', ಫಿಲೊಕ್ತೇತೇಸ್' ಎಂಬ ಪುಸ್ತಕದಲ್ಲಿಯೂ ಸೇರಿವೆ. ಕ್ರಮಸಂಖ್ಯೆ ೧೦ ರಲ್ಲಿ ಕ್ರಮಸಂಖ್ಯೆ ೬, ೮ ಮತ್ತು ೯ ರ ಪುಸ್ತಕಗಳನ್ನು ಸೇರಿಸಿದೆ.

## ೩. ಕನ್ನಡ ಲೇಖನಗಳು

೧. ಭಾಷೆ

೧. ಕನ್ನಡನುಡಿ

ಪ್ರಜಾವಾಣಿ ೧-೧೧-೧೯೫೬ ; ನಂದಾನೆನಪು, ಉಷಾಸಾಹಿತ್ಯ ಮಾಲೆ, ಮೈಸೂರು - ೧, ೧೯೭೩, ಪು. ೪೩-೫೧.

೨. ಕನ್ನಡ ಮಾತುಗಳ ಅರ್ಥನಿರ್ಣಯದಲ್ಲಿ ತಮಿಳಿನ ನೆರವು ಕನ್ನಡ ನುಡಿ ೧-೩೨, ೧೯೩೯ ; ನಂದಾನೆನಪು, ಪು. ೩೨-೩೬

೩. ಕನ್ನಡ ಮಾತುಗಳ ಬರುವಳಿ

ಕನ್ನಡ ನುಡಿ ೧-೨೮, ೨೯, ೩೦, ೧೯೩೯ ; ನಂದಾನೆನಪು, ಪು. ೨೬-೩೧

೪. ಕೆಲವು ಗಾದೆಗಳು

ಪಂಜೆಯವರ ನೆನಪಿಗಾಗಿ, ಪುತ್ತೂರು, ೧೯೫೨ ; ನಂದಾನೆನಪು, ಪು, ೨೭೧-೨೭೪

೫. ತಮಿಳು ಕನ್ನಡ ಮಾತುಗಳು

ಜೀವನ ೧ - ೯ ; ನಂದಾನೆನಪು, ಪು. ೨೨-೨೫

೬. ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಭಾಷಾಸಮಸ್ಯೆ

ಬಾಗಿನ, ಮೈಸೂರು, ೧೯೫೪ ; ನಂದಾನೆನಪು, ಪು. ೩೭-೪೨

೭. ನುಡಿನಂಟು

ಅಭಿವಂದನೆ, ಮೈಸೂರು ೧೯೫೬ ; ನಂದಾನೆನಪು, ಪು. ೧೦-೧೬

೮. ನುಡಿಮೋಸ

ಜೀವನ ೧-೧೨ ; ನಂದಾನೆನಪು, ಪು. ೧೭-೨೧

೯. ಪುಳ್ಳಂಗಾಯುಂಡೆ

ಮುತ್ತು ಹವಳ, ಉಷಾಸಾಹಿತ್ಯಮಾಲೆ, ಮೈಸೂರು, ೧೯೫೦ ; ನಂದಾನೆನಪು, ಪು. ೨೭೫ - ೨೮೧

೧೦. ಭಾಷಾಶುದ್ಧಿ

ಪ್ರಬುದ್ಧ ಕರ್ಣಾಟಕ ೨೭-೨, ಪು. ೩-೧೨ ; ನಂದಾನನಪು, ಪು. ೧-೯.

**೨.ಸಾಹಿತ್ಯ, ಸಂಕೀರ್ಣ**

೧೧. ಕಾಲ್ಡ್‌ವೆಲ್ ಐಯರ್ ಚರಿತಮ್ (ಗ್ರಂಥವಿಮರ್ಶೆ)

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೨೩-೨, ೧೯೩೮; ನಂದಾನೆನಪು, ಪು. ೫೫-೫೬

೧೨. ಕುಂಭಕರ್ಣನ ಕರುಳು

ಉಡುಗೊರೆ, ಮೈಸೂರು, ೧೯೫೬; ನಂದಾನೆನಪು, ಪು. ೬೩-೬೬

೧೩. ಗಾಂಧಿಯವರ ಬೀಡಾರದಲ್ಲಿ

ಆಕಾಶವಾಣಿಭಾಷಣ, ಮೈಸೂರು, ೧೯೪೯ ; ನಂದಾನೆನಪು,ಪು. ೨೬೩ - ೨೭೦

೧೪. ಜನ್ನಕವಿ ಮತ್ತು ಆತನ ಕೃತಿಗಳು

ಪೀಠಿಕೆ, ಯಶೋಧರಚರಿತೆ, ಮೈ.ವಿ.ವಿ., ಮೈಸೂರು ೧೯೪೧, ಪು. ೧-೬೭ ; ನಂದಾನೆನಪು, ಪು. ೭೧ - ೧೨೧.

೧೫. ಜ್ಯೋತಿಷ್ಯ : ವೈಚಾರಿಕ ದೃಷ್ಟಿ

ಪ್ರಜಾವಾಣಿ ೧೨-೯-೧೯೭೦ ; ನಂದಾನೆನಪು, ಪು. ೨೮೬ - ೨೮೯

೧೬. ತಾಯಿ ಮಗು (ಮಾಸ್ತಿಯವರ ಮಾತಿನಿಂದ)

ಕನ್ನಡ ನುಡಿ ೧-೪೭, ಆಗಸ್ಟ್ ೧೯೩೯ ; ನಂದಾನೆನಪು, ಪು. ೨೯೦-೨೯೧.

೧೭. ತುಮಕೂರಿನವರ ಗುತ್ತಿಗೆ

ಕನ್ನಡ ನುಡಿ ೩೪-೧೫, ೧೬, ೧೯೭೧ ; ನಂದಾನೆನಪು, ಪು. ೧೪೫ - ೧೫೦

೧೮. ತುಮಕೂರುಜಿಲ್ಲಾ ಪ್ರಥಮ ಕನ್ನಡಸಾಹಿತ್ಯಸಮ್ಮೇಳನದ ಉದ್ಘಾಟನ ಭಾಷಣ

ನಂದಾನೆನಪು, ಪು. ೧೫೧ - ೧೫೭

೧೯. ಥಳುಕಿಲ್ಲದ ತಳುಕಿನ ಮಹನೀಯರು

ಸವಿನೆನಪು, ಮೈಸೂರು, ೧೯೭೦; ನಂದಾನೆನಪು, ಪು. ೧೩೫ - ೧೩೮

೨೦. ನೆತ್ತಮನಾಡಿದರಾರು? (ಉತ್ತರಕ್ಕೆ ತಮಿಳುಭಾರತದ ನೆರವು)

ಕನ್ನಡ ನುಡಿ ೨-೪, ೧೯೩೯; ಜಯಕರ್ನಾಟಕ ೧೭-೧೧; ನಂದಾನೆನಪು, ಪು. ೬೭ - ೭೦

೨೧. ಮಹಾರಾಜ ಕಾಲೇಜಿನ ಕನ್ನಡಶಾಖೆ

ಶತಮಾನೋತ್ಸವಸ್ಮರಣಸಂಪುಟ ೧೯೫೧; ನಂದಾನೆನಪು, ಪು. ೧೨೨ - ೧೩೦

೨೨. ಮಾಸ್ತಿಯವರ ಮಾತುಗಾರಿಕೆ

ಜೀವನ ೧ - ೫ ; ನಂದಾನೆನಪು, ಪು. ೧೩೯-೧೪೪

೨೩. ಯಶೋಧರಚರಿತೆ

ಜಯಕರ್ನಾಟಕ ೧೩-೭, ಪು. ೪೩೮-೪೭

೨೪. ರನ್ನಕವಿ

ಕನ್ನಡ ನುಡಿ ೧೨-೭, ೧೩-೧-೧೯೫೦

೨೫. ರಾಮಾಯಣದಲ್ಲಿ ರಾಜ್ಯಶುಲ್ಕ

ಮೂರು ಬಣ್ಣ, ತುಮಕೂರು, ೧೯೭೧; ನಂದಾನೆನಪು, ಪು. ೫೭ - ೨

೨೬. ಶಿಲಪ್ಪದಿಕಾರಂ

ಪುಸ್ತಕ ಪ್ರಪಂಚ ೧-೭-೧೯೪೭; ನಂದಾನೆನಪು, ಪು. ೨೯೮೩೦೭

೨೭. ಶ್ರೀಕಂಠಸಮರ್ಥನೆ

ಪ್ರಜಾವಾಣಿ ೧-೨-೧೯೭೧ ; ನಂದಾನೆನಪು, ಪು. ೨೮೨-೨೮೫

೨೮. ಶ್ರೀ ಗೊಮ್ಮಟೇಶ್ವರ

ಕನ್ನಡ ನುಡಿ ೧-೯, ೧೯೩೮

೨೯. 'ಶ್ರೀ'ಯವರ ಜೀವನಪರಿಚಯ

ಕನ್ನಡ ನುಡಿ ೮-೧೨, ೧೯೪೬ ; ನಂದಾನೆನಪು, ಪು. ೧೩೧-೧೩೪

೩೦. ಶ್ರೀ ರಾಮಾನುಜಾಚಾರ್ಯರವರು

ಆಕಾಶವಾಣಿಭಾಷಣ ೩-೫-೧೯೪೯ ; ನಂದಾನೆನಪು, ಪು. ೨೯೨ - ೨೯೭

**೩. ಗ್ರೀಕ್ ಸಾಹಿತ್ಯ**

೩೧. ಅಗಮೆಮ್ನೋನ್

ಮೂರು ಗ್ರೀಕ್ ನಾಟಕಗಳು, ೧೯೬೫, ಪು. ೧೭-೨೫ ; ನಂದಾನೆನಪು ಪು. ೨೦೯-೨೧೭

೩೨. ಅಗಮೆಮ್ನೋನ್ (ಮುಂದುವರಿದುದು : ಕಥೆಯ ಬೆಳವಣಿಗೆ ಇ.)

ಏಲೆಕ್ಟ್ರ, ಫಿಲೊಕ್ತೇತೇಸ್, ೧೯೭೪, ಪು. ೫೩-೬೯

೩೩. ಅಂತಿಗೊನೆ

ಸೊಫೊಕ್ಲೇಸ್ ಮಹಾಕವಿಯ ಅಂತಿಗೊನೆ, ೧೯೫೬, ಪು.೭೮-೮೯; ನಂದಾನೆನಪು, ಪು. ೨೩೯-೨೪೭

೩೪. ಅಯ್‌ಸ್ಖುಲೊಸ್

ಮೂರು ಗ್ರೀಕ್ ನಾಟಕಗಳು, ೧೯೬೫, ಪು. ೧೩-೧೬ ; ನಂದಾನೆನಪು, ಪು. ೧೯೬ - ೧೯೯

೩೫. ಅರಿಸ್ತೊಫನೇಸ್

ಮೂರು ಗ್ರೀಕ್ ನಾಟಕಗಳು, ೧೯೬೫, ಪು. ೧೫೩-೫೫, ನಂದಾನೆನಪು, ಪು. ೨೦೬-೨೦೮

೩೬. ಒಯ್ದಿಪೌಸ್ ಕಥೆ (ಪರಿಷ್ಕೃತರೂಪದಲ್ಲಿ ಥೀಬ್ ಮತ್ತು ಈಡಿಪಸ್)

ಮೂರು ಗ್ರೀಕ್ ನಾಟಕಗಳು, ೧೯೬೫, ಪು. ೭೯-೮೯ .

೩೭. ಒಯ್ದಿಪೌಸ್ ದೊರೆ ನಾಟಕ

ಮೂರು ಗ್ರೀಕ್ ನಾಟಕಗಳು, ೧೯೬೫, ಪು. ೯೦-೯೪ ; ನಂದಾನೆನಪು. ಪು. ೨೩೪-೨೩೮

೩೮. ಗ್ರೀಕ್ ರುದ್ರನಾಟಕ - ೧

ಪ್ರಬುದ್ಧ ಕರ್ಣಾಟಕ ೧೯-೪, ೧೯೩೮, ಪು. ೧೧-೪೧ ; ಅಂತಿಗೊನೆ (ದ್ವಿಮು. ೧೯೫೬), ಪು. ೧೩-೪೭ ನಂದಾನೆನಪು, ಪು. ೧೫೮-೧೮೪

೩೯. ಗ್ರೀಕ್ ರುದ್ರನಾಟಕ - ೨

ಸಂಭಾವನೆ, ಬೆಂಗಳೂರು ೧೯೪೧, ಪು. ೪೬೯-೭೮; ನಂದಾನೆನಪು.ಪು. ೧೮೫-೧೯೫

೪೦. ಥೀಬ್ಸ್ ಮತ್ತು ಈಡಿಪಸ್

ಪ್ರಬುದ್ಧ ಕರ್ಣಾಟಕ, ೧೯-೨,೩, ೧೯೩೮, ಪು. ೬೨-೮೦; ಅಂತಿಗೊನೆ, ೧೯೫೬, ಪು. ೪೮-೬೯; ನಂದಾನೆನಪು. ೨೧೮-೨೩೩

೪೧. ಪೆರಿಕ್ಲೋಸ್ ಮಾಡಿದ ಭಾಷಣಗಳು

ಕನ್ನಡ ನುಡಿ ೩-೬, ೭, ನ, ೧೫, ೨೨, ೧೯೪೦ ; ನಂದಾನೆನಪು, ಪು. ೨೪೮-೨೬೦ ೪೨.

೪೨. ಫಿಲೊಕೇತೇಸ್

ಪೀಠಿಕೆ, ಏಲೆಕ್ತ್ರ - ಫಿಲೊಕ್ತೇತೇಸ್, ೧೯೭೪, ಪು. ೧೨೯-೨೩೯

೪೩. ಸೊಫೋಕ್ಲೇಸ್

ಅಂತಿಗೊನೆ, ೧೯೫೬, ಪು. ೭೦-೭೭; ನಂದಾನೆನಪು, ಪು. ೨೦೦-೨೦೫

## ೪. ಇಂಗ್ಲಿಷ್ ಲೇಖನಗಳು

೪೪. Adikavi Pampa

ನಂದಾನೆನಪು, ಉಷಾಸಾಹಿತ್ಯಮಾಲೆ, ಮೈಸೂರು, ೧೯೭೩, ಪು. ೩೭-೪೯

೪೫. Bharata Rama Samagama at Chitrakuta

ನಂದಾನೆನಪು, ೧೯೭೩, ಪು. ೫೦-೫೯

೪೬. Influence of Sanskrit on the Southern Indian Languages and Literatures

ನಂದಾನೆನಪು, ೧೯೭೩, ಪು. ೧-೮

೪೭. Note read at the Joint Inauguration of the South Indian Languages Sahitya Samitis on 6-3-1960. ನಂದಾನೆನಪು, ೧೯೭೩, ಪು. ೩೪-೩೬

೪೮. Ramanuja The Compassionate Manavala Mamunigal Souvenir -60th Birthday Celebration, 29-11-1970; ನಂದಾನೆನಪು, ೧೯೭೩, ಪು. ೬೦-೬೬

೪೯. Script Reform in Kannada

ನಂದಾನೆನಪು, ೧೯೭೩, ಪು. ೧೫-೨೦

೫೦. Technical Terminology in Indian Languages Karnataka Darshana, Bombay, 1955 ; ನಂದಾನೆನಪು, ೧೯೭೩, ಪು. ೨೧-೨೭

೫೧. The Language Problem in our universities Paper read at the All India Educational Conference at the Session held in Dec. 1948 : ನಂದಾನೆನಪು, ೧೯೭೩, ಪು. ೨೮-೩೩

೫೨. Translating Greek Plays into Indian Languages Gilbert Murray Centenary Volume, Delhi University; ನಂದಾನೆನಪು. ೧೯೭೩, ಪು. ೯-೧೪

೫೩. Unrecorded Tribute

Yojana, 5-10-1969; ನಂದಾನೆನಪು, ೧೯೭೩, ಪು. ೬೭ ಪು. ೬೦-೬೬.

***